# ಮಾರ್ಗಸೂಚಿ

# ಶಾಲೆಗಳಲ್ಲಿ 10 ದಿನಗಳ ಸಂಭ್ರಮ ಶನಿವಾರಗಳ ಅನುಷ್ಠಾನ









विद्यया ऽमृतमश्नुते

एन सी ई आर टी
NCERT

# ಶಾಲೆಗಳಲ್ಲಿ 10 ದಿನಗಳ ಸಂಭ್ರಮ ಶನಿವಾರಗಳ ಅನುಷ್ಠಾನದ ಮಾರ್ಗಸೂಚಿ

PSS ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ವೊಕೇಶನಲ್ ಎಜುಕೇಶನ್
(NCERT ಯ ಘಟಕ, ಶಿಕ್ಷಣ ಸಚಿವಾಲಯ, ಭಾರತ ಸರ್ಕಾರ)
ಶ್ಯಾಮಲ ಹಿಲ್ಸ್, ಭೂಪಾಲ್–462002, ಮಧ್ಯಪ್ರದೇಶ್, ಭಾರತ
www.psscive.ac.in

राष्ट्रीय शैक्षिक अनुसंधान और प्रशिक्षण परिषद्
NATIONAL COUNCIL OF EDUCATIONAL RESEARCH AND TRAINING

ಜುಲೈ 2024

ಶ್ರಾವಣ 1946

© ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ (NCERT) 2024

धर्मेन्द्र प्रधान
ଧର୍ମେନ୍ଦ୍ର ପ୍ରଧାନ
Dharmendra Pradhan

शिक्षा मंत्री
भारत सरकार
Minister of Education
Government of India



## ಸಂದೇಶ

ಎನ್.ಸಿ.ಇ.ಆರ್.ಟಿ ಯ ಘಟಕವಾದ ಪಂಡಿತ್ ಸುಂದರ್‌ಲಾಲ್ ಶರ್ಮ (PSS) ಸೆಂಟ್ರಲ್ ಇನ್ಸ್ಟಿಟ್ಯೂಟ್ ಆಫ್ ವೊಕೇಶನಲ್ ಎಜುಕೇಶನ್, ರಾಷ್ಟ್ರೀಯ ಶಿಕ್ಷಣ ನೀತಿ–2020 ರ ದೃಷ್ಟಿ ಕೋನಕ್ಕೆ ಅನುಗುಣವಾಗಿ 10 ಬ್ಯಾಗ್‌ಲೆಸ್ ದಿನಗಳ ಸಮಗ್ರ ಮಾರ್ಗಸೂಚಿಗಳನ್ನು ಅಭಿವೃದ್ಧಿಪಡಿಸಿರುವುದು ನನಗೆ ಸಂತೋಷ ನೀಡಿದೆ. ಈ ಘಟಕವು 10 ದಿನಗಳ ಅವಧಿಯನ್ನು ಸಾಂಪ್ರದಾಯಿಕ ಶಾಲಾ ಬ್ಯಾಗ್‌ಗಳು ಮತ್ತು ಸಾಂಪ್ರದಾಯಿಕ ತರಗತಿಯ ಪ್ರಕ್ರಿಯೆ ಇಲ್ಲದೆ ಕೇವಲ ಚಟುವಟಿಕೆ ಆಧಾರಿತ ಕಲಿಕೆಯನ್ನು ನೀಡಲು ಕಲ್ಪಿಸಲಾಗಿದೆ. ಈ ಶ್ಲಾಘನೀಯ ಉಪಕ್ರಮವು ಕಲಿಕೆಯನ್ನು ಸಂತೋಷದಾಯಕ, ಅನುಭವಾತ್ಮಕ ಮತ್ತು ಒತ್ತಡ ಮುಕ್ತವಾಗಿಸುತ್ತದೆ ಎಂದು ನನಗೆ ಖಾತ್ರಿ ಇದೆ.

ಇದರಿಂದಾಗಿ ಬ್ಯಾಗ್‌ಲೆಸ್ ಡೇಸ್‌ಗಾಗಿ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಲಾಗಿದೆ ಎಂದು ತಿಳಿಯಲು ನನಗೆ ಬಹಳ ಸಂತೋಷವಾಗಿದೆ. ಶಾಲಾ ವಿದ್ಯಾರ್ಥಿಗಳಿಗೆ ಅನುಭವಾತ್ಮಕ ಮತ್ತು ಪ್ರಾಯೋಗಿಕವಾಗಿ ಹೊರ ಜಗತ್ತಿಗೆ ತಮ್ಮನ್ನು ತೆರೆದುಕೊಳ್ಳಲು, ಸ್ಥಳೀಯ ಕುಶಲ ತಜ್ಞರೊಂದಿಗೆ ತೊಡಗಿಸಿಕೊಳ್ಳಲು, ಉತ್ಕೃಷ್ಟ ಚಟುವಟಿಕೆಗಳಾದ ಐತಿಹಾಸಿಕ, ಸಾಂಸ್ಕೃತಿಕ ಮತ್ತು ಪ್ರವಾಸಿ ಸ್ಥಳಗಳಿಗೆ ಭೇಟಿ ನೀಡಲು, ತಮ್ಮ ಗ್ರಾಮ/ ತಾಲೂಕು/ ಜಿಲ್ಲೆ/ ರಾಜ್ಯಗಳಲ್ಲಿರುವ ಸ್ಥಳೀಯ ಕಲಾವಿದರು ಮತ್ತು ಕರಕುಶಲಕರ್ಮಿಗಳನ್ನು ಭೇಟಿ ಮಾಡುವಂತೆ ಪ್ರೋತ್ಸಾಹಿಸುತ್ತದೆ.

ಈ ಪ್ರಸ್ತಾವಿಕ ಚಟುವಟಿಕೆಗಳು ಶಾಲಾ ವಿದ್ಯಾರ್ಥಿಗಳಿಗೆ ನಾವೀನ್ಯಯುತ ಕಲೆಗಳನ್ನು ಕಲಿಯುವಂತೆ ಸಹಾಯ ಮಾಡಲು, ಸ್ಥಳೀಯ ಕಲಾವಿದರು ಹಾಗೂ ಕರಕುಶಲಕರ್ಮಿಗಳೊಂದಿಗೆ ಸಂವಾದ ನಡೆಸುವ ಮೂಲಕ ಸಮುದಾಯದ ಸಾಂಸ್ಕೃತಿಕ ಮತ್ತು ಐತಿಹಾಸಿಕ ಮಹತ್ವವನ್ನು ಅರ್ಥೈಸಿಕೊಳ್ಳಲು, ಅವರ ಸುತ್ತಮುತ್ತಲಿನ ಪ್ರದೇಶಗಳಿಗೆ ಶೈಕ್ಷಣಿಕ ಪ್ರವಾಸ ಕೈಗೊಳ್ಳಲು ಸಹಾಯ ಮಾಡುತ್ತದೆ. ವಿದ್ಯಾರ್ಥಿಗಳು ತಮ್ಮ ಸಮಗ್ರ ಅಭಿವೃದ್ಧಿಗಾಗಿ ಪ್ರಾಯೋಗಿಕ ಜ್ಞಾನದ ಶುಷ್ಕ ಅನುಭವವನ್ನು ಪಡೆಯಲು ಈ ಪರಿವರ್ತಕ ಉಪಕ್ರಮವನ್ನು ಉತ್ತಮವಾಗಿ ಬಳಸಿಕೊಳ್ಳುತ್ತಾರೆ ಎಂದು ನಾಣು ಭಾವಿಸಿದ್ದೇನೆ.

ಈ ಮಾರ್ಗಸೂಚಿಗಳನ್ನು ಅಭಿವೃದ್ಧಿಪಡಿಸುವಲ್ಲಿ ಎನ್.ಸಿ.ಇ.ಆರ್.ಟಿ ಯ ಪ್ರಯತ್ನಗಳನ್ನು ನಾನು ಶ್ಲಾಘಿಸುತ್ತೇನೆ. ನಮ್ಮ ಯುವ ವಿದ್ಯಾರ್ಥಿಗಳಿಗೆ ಹೆಚ್ಚು ಉತ್ಕೃಷ್ಟ ಶೈಕ್ಷಣಿಕ ಅನುಭವವನ್ನು ಒದಗಿಸುವ ಆಸಕ್ತಿಯಿಂದ ಈ ನಾವೀನ್ಯಯುತ ವಿಧಾನವನ್ನು ಕಲಿಕೆಯಲ್ಲಿ ಅಳವಡಿಸಿಕೊಳ್ಳಲು ಎಲ್ಲಾ ಭಾಗೀದಾರರಿಗೆ ನಾನು ಕರೆ ನೀಡುತ್ತೇನೆ.

(ಧರ್ಮೇಂದ್ರ ಪ್ರಧಾನ್)

सबको शिक्षा, अच्छी शिक्षा

MOE - Room No. 301, 'C' Wing, 3rd Floor, Shastri Bhavan, New Delhi-110 001, Phone : 91-11-23782387, Fax : 91-11-23382365
E-mail : minister.sm@gov.in

जयन्त चौधरी
Jayant Chaudhary

कौशल विकास और उद्यमशीलता
राज्य मंत्री (स्वतंत्र प्रभार) एवं
शिक्षा राज्य मंत्री
भारत सरकार
Minister of State (Independent Charge)
Skill Development and Entrepreneurship;
Minister of State for Education
Government of India

सत्यमेव जयते



## ಸಂದೇಶ

ಎನ್ ಸಿ ಇ ಆರ್ ಟಿ ಯ ಘಟಕವಾದ PSS ಸೆಂಟ್ರಲ್ ಇನ್ಸ್ಟಿಟ್ಯೂಟ್ ಆಫ್ ವೊಕೇಶನಲ್ ಎಜುಕೇಶನ್, NEPಯ ಪ್ರಮುಖ ಘಟಕವಾಗಿದ್ದು ಬ್ಯಾಗ್‌ಲೆಸ್ ಡೇಸ್‌ಗಾಗಿ ಸಮಗ್ರ ಮಾರ್ಗಸೂಚಿಗಳನ್ನು ರಚಿಸಿದೆ. ಶಾಲೆಯ ವಿದ್ಯಾರ್ಥಿಗಳಿಗೆ ಸಾಂಪ್ರದಾಯಿಕ ಶಾಲಾ ದಿನಚರಿಗಳನ್ನು ಅನುಸರಿಸದೇ ಕೌಶಲಾಭಿವೃದ್ಧಿ ಬೆಳವಣಿಗೆಯನ್ನು ಒಳಗೊಂಡಂತ ಚಟುವಟಿಕೆಗಳನ್ನು ಒದಗಿಸುವ ನಿಟ್ಟಿನಲ್ಲಿ ಈ 10 ದಿನಗಳ ವಿಶಿಷ್ಟವಾದ ಕಾರ್ಯಕ್ರಮವನ್ನು ವಿನ್ಯಾಸಗೊಳಿಸಲಾಗಿದೆ.

ಬ್ಯಾಗ್ ಲೆಸ್ ಡೇಸ್ ಅವಧಿಯಲ್ಲಿ ವಿಧ್ಯಾರ್ಥಿಗಳು ಪಡೆಯುವ ಸ್ವಕಲಿಕೆಯ ಅನುಭವವು ಅವರ ಇಡೀ ಜೀವನಕ್ಕೆ ಪ್ರಾಯೋಗಿಕ ಜ್ಞಾನ ಮತ್ತು ಕೌಶಲಗಳನ್ನು ಒದಗಿಸುತ್ತದೆ. ಶಾಲೆಯ ಹೊರಗಿನ ಈ ರೀತಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ವಿದ್ಯಾರ್ಥಿಗಳು ಅವರ ಸ್ಥಳೀಯ ಸಮುದಾಯಗಳನ್ನು ಉಳಿಸುವ ಹಾಗೂ ಬೆಳೆಸುವ ಕೌಶಲಗಳನ್ನು ಆಳವಾಗಿ ಅರ್ಥೈಸಿಕೊಳ್ಳುವರು ಮತ್ತು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾರೆ.

ಕೌಶಲಾಭಿವೃದ್ಧಿಯು ಬ್ಯಾಗ್‌ಲೆಸ್ ಡೇಸ್‌ನ ಆಶಯವಾಗಿದೆ. ಆಧುನಿಕ ಜಗತ್ತಿನ ಸವಾಲುಗಳನ್ನು ಎದುರಿಸಲು ನಮ್ಮ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಕೌಶಲಾಧಾರಿತ ಶಿಕ್ಷಣದ ಮೇಲಿನ ಈ ಗಮನವು ನಿರ್ಣಾಯಕವಾಗಿದೆ. ಬ್ಯಾಗ್ ಲೆಸ್ ಡೇಸ್ ಕೇವಲ ಶೈಕ್ಷಣಿಕ ಉಪಕ್ರಮವಲ್ಲದೆ, ಸುಸಜ್ಜಿತ, ನುರಿತ ಮತ್ತು ಸಾಂಸ್ಕೃತಿಕವಾಗಿ ಅರಿವುಳ್ಳ ವ್ಯಕ್ತಿಗಳಾಗಿ ರೂಪಿಸುವ ಒಂದು ಆಂದೋಲನವಾಗಿದೆ.

6 ರಿಂದ 8 ನೇ ತರಗತಿಯ ವಿದ್ಯಾರ್ಥಿಗಳು ಬ್ಯಾಗ್‌ಲೆಸ್ ದಿನಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಈ ಉಪಕ್ರಮದಿಂದ ಹೆಚ್ಚಿನ ಅನುಕೂಲ ಪಡೆಯುವಂತೆ ನಾನು ಪ್ರೋತ್ಸಾಹಿಸುತ್ತೇನೆ. ನುರಿತ, ತಿಳುವಳಿಕೆಯುಳ್ಳ ಮತ್ತು ಸಮರ್ಥ ಪೀಳಿಗೆಯನ್ನು ರೂಪಿಸಲು ನಾವು ಒಟ್ಟಾಗಿ ಕೆಲಸ ಮಾಡೋಣ.

(ಜಯಂತ್ ಚೌಧರಿ)

सबका शिक्षा-अच्छी शिक्षा

कौशल भारत-कुशल भारत

MSDE-Room No. 201, 2nd Floor, Kaushal Bhawan, New Moti Bagh, New Delhi -110023 Phone: +91-11-26773201
E-mail : minister-msde@gov.in

संजय कुमार, भा.प्र.से
सचिव

Sanjay Kumar, IAS
Secretary

भारत सरकार
शिक्षा मंत्रालय
स्कूल शिक्षा और साक्षरता विभाग
Government of India
Ministry of Education
Department of School Education & Literacy



## ಸಂದೇಶ

ರಾಷ್ಟ್ರೀಯ ಶಿಕ್ಷಣ ನೀತಿ 2020 ಯೊಂದಿಗೆ ಸಂಯೋಜನೆಗೊಂಡ ಈ ಬ್ಯಾಗ್‌ಲೆಸ್ ಡೇ ಎಂಬ ನಾವಿನ್ಯಯುತ ಪರಿಕಲ್ಪನೆಯನ್ನು ನಮ್ಮ ಶಾಲಾ ಶಿಕ್ಷಣದಲ್ಲಿ ಪರಿಚಯಿಸಲು ನನಗೆ ಬಹಳ ಸಂತೋಷವಾಗಿದೆ. ಈ ಉಪಕ್ರಮವು ನಮ್ಮ ವಿದ್ಯಾರ್ಥಿಗಳ ಕಲಿಕೆಯ ಅನುಭವಗಳನ್ನು ಹೆಚ್ಚಿಸಲು ಮತ್ತು ಕಲಿಕೆಗೆ ಪೂರಕವಾಗಿಸುವ ಗುರಿಯನ್ನು ಹೊಂದಿದೆ.

ಬ್ಯಾಗ್‌ಲೆಸ್ ಡೇ ಪರಿಕಲ್ಪನೆಯು ಸಾಂಪ್ರದಾಯಿಕ ಕಲಿಕೆಯನ್ನು ಮರು ವ್ಯಾಖ್ಯಾನಿಸುತ್ತದೆ. ಈ ಉಪಕ್ರಮವು ಸಾಂಪ್ರದಾಯಿಕ ತರಗತಿಗಳ ಜೊತೆಗೆ ವಿದ್ಯಾರ್ಥಿಗಳು ವಿವಿಧ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಅವಕಾಶಗಳನ್ನು ಸೃಷ್ಟಿಸುತ್ತದೆ. ಎನ್.ಇ.ಪಿ 2020 ಕಲ್ಪನೆಯಂತೆ ಈ ಸೂಚಿಸಿದ ದಿನಗಳಲ್ಲಿ ವಿದ್ಯಾರ್ಥಿಗಳು ತಮ್ಮ ಸಮಗ್ರ ಅಭಿವೃದ್ಧಿಗೆ ಅವಶ್ಯಕವಾದ ಪ್ರಾಯೋಗಿಕ ಮತ್ತು ಅನುಭವಾತ್ಮಕ ಕಲಿಕೆಯನ್ನು ಅನ್ವೇಷಿಸುತ್ತಾರೆ.

ಬ್ಯಾಗ್‌ಲೆಸ್ ಡೇ ಯು ವಿದ್ಯಾರ್ಥಿಗಳಿಗೆ ವಿವಿಧ ಕೌಶಲಗಳನ್ನು ಪರಿಚಯಿಸಲು ಮತ್ತು ಆ ಕೌಶಲಗಳ ಅನುಭವ ನೀಡುವಲ್ಲಿ ಗಮನ ಹರಿಸುತ್ತದೆ. ಈ ವಿಧಾನವು ಅವರ ಪ್ರಾಯೋಗಿಕ ಜ್ಞಾನವನ್ನು ಹೆಚ್ಚಿಸುವುದಲ್ಲದೆ ಭವಿಷ್ಯದಲ್ಲಿ ವಿವಿಧ ವೃತ್ತಿ ಮಾರ್ಗಗಳಿಗೆ ಅವರನ್ನು ಸಿದ್ಧಪಡಿಸುತ್ತದೆ. ಅಂತಹ ನಾವಿನ್ಯಯುತ ಅಭ್ಯಾಸಗಳು ಹೆಚ್ಚು ಕ್ರಿಯಾತ್ಮಕ ಶೈಕ್ಷಣಿಕ ವಾತಾವರಣವನ್ನು ಬೆಳೆಸುತ್ತವೆ ಎಂಬ ವಿಶ್ವಾಸ ನನಗಿದೆ. ಇದು ನಮ್ಮ ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಜೀವನ ಕೌಶಲಗಳನ್ನು ಬೆಳೆಸುವಲ್ಲಿ ಹಾಗೂ ಅವರ ನೈಜ ಸಾಮರ್ಥ್ಯವನ್ನು ಕಂಡುಕೊಳ್ಳಲು ಸಹಾಯ ಮಾಡುತ್ತದೆ.

ನಮ್ಮ ಶಾಲೆಗಳಲ್ಲಿ ಬ್ಯಾಗ್‌ಲೆಸ್ ಡೇ ಯನ್ನು ಅಳವಡಿಸಲು ಮಾರ್ಗಸೂಚಿಗಳನ್ನು ಬೆಳೆಸುವಲ್ಲಿ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ (NCERT) ಯ ಘಟಕವಾದ PSS ಸೆಂಟ್ರಲ್ ಇನ್ಸ್ಟಿಟ್ಯೂಟ್ ಆಫ್ ವೊಕೇಶನಲ್ ಎಜುಕೇಶನ್ ನ ಪ್ರಯತ್ನಗಳನ್ನು ನಾನು ಪ್ರಶಂಸಿಸುತ್ತೇನೆ. ಈ ಮಾರ್ಗ ಸೂಚಿಗಳು ಸ್ಥಳೀಯ ವೃತ್ತಿಪರ ತಜ್ಞರೊಂದಿಗೆ ಕೆಲಸ ಮಾಡಲು ವಿದ್ಯಾರ್ಥಿಗಳಿಗೆ ಅವಕಾಶ ಒದಗಿಸುವ ಚಿಂತನೆಯನ್ನು ಮೂಡಿಸುತ್ತದೆ. ಶಾಲೆಯ ಹೊರಗಿನ ಚಟುವಟಿಕೆಗಳಿಗೆ ತೆರೆದುಕೊಳ್ಳುವುದರೊಂದಿಗೆ ವಿದ್ಯಾರ್ಥಿಗಳ ಒಟ್ಟಾರೆ ಅಭಿವೃದ್ಧಿಗೆ ಅಮೂಲ್ಯವಾದ ಪ್ರಾಯೋಗಿಕ ಅನುಭವವನ್ನು ನೀಡುತ್ತದೆ.

ಎಲ್ಲಾ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಈ ಮಾರ್ಗಸೂಚಿಗಳನ್ನು ತಮ್ಮ ಸ್ಥಳೀಯ ಸನ್ನಿವೇಶಕ್ಕೆ ಸೂಕ್ತವಾಗಿ ಅಳವಡಿಸಿಕೊಳ್ಳುವ ಮೂಲಕ ಅವುಗಳನ್ನು ಕಾರ್ಯಗತಗೊಳಿಸುತ್ತವೆ ಎಂದು ನನಗೆ ವಿಶ್ವಾಸವಿದೆ. ಇದರಿಂದ ನಾವು ನಮ್ಮ ವಿದ್ಯಾರ್ಥಿಗಳಿಗೆ ಸಂತಸದಾಯಕ ಮತ್ತು ಉತ್ತಮ ಗುಣಮಟ್ಟದ ಪ್ರಾಯೋಗಿಕ ಕಲಿಕೆಯ ಅನುಭವವನ್ನು ನೀಡಬಹುದು.

(ಸಂಜಯ್ ಕುಮಾರ್)

124 'सी' विंग, शास्त्री भवन, नई दिल्ली–110001
124 'C' Wing, Shastri Bhawan, New Delhi-110001
Telephone: +91-11-23382587, +91-11-23381104 Fax : +91-11-23387589
E-mail: secy.sel@nic.in

# ಮುನ್ನುಡಿ

ಈ ಮಾರ್ಗಸೂಚಿಯ ಮುಖ್ಯ ಉದ್ದೇಶವು ಶಾಲೆಯಲ್ಲಿ 10 ದಿನಗಳ ಬ್ಯಾಗ್ ರಹಿತ ದಿನದ ಅನುಷ್ಠಾನಕ್ಕೆ ಅಗತ್ಯ ಮಾರ್ಗದರ್ಶನಗಳನ್ನು ನೀಡುವ ಮೂಲಕ ವಿದ್ಯಾರ್ಥಿಗಳಿಗೆ ಸಂತಸದಾಯಕ ಮತ್ತು ಒತ್ತಡ-ಮುಕ್ತ ಕಲಿಕಾ ಅನುಭವವನ್ನು ನೀಡುವುದಾಗಿದೆ. ಶಾಲೆಯಲ್ಲಿ ಬ್ಯಾಗ್ ರಹಿತ ದಿನಗಳ ಕಲ್ಪನೆಯು ವಿದ್ಯಾರ್ಥಿಗಳಿಗೆ ಬ್ಯಾಗ್‌ನ ಹೊರೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಒಂದು ಹೆಗ್ಗುರುತಾಗಿದೆ. ಆದರೆ ಅದಕ್ಕಿಂತ ಮುಖ್ಯವಾಗಿ ಪ್ರತಿದಿನ ವಿದ್ಯಾರ್ಥಿಗಳು ಉತ್ಸಾಹದಿಂದ ಶಾಲೆಗೆ ಹೋಗುವ ಭಾವನೆಯನ್ನು ಮೂಡಿಸುವುದಾಗಿದೆ. ವಾಸ್ತವವಾಗಿ, ಶಿಕ್ಷಣವು ಎಲ್ಲಾ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವ, ಸಂತಸದಾಯಕವಾಗಿ ಚಟುವಟಿಕೆಯಾಗಿರಬೇಕು. ಎಲ್ಲಾ **3H– Head, Hand** ಮತ್ತು **Heart** ಗಳನ್ನು ಬಳಸಿಕೊಂಡು ಪ್ರಾಯೋಗಿಕ ಚಟುವಟಿಕೆಗಳ ಮೂಲಕ ಎಲ್ಲಾ ವಿದ್ಯಾರ್ಥಿಗಳು ಅರ್ಥಪೂರ್ಣ ಭಾಗವಹಿಸುವಿಕೆಯ ಸಂದರ್ಭದಲ್ಲಿ ಶಿಕ್ಷಣದ ವೃತ್ತಿಪರತೆಯ ಸ್ಪರ್ಶವನ್ನು ಹೇಗೆ ವಿವರಿಸುತ್ತದೆ ಎಂಬುದರಲ್ಲಿ ಬ್ಯಾಗ್ ರಹಿತ ದಿನಗಳ ಅರ್ಥ ಅಡಗಿದೆ. ಎಲ್ಲಾ ವಿದ್ಯಾರ್ಥಿಗಳು ಸಮಾನ ಸಮನ್ವಯ ಕಲಿಕಾ ಸನ್ನಿವೇಶದಲ್ಲಿ ತಮ್ಮನ್ನು ಸಂಪೂರ್ಣವಾಗಿ ಅಭಿವ್ಯಕ್ತಪಡಿಸಲು ಅವರಿಗೆ ಸಾಕಷ್ಟು ಅವಕಾಶವನ್ನು ಒದಗಿಸುವುದಾಗಿದೆ.

ಈ ಮಾರ್ಗಸೂಚಿಯು ನಿರ್ದಿಷ್ಟ ವಿಭಾಗವನ್ನು ಒಳಗೊಂಡಂತೆ ಅನುಷ್ಠಾನದ ಎಲ್ಲಾ ಪ್ರಮುಖ ಅಂಶಗಳನ್ನು ಒಳಗೊಂಡಿದೆ. ಇದು ಸಂಭ್ರಮ ಶನಿವಾರ (ಬ್ಯಾಗ್‌ಲೆಸ್ ಡೇ) ಚಟುವಟಿಕೆಗಳಿಗೆ ಪರಿಗಣಿಸಬೇಕಾದ ವಿವಿಧ ಆಯಾಮಗಳನ್ನು ವಿವರಿಸುತ್ತದೆ. ಕಲಿಕಾ ಫಲಗಳು ಮತ್ತು ವಿಧಾನಗಳನ್ನು ಅಭಿವೃದ್ಧಿಪಡಿಸಬಹುದಾದ ಕೌಶಲಗಳು ಇತ್ಯಾದಿಗಳಂತಹ ಎಲ್ಲಾ ಅಂಶಗಳನ್ನು ಒಳಗೊಂಡಂತೆ ಸೂಚಿತ ಚಟುವಟಿಕೆಗಳನ್ನು ತುಂಬಾ ಮುತುವರ್ಜಿಯಿಂದ ವಿನ್ಯಾಸಗೊಳಿಸಲಾಗಿದೆ. ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಚಟುವಟಿಕೆಗಳನ್ನು ನಿರ್ವಹಿಸುವಾಗ ಅವರ ಪಾತ್ರಗಳನ್ನು ಅರ್ಥಮಾಡಿಕೊಳ್ಳಲು ಅವರಿಗೆ ನಿರ್ದಿಷ್ಟ ಸೂಚನೆಗಳನ್ನು ನೀಡಲಾಗಿದೆ. ಮಕ್ಕಳ ಪ್ರತಿಭೆಯನ್ನು ಪ್ರಶಂಸಿಸುವುದು ಮತ್ತು ಅವರ ಸೃಜನಶೀಲ ಪ್ರವೃತ್ತಿಯಲ್ಲಿ ನಂಬಿಕೆ ಮತ್ತು ಅನುಭವಗಳಿಂದ ವಿದ್ಯಾರ್ಥಿಗಳ ಜ್ಞಾನವನ್ನು ಹೆಚ್ಚಿಸುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದಾಗಿದೆ.

ಶೈಕ್ಷಣಿಕ ವ್ಯವಸ್ಥೆಯು ರಾಷ್ಟ್ರೀಯ ಶಿಕ್ಷಣ ನೀತಿ 2020 ರ ಉದ್ದೇಶವನ್ನು ಅರಿತುಕೊಳ್ಳಲು ಸ್ಥಳೀಯ ಜ್ಞಾನ ಮತ್ತು ಸಾಂಪ್ರದಾಯಿಕ ಕೌಶಲಗಳನ್ನು ಅಳವಡಿಸಿಕೊಳ್ಳುವುದು ಮುಖ್ಯವಾಗಿದೆ. ಚಟುವಟಿಕೆಗಳನ್ನು ನಿರ್ವಹಿಸುವಾಗ ಶಿಕ್ಷಕರು ಮಾರ್ಗಸೂಚಿಗಳಲ್ಲಿ ತಿಳಿಸಿರುವ ವಿಚಾರಗಳನ್ನು ಮುಕ್ತವಾಗಿ ಬಳಸಲು ಮತ್ತು ಸಾಧ್ಯವಾದಷ್ಟು ಸುಲಭವಾಗಿ ಬದಲಾವಣೆಗಳನ್ನು ಮಾಡಿಕೊಳ್ಳಲು ಅವರಿಗೆ ಅವಕಾಶ ಕಲ್ಪಿಸಿಕೊಡಲಾಗಿದೆ. ಶಿಕ್ಷಕರು ತಮ್ಮ ಸ್ಥಳೀಯ ಸೊಗಡನ್ನು ಸೇರಿಸಬಹುದಾಗಿದ್ದು, ಸಾಂಸ್ಕೃತಿಕ ಮೌಲ್ಯಗಳನ್ನು ಬೆಳೆಸಲು ಮಗುವಿನ ಮನೆ ಮತ್ತು ಸಮುದಾಯದ ಪರಿಸರಕ್ಕೆ ಪೂರಕವಾಗುವಂತಹ ಉತ್ತೇಜಕ ಶಾಲಾ ಪರಿಸರದಿಂದಲೂ ತೆಗೆದುಕೊಳ್ಳಬಹುದು ಎಂದು ಸೂಚಿಸಲಾಗಿದೆ.

ಈ ಮಾರ್ಗಸೂಚಿಯು ಶಾಲೆಗಳು ಚಟುವಟಿಕೆಗಳನ್ನು ವ್ಯವಸ್ಥಿತ ರೀತಿಯಲ್ಲಿ ಕಾರ್ಯಗತಗೊಳಿಸಲು ಸಹಾಯ ಮಾಡುತ್ತದೆ. ವೈವಿಧ್ಯಮಯ, ಸೃಜನಾತ್ಮಕ ಕಲಿಕೆಯ ಅನುಭವಗಳು ವಿದ್ಯಾರ್ಥಿಗಳ ಕಲಿಕೆಗೆ ಹೆಚ್ಚಿನ ಮಹತ್ವವನ್ನು ನೀಡುತ್ತವೆ, ಏಕೆಂದರೆ ಶಿಕ್ಷಕರು ವಿದ್ಯಾರ್ಥಿಗಳ ಕುತೂಹಲ ಮತ್ತು ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಲು ಅವರಿಗೆ ಅವಕಾಶಗಳನ್ನು ನೀಡುತ್ತಾರೆ, ಈ ಮಾರ್ಗಸೂಚಿಯ ಎಲ್ಲಾ ಬಳಕೆದಾರರು ಮತ್ತು ರಾಜ್ಯ, ಕೇಂದ್ರಾಡಳಿತ ಪ್ರದೇಶಗಳ ಶಾಲೆಗಳು ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಲು ಪ್ರೋತ್ಸಾಹಿಸಲಾಗುತ್ತದೆ. ಚಟುವಟಿಕೆಗಳು ಹೇಗೆ ನಡೆದಿವೆ ಎಂಬುದರ ಕುರಿತು ನಮಗೆ ಹಿಮ್ಮಾಹಿತಿ ನೀಡಲು ತಿಳಿಸುತ್ತದೆ ಮತ್ತು ಪ್ರಚಲಿತ ಲೋಕ್ ವಿದ್ಯಾ ಮತ್ತು ಸ್ಥಳೀಯ ಭಾಷೆಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳು ತಮ್ಮ ಸೃಜನಶೀಲ ಕೆಲಸವನ್ನು ಹಂಚಿಕೊಳ್ಳಲು ಮತ್ತು ಶಾಲೆಯನ್ನು ಸಂತಸದಾಯಕ ಕಲಿಕಾ ಸ್ಥಳವನ್ನಾಗಿಸಲು ಬಳಸುವ ನಾವೀನ್ಯಯುತ ವಿಧಾನಗಳನ್ನು ನಮ್ಮೊಂದಿಗೆ ಹಂಚಿಕೊಳ್ಳಲು ತಿಳಿಸಲಾಗಿದೆ.

ದಿನೇಶ್ ಪ್ರಸಾದ್ ಸಕ್ಲಾನಿ
ನಿರ್ದೇಶಕರು
ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ
ಮತ್ತು ತರಬೇತಿ ಸಂಸ್ಥೆ

ನವದೆಹಲಿ
ಜುಲೈ 2024

# ಶಾಲೆಗಳಲ್ಲಿ 10 ದಿನಗಳ ಸಂಭ್ರಮ ಶನಿವಾರ ಅನುಷ್ಠಾನಕ್ಕೆ ಮಾರ್ಗಸೂಚಿ

## ಸಲಹೆ ಮತ್ತು ಮಾರ್ಗದರ್ಶನ

ಶ್ರೀ ನಾಗರಾಜಯ್ಯ ಸಿ.ಆರ್
ಪ್ರಾಂಶುಪಾಲರು
ಡಯಟ್, ಮೈಸೂರು

ಶ್ರೀ ರಾಜಶೇಖರ್
ಹಿರಿಯ ಉಪನ್ಯಾಸಕರು
ಡಯಟ್, ಮೈಸೂರು

ಶ್ರೀಮತಿ ಪುಷ್ಪಲತಾ ಕೆ ಎಂ
ಹಿರಿಯ ಉಪನ್ಯಾಸಕರು
ಡಯಟ್, ಮೈಸೂರು

ಶ್ರೀಮತಿ ಯಶೋಧ ಆರ್
ಮೆಂಟರ್, ಉಪನ್ಯಾಸಕರು
ಡಯಟ್, ಮೈಸೂರು

ಶ್ರೀಮತಿ ನಿರ್ಮಲ ಎಂ ವಿ
ಉಪನ್ಯಾಸಕರು
ಡಯಟ್, ಮೈಸೂರು

ಶ್ರೀಮತಿ ಸವಿತ ಕೆ
ಉಪನ್ಯಾಸಕರು
ಡಯಟ್, ಮೈಸೂರು

ಶ್ರೀ ಶಶಿಧರ್ ಆರ್ ಎಂ
ಉಪನ್ಯಾಸಕರು
ಡಯಟ್, ಮೈಸೂರು

## ಪರಿಶೀಲಕರು

ಶ್ರೀಮತಿ ಅಖಿಲಾಂಡೇಶ್ವರಿ
ಪರಿಶೀಲಕರು, ಹಿರಿಯ ಉಪನ್ಯಾಸಕರು
ಡಯಟ್, ಮೈಸೂರು

## ಸಂಪನ್ಮೂಲ ವ್ಯಕ್ತಿಗಳು

ಶ್ರೀಮತಿ ಶಿವಮ್ಮ ಡಿ
ಸಹಶಿಕ್ಷಕರು
ಸ. ಪ್ರೌ. ಶಾಲೆ, ಹುಲ್ಲಹಳ್ಳಿ, ನಂಜನಗೂಡು

ಶ್ರೀ ನವೀನ ಬಿ.ಆರ್
ಸಹಶಿಕ್ಷಕರು
ಸ. ಪ್ರೌ. ಶಾಲೆ, ಡಿ.ಎಂ.ಜಿ.ಹಳ್ಳಿ, ಮೈಸೂರು ತಾ॥

ಶ್ರೀಮತಿ ವಾಣಿ ಬಿ.ಆರ್
ಸಹಶಿಕ್ಷಕರು
ಸ. ಪ್ರೌ. ಶಾಲೆ, ಕುಕ್ಕರಹಳ್ಳಿ, ಮೈಸೂರು ಉತ್ತರ

ಶ್ರೀಮತಿ ಶಿಲ್ಪಶ್ರೀ ಜಿ.ಎಸ್
ಸಹಶಿಕ್ಷಕರು
ಕೆ.ಪಿ.ಎಸ್. ಕುವೆಂಪುನಗರ, ಮೈಸೂರು ದಕ್ಷಿಣ

ಶ್ರೀಮತಿ ಮಾಧವಿ
ಸಹಶಿಕ್ಷಕರು
ಸ.ಪ್ರೌ.ಶಾಲೆ, ಕೀಳನಪುರ, ಮೈಸೂರು ತಾ॥

ಶ್ರೀ ಪ್ರಾಣೇಶ್ ಕೆ ದೇಶಪಾಂಡೆ
ಸಹಶಿಕ್ಷಕರು
ಸ.ಪ್ರೌ.ಶಾಲೆ, ಕೈಲಾಸಪುರ, ಮೈಸೂರು ಉತ್ತರ

ಶ್ರೀಮತಿ ಲಕ್ಷ್ಮಿ ಬಿ.ಟಿ
ಸಹಶಿಕ್ಷಕರು
ಸ. ಕಿ. ಪ್ರಾ. ಶಾಲೆ ಶಾಂತಿನಗರ, ಮೈಸೂರು ಉತ್ತರ

ಶ್ರೀ ಮಹೇಶ್
ಸಹಶಿಕ್ಷಕರು
ಸ. ಹಿ. ಪ್ರಾ. ಶಾಲೆ ಉದ್ಬೂರು, ಮೈಸೂರು ತಾ॥

## ವಿನ್ಯಾಸ

ಶ್ರೀ ಮಹೇಶ್‌ಬಾಬು ಹೆಚ್ ಆರ್
ಸಿ.ಆರ್.ಪಿ., ವರುಣ
ಮೈಸೂರು ಗ್ರಾಮಾಂತರ

# ಪ್ರಸ್ತಾವನೆ

ರಾಷ್ಟ್ರೀಯ ಶಿಕ್ಷಣ ನೀತಿ 2020 ರ ಆಶಯದಂತೆ, ಈ ಮಾರ್ಗಸೂಚಿಯು ಬಹುಶಿಸ್ತೀಯ ವಿಧಾನದ ಮೂಲಕ ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಗೆ ಸ್ಪಷ್ಟ ದೃಷ್ಟಿಕೋನವನ್ನು ಒದಗಿಸುವ ಪ್ರಮುಖ ಉಪಕ್ರಮಗಳಲ್ಲಿ ಒಂದಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿ 2020 ರ ಅಡಿಯಲ್ಲಿ ವೃತ್ತಿಪರ ಶಿಕ್ಷಣಕ್ಕೆ ಒತ್ತು ನೀಡುವುದು, ಕಲಿಕೆ ಮತ್ತು ಪ್ರಾಯೋಗಿಕ ಕೌಶಲ ಸಾಧನೆಯ ನಡುವೆ ಸೇತುವೆಯಾಗುವಂತಹ ಗುರಿಯನ್ನು ಹೊಂದಿದೆ.

ರಾಷ್ಟ್ರೀಯ ಶಿಕ್ಷಣ ನೀತಿ 2020 (ಪ್ಯಾರಾ 4.20) ಪ್ರಕಾರ, ಪ್ರತಿ ವಿದ್ಯಾರ್ಥಿಯು 6 ರಿಂದ 8 ತರಗತಿಗಳಲ್ಲಿ ಕ್ರೀಡೆ ಮತ್ತು ಸಂತಸದಾಯಕ ಕೋರ್ಸ್ ಗಳನ್ನು ತೆಗೆದುಕೊಳ್ಳುತ್ತಾರೆ. ರಾಜ್ಯ ಮತ್ತು ಸ್ಥಳೀಯ ಸಮುದಾಯ ನಿರ್ಧರಿತ ಹಾಗೂ ಸ್ಥಳೀಯ ಕೌಶಲದ ಅಗತ್ಯತೆಗಳ ಅನುಸಾರ, ಮರಗೆಲಸ, ವಿದ್ಯುತ್ ಕೆಲಸ, ಲೋಹದ ಕೆಲಸ, ತೋಟಗಾರಿಕೆ, ಕುಂಬಾರಿಕೆ, ಇತ್ಯಾದಿಗಳಂತಹ ಪ್ರಮುಖ ವೃತ್ತಿಪರ ಮತ್ತು ಕರಕುಶಲ ವಸ್ತುಗಳ ಮಾದರಿ ತಯಾರಿಕೆ ಕುರಿತ ಮಾಹಿತಿ ಮತ್ತು ಅನುಭವವನ್ನು ನೀಡುತ್ತದೆ.

ರಾಷ್ಟ್ರೀಯ ಶಿಕ್ಷಣ ನೀತಿ 2020 ರ ಈ ಶಿಫಾರಸ್ಸಿನ ಅನುಸರಣೆಯಂತೆ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ (NCERT) ಯಿಂದ ಸೂಕ್ತವಾಗಿ ವಿನ್ಯಾಸಗೊಳಿಸಲಾದ 6–8 ನೇ ತರಗತಿಗಳಿಗಾಗಿ ಅಭ್ಯಾಸ ಆಧಾರಿತ ಪಠ್ಯಕ್ರಮವನ್ನು ನಾವು ಶಿಫಾರಸ್ಸು ಮಾಡುತ್ತೇವೆ. NCERT ಯು ಶಾಲೆಗಳಿಗಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು ಹೊರತಂದಿದ್ದು 2023 ರ ಶಿಕ್ಷಣವು ಅಭ್ಯಾಸ ಆಧಾರಿತ ಮತ್ತು ಶಿಕ್ಷಕರಿಗೆ ಪೂರಕವಾಗಿಬೇಕೆಂದು ಆಶಿಸುತ್ತದೆ.

6 ರಿಂದ 8 ನೇ ತರಗತಿಗಳಲ್ಲಿ 10 ದಿನಗಳ ಸಂಭ್ರಮ ಶನಿವಾರ (ಬ್ಯಾಗ್‌ಲೆಸ್ ಡೇ) ಅವಧಿಯಲ್ಲಿ ಈ ಉಪಕ್ರಮ ಅತ್ಯಗತ್ಯ ಅಂಶವಾಗಿದೆ, ಅಲ್ಲಿ ವಿದ್ಯಾರ್ಥಿಗಳು ಸ್ಥಳೀಯ ಪರಿಣಿತರೊಂದಿಗೆ ಚರ್ಚಿಸಲು ಅವಕಾಶವನ್ನು ಹೊಂದಿರುತ್ತಾರೆ. ನೈಜ ಪರಿಸರದಲ್ಲಿ ವಿದ್ಯಾರ್ಥಿಗಳನ್ನು ತಲ್ಲೀನಗೊಳಿಸಲು ಈ ಅನುಭವವನ್ನು ವಿನ್ಯಾಸಗೊಳಿಸಲಾಗಿದೆ. ವಿವಿಧ ವೃತ್ತಿ ವಿವರಗಳನ್ನು ಅರ್ಥಮಾಡಿಕೊಳ್ಳಲು ಅನುವು ಮಾಡಿಕೊಡುತ್ತದೆ. ಇದು ವಿದ್ಯಾರ್ಥಿಗಳು ವಿವಿಧ ಉದ್ಯೋಗಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸಬಹುದೆಂದು ಖಾತ್ರಿಪಡಿಸುತ್ತದೆ. ಇದರಿಂದ ವೃತ್ತಿಪರ ಕೌಶಲಗಳ ಜ್ಞಾನವನ್ನು ಪಡೆಯುವಲ್ಲಿ ಸಹಕಾರಿಯಾಗಿದೆ. ಈ ಮಾರ್ಗಸೂಚಿಯಲ್ಲಿ ನೀಡಿರುವ 10 ದಿನಗಳ ಬ್ಯಾಗ್ ರಹಿತ ಚಟುವಟಿಕೆಯನ್ನು ಕ್ರಮಬದ್ಧವಾಗಿ ಕಾರ್ಯಗತಗೊಳಿಸಲು ಶಾಲೆಗಳಿಗೆ ಸಹಾಯ ಮಾಡಿ, ಕಾರ್ಯಕ್ರಮವು ಸುಗಮವಾಗಿ ಮತ್ತು ಪರಿಣಾಮಕಾರಿಯಾಗಿ ನಡೆಯುವುದನ್ನು ಖಚಿತಪಡಿಸುತ್ತದೆ.

ಈ ಮಾರ್ಗಸೂಚಿ "ಶಾಲೆಯಲ್ಲಿ 10 ದಿನಗಳ ಸಂಭ್ರಮ ಶನಿವಾರ (ಬ್ಯಾಗ್‌ಲೆಸ್ ಡೇ) ಅನುಷ್ಠಾನಕ್ಕೆ ಮಾರ್ಗಸೂಚಿಗಳು" ಇದನ್ನು ಪಿಎಸ್‌ಎಸ್ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ವೊಕೇಶನಲ್ ಎಜುಕೇಶನ್‌ನ ಅಧ್ಯಾಪಕರು ಮತ್ತು ಇದರ ವ್ಯವಸ್ಥಿತ ಅನುಷ್ಠಾನಕ್ಕೆ ಅನುಕೂಲವಾಗುವಂತೆ ಇತರ ಅನೇಕ ಸಂಸ್ಥೆಗಳು ಅಭಿವೃದ್ಧಿಪಡಿಸಿದ್ದಾರೆ. ಈ ದಾಖಲೆಯ ಉಪಯುಕ್ತತೆಯನ್ನು ಅದರ ಬಳಕೆದಾರರಾದ ತಮ್ಮಿಂದ ಮಾತ್ರ ನಿರ್ಣಯಿಸಬಹುದು. ಬಳಕೆದಾರರು ನೀಡಿದ ಪ್ರತಿಕ್ರಿಯೆಯು ಹೆಚ್ಚು ಮೌಲ್ಯಯುತವಾಗಿದ್ದು ಭವಿಷ್ಯದಲ್ಲಿ ಸೂಕ್ತ ಸಮಯದಲ್ಲಿ ಪರಿಷ್ಕೃತ ಆವೃತ್ತಿಯನ್ನು ಹೊರತರುವಲ್ಲಿ ಬಹಳ ಮಹತ್ವದ್ದಾಗಿದೆ.

ದೀಪಕ್ ಪಲಿವಾಲ್
ಜಂಟಿ ನಿರ್ದೇಶಕರು
ಎಸ್‌ಎಸ್ ಸೆಂಟ್ರಲ್ ಇನ್ಸಿಟ್ಯೂಟ್ ಆಫ್
ವೊಕೇಶನಲ್ ಎಜುಕೇಶನ್

ಭೋಪಾಲ್ ಪಿ
ಜುಲೈ 2024

## ಮಾರ್ಗಸೂಚಿಗಳ ಕುರಿತು

ರಾಷ್ಟ್ರೀಯ ಶಿಕ್ಷಣ ನೀತಿ 2020 ರ ವೃತ್ತಿಪರ ಶಿಕ್ಷಣಕ್ಕೆ ಪರಿವರ್ತನಾ ವಿಧಾನವನ್ನು ಪರಿಚಯಿಸುತ್ತದೆ. ಕನಿಷ್ಠ 50 ಪ್ರತಿಶತದಷ್ಟು ವಿದ್ಯಾರ್ಥಿಗಳಿಗೆ 6 ನೇ ತರಗತಿಯಿಂದ ವೃತ್ತಿಪರ ವಿಷಯಗಳನ್ನು ನೀಡುವ ಗುರಿಯನ್ನು ಹೊಂದಿದೆ. ಈ ಉಪಕ್ರಮವು ಶೈಕ್ಷಣಿಕ ಕಲಿಕೆಯೊಂದಿಗೆ ಪ್ರಾಯೋಗಿಕ ಕೌಶಲ ಅಭಿವೃದ್ಧಿಯನ್ನು ಸಂಯೋಜಿಸುವ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ಪ್ರಾಯೋಗಿಕ ಕೌಶಲಗಳನ್ನು ಗೌರವಿಸುವ ಮತ್ತು ಆಧುನಿಕ ಪ್ರಪಂಚದ ಸವಾಲುಗಳಿಗೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸುವ ಶಿಕ್ಷಣ ವ್ಯವಸ್ಥೆಯನ್ನು ರಚಿಸುವ ನಿಟ್ಟಿನಲ್ಲಿ ನಾವು ಮಹತ್ವದ ಹೆಜ್ಜೆ ಇಡುತ್ತಿದ್ದೇವೆ.

ರಾಷ್ಟ್ರೀಯ ಶಿಕ್ಷಣ ನೀತಿ 2020 ರ ಪ್ಯಾರಾ 4.26 ರಂತೆ, 6 ರಿಂದ 8 ನೇ ತರಗತಿಗಳಲ್ಲಿ ಕಲಿಯುವ ಪ್ರತಿಯೊಬ್ಬ ವಿದ್ಯಾರ್ಥಿಯು ಫನ್ ಕೋರ್ಸ್ ಅನ್ನು ತೆಗೆದುಕೊಳ್ಳುತ್ತಾರೆ, ಇದು ಮರಗೆಲಸ, ವಿದ್ಯುತ್ ಕೆಲಸ, ಲೋಹದ ಕೆಲಸ, ತೋಟಗಾರಿಕೆ, ಕುಂಬಾರಿಕೆ ಮುಂತಾದ ಪ್ರಮುಖ ವೃತ್ತಿಪರ ಕರಕುಶಲ ವಸ್ತುಗಳ ಮಾದರಿ ಸಮೀಕ್ಷೆ ಮತ್ತು ತಯಾರಿಕೆಯ ಅನುಭವವನ್ನು ನೀಡುತ್ತದೆ. ರಾಜ್ಯ ಮತ್ತು ಸ್ಥಳೀಯ ಸಮುದಾಯಗಳು ನಿರ್ಧರಿಸಿದಂತೆ ಮತ್ತು ಕಾರ್ಯಕ್ರಮವನ್ನು ಕಾರ್ಯಗತಗೊಳಿಸಲು ಸ್ಥಳೀಯ ಕೌಶಲಗಳ ಅಗತ್ಯಗಳಿಗೆ ತಕ್ಕಂತೆ ಉಪಕ್ರಮಗಳನ್ನು ರೂಪಿಸುವುದು. PSSCIVE 6 ರಿಂದ 8 ನೇ ತರಗತಿಯ ವಿದ್ಯಾರ್ಥಿಗಳನ್ನು ಗುರಿಯಾಗಿಟ್ಟುಕೊಂಡು ಶಾಲೆಯಲ್ಲಿ 10 ಸಂಭ್ರಮ ಶನಿವಾರ ದಿನಗಳನ್ನು (ಬ್ಯಾಗ್‌ಲೆಸ್ ಡೇ) ಜಾರಿಗೆ ತರಲು ಮಾರ್ಗಸೂಚಿಗಳನ್ನು ಅಭಿವೃದ್ಧಿಪಡಿಸಿದೆ, ಇದರಿಂದಾಗಿ ಪ್ರತಿ ವಿದ್ಯಾರ್ಥಿಯು ಶಿಕ್ಷಣದ ಈ ನಾವೀನ್ಯಯುತ ವಿಧಾನದಿಂದ ಪ್ರಯೋಜನ ಪಡೆಯುವ ಅವಕಾಶವನ್ನು ಹೊಂದಿದ್ದು, ಅವರಿಗೆ ಯಶಸ್ವಿ ಭವಿಷ್ಯಕ್ಕಾಗಿ ಅಗತ್ಯವಾದ ಕೌಶಲ ಮತ್ತು ಜ್ಞಾನವನ್ನು ನೀಡಬೇಕಿದೆ.

ಈ ಸಂಸ್ಥೆಯು ರಾಜ್ಯಗಳಾದ್ಯಂತ ಶಾಲೆಗಳಲ್ಲಿ ಈ ಮಾರ್ಗಸೂಚಿಗಳನ್ನು ಜಾರಿಗೊಳಿಸಿದೆ. ಅಲ್ಲಿ ಶಿಕ್ಷಕರು, ವೃತ್ತಿಪರ ತಜ್ಞರು ಮತ್ತು ವಿವಿಧ ಭಾಗಿದಾರರಿಂದ ಮೌಲ್ಯಯುತವಾದ ಸಲಹೆಗಳನ್ನು ನಾವು ಸ್ವೀಕರಿಸಿದ್ದೇವೆ. ಅವರೆಲ್ಲರೂ ಅದರ ಉದ್ದೇಶವನ್ನು ಸಾಧಿಸುವಲ್ಲಿ ಈ ಕೈಪಿಡಿಯು ಪರಿಣಾಮಕಾರಿಯಾಗಿರುವುದನ್ನು ಕಂಡುಕೊಂಡಿದ್ದಾರೆ. ಭಾಗಿದಾರರ ಸಲಹೆ ಹಾಗೂ ಮಾರ್ಗದರ್ಶನಗಳು ಇದನ್ನು ಪರಿಷ್ಕರಿಸಲು ಮತ್ತು ಪ್ರಾಯೋಗಿಕ, ಪರಿಣಾಮಕಾರಿ ಮತ್ತು ಸುಲಭವಾಗಿ ಕಾರ್ಯಗತಗೊಳಿಸಲು ಸಹಾಯ ಮಾಡುತ್ತದೆ. ಈ ಪ್ರಾಯೋಗಿಕ ಯೋಜನೆಯು ವಿದ್ಯಾರ್ಥಿಗಳ ಆಸಕ್ತಿ ಮತ್ತು ವೃತ್ತಿಪರ ಕೌಶಲಗಳನ್ನು ಕಲಿಕೆಯಲ್ಲಿ ತೊಡಗಿಸಿಕೊಳ್ಳುವಿಕೆಯ ಮೇಲೆ ಸಂಭ್ರಮ ಶನಿವಾರ (ಬ್ಯಾಗ್‌ಲೆಸ್) ದಿನಗಳ ಧನಾತ್ಮಕ ಪ್ರಭಾವವನ್ನು ಅಪೇಕ್ಷಿಸಬಹುದಾಗಿದೆ.

ನಾವು ಈ ಪರಿಷ್ಕೃತ ಮಾರ್ಗಸೂಚಿಗಳನ್ನು ಪ್ರಕಟಿಸುತ್ತಿದ್ದಂತೆ, ಎಲ್ಲರಿಂದ ಕಾರ್ಯಕ್ರಮದ ಸುಧಾರಣೆಗೆ ಸಲಹೆಗಳನ್ನು ನಾವು ಸ್ವಾಗತಿಸುತ್ತೇವೆ. ನಿಮ್ಮ ಪ್ರತಿಕ್ರಿಯೆಯನ್ನು ಹೆಚ್ಚು ಪ್ರಶಂಸಿಸಲಾಗುತ್ತದೆ ಮತ್ತು ಮಾರ್ಗಸೂಚಿಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಈ ಬದಲಾವಣೆಯ ಪರ್ವದಲ್ಲಿ ನಿಮ್ಮ ಸಕ್ರಿಯ ಭಾಗವಹಿಸುವಿಕೆ ಮತ್ತು ಬೆಂಬಲಕ್ಕಾಗಿ ನಾವು ಎದುರು ನೋಡುತ್ತಿದ್ದೇವೆ.

ಸೌರಭ್ ಪ್ರಕಾಶ್
ಪ್ರೊಫೆಸರ್ ಮತ್ತು ಕಾರ್ಯಕ್ರಮ ಸಂಯೋಜಕರು
PSS ಸೆಂಟ್ರಲ್ ಇನ್ಸ್ಟಿಟ್ಯೂಟ್ ಆಫ್ ವೊಕೇಶನಲ್ ಎಜುಕೇಶನ್

ಭೋಪಾಲ್
ಜುಲೈ 2024

## ಅಂಗೀಕಾರಗಳು / ಮನ್ನಣೆಗಳು

ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಸಂಸ್ಥೆ (NCERT) ಹಾಗೂ ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದ (MoE) ಮಾರ್ಗಸೂಚಿಗಳ ಪರಿಶೀಲನೆಗಾಗಿ ತಜ್ಞರು ಮತ್ತು ಅಧಿಕಾರಿಗಳ ಅಮೂಲ್ಯವಾದ ಮಾರ್ಗದರ್ಶನ ಮತ್ತು ಕೊಡುಗೆಗಳನ್ನು ಅಂಗೀಕರಿಸಿದೆ. ಸಂಜಯ್ ಕುಮಾರ್ ಕಾರ್ಯದರ್ಶಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ (DoSEL). ಶಿಕ್ಷಣ ಸಚಿವಾಲಯ (MoE) ಭಾರತ ಸರ್ಕಾರ, ರವರಿಗೆ ಪರಿಷತ್ತು ಕೃತಜ್ಞತೆಯನ್ನು ಸಲ್ಲಿಸುತ್ತದೆ. ಆನಂದರಾವ್ ವಿಷ್ಣು ಪಾಟೀಲ್ ಹೆಚ್ಚುವರಿ ಕಾರ್ಯದರ್ಶಿ (PMPY & ಡಿಜಿಟಲ್ ಶಿಕ್ಷಣ ಬ್ಯೂರೋ). DoSEL, MoE, ಅಮರ್‌ಪ್ರೀತ್ ದುಗ್ಗಲ್, ಜಂಟಿ ಕಾರ್ಯದರ್ಶಿ (ಕೋರ್ಡ್ & ಮೀಡಿಯಾ), DoSEL, MoE, ಪ್ರಾಚಿ ಪಾಂಡೆ, ಜಂಟಿ ಕಾರ್ಯದರ್ಶಿ (I&T), DoSEL, MoE: ವಿನಾಯಕ್ ಗಾರ್ಗ್. ಆಯುಕ್ತರು, ಎನ್ ವಿ ಎಸ್. ನವದೆಹಲಿ, ಸರೋಜ್ ಶರ್ಮಾ, ಅಧ್ಯಕ್ಷರು, NIOS, ನವದೆಹಲಿ, ಸುನಿತಿ ಸನ್ವಾಲ್, ವಿಭಾಗೀಯ ಮುಖ್ಯಸ್ಥರು. ಪ್ರಾಥಮಿಕ ಶಿಕ್ಷಣ ಇಲಾಖೆ, NCERT, ನವದೆಹಲಿ, ಪ್ರಗ್ಯಾ. ಎಂ. ಸಿಂಗ್ ನಿರ್ದೇಶಕರು (ಶೈಕ್ಷಣಿಕ), CBSE, ನವದೆಹಲಿ. ಆರ್‌ಪಿ ಸಿಂಗ್, ಜಂಟಿ ಕಾರ್ಯದರ್ಶಿ (ಕೌಶಲ ಶಿಕ್ಷಣ), ಸಿಬಿಎಸ್‌ಇ, ನವದೆಹಲಿ, ಪಿ ದೇವಕುಮಾರ್. ಜಂಟಿ ಆಯುಕ್ತರು (ಶೈಕ್ಷಣಿಕ), ಕೆವಿಎಸ್, ನವದೆಹಲಿ. ಎಲ್ ಬಿ ಶರ್ಮಾ ಸಹಾಯಕ ಆಯುಕ್ತರು (ಶೈಕ್ಷಣಿಕ). ಕೆವಿಎಸ್, ನವದೆಹಲಿ: ಮುನೇಶ್ ಚಂದ್ರ ಪ್ರೊಫೆಸರ್. PSSCIVE ಭೋಪಾಲ್. ಸಂಖಾ ರಾಯ್. ಉಪ ಕಾರ್ಯದರ್ಶಿ, DoSEL, MoE ಮತ್ತು ಸಮೀರ್ ಡೇನಿಯಲ್. ಮುಖ್ಯ ಸಲಹೆಗಾರ DoSEL, MoE. ಮಾರ್ಗಸೂಚಿಯಲ್ಲಿ ಬಳಸಲಾದ ಚಿತ್ರಗಳನ್ನು ಕ್ರಿಯೇಟಿವ್ ಕಾಮನ್ಸ್ ಪರವಾನಗಿಯಿಂದ ಪಡೆಯಲಾಗಿದೆ ಮತ್ತು ಅವುಗಳ ಲಿಂಕ್‌ಗಳನ್ನು ಕ್ರೆಡಿಟ್ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಈ ಮಾರ್ಗಸೂಚಿಯನ್ನು ಅಭಿವೃದ್ಧಿ ಪಡಿಸುವಲ್ಲಿ ಬೆಂಬಲ ಮತ್ತು ಮಾರ್ಗದರ್ಶನ ನೀಡಿದ್ದಕ್ಕಾಗಿ ಭೋಪಾಲ್‌ನ ಪಿಎಸ್‌ಎಸ್ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ವೊಕೇಶನಲ್ ಎಜುಕೇಶನ್ (PSSCIVE) ಜಂಟಿ ನಿರ್ದೇಶಕ ದೀಪಕ್ ಪಲಿವಾಲ್ ಅವರಿಗೆ ಆಯೋಜಕ ಮಂಡಳಿಯು ಧನ್ಯವಾದಗಳನ್ನು ಅರ್ಪಿಸುತ್ತದೆ. ಅವರ ಪ್ರಾಮಾಣಿಕ ಪ್ರಯತ್ನಗಳಿಗಾಗಿ ಮಂಡಳಿ ಪ್ರೊಫೆಸರ್ ಮತ್ತು ಪಠ್ಯಕ್ರಮ ಅಧ್ಯಯನ ವಿಭಾಗದ ಮುಖ್ಯಸ್ಥರಾದ ರಂಜನಾ ಅರೋರಾ ಅವರಿಗೆ ಕೃತಜ್ಞತೆಯನ್ನು ಅರ್ಪಿಸುತ್ತದೆ. ಈ ಮಾರ್ಗಸೂಚಿಯ ಅಂತಿಮ ಪರಿಶೀಲನೆಯನ್ನು ಸಂಯೋಜಿಸುವಲ್ಲಿ ಈ ಮಂಡಳಿ, ಸೌರಭ್ ಪ್ರಕಾಶ್ ಪ್ರೊಫೆಸರ್, ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ, ಕಖಖಅಖಗಇ, ಭೋಪಾಲ್, ರವರಿಗೆ ಈ ಮಾರ್ಗಸೂಚಿಯ ಅಭಿವೃದ್ಧಿ ಮತ್ತು ಪ್ರಕಟಣೆಯಲ್ಲಿ ಅವರ ಅವಿರತ ಪ್ರಯತ್ನಗಳು, ಮಾರ್ಗದರ್ಶನ ಮತ್ತು ಸಹಾಯಕ್ಕಾಗಿ ಕೃತಜ್ಞತೆಯನ್ನು ಸಲ್ಲಿಸುತ್ತದೆ.

ಗೃಹ ವಿಜ್ಞಾನ ಮತ್ತು ಹಾಸ್ಪಿಟಾಲಿಟಿ ಮ್ಯಾನೇಜ್‌ಮೆಂಟ್ ವಿಭಾಗದ ಪ್ರೊಫೆಸರ್ ಪಿಂಕಿ ಖನ್ನಾ, ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ವಿಭಾಗದ ಸುರೇಂದ್ರ ಕುಮಾರ್, ಹಿರಿಯ ಸಂಶೋಧನಾ ಸಹಾಯಕರ ಅಮೂಲ್ಯ ಕೊಡುಗೆಗಳನ್ನು ಮಂಡಳಿಯು ಗುರುತಿಸಿದೆ. PSSCIVE, ಭೋಪಾಲ್. ಗ್ರಾಫಿಕ್ ಡಿಸೈನರ್ ಮೊಹಮ್ಮದ್ ಅವರ ಪ್ರಯತ್ನಗಳು, ಪುಟ ವಿನ್ಯಾಸಕ್ಕಾಗಿ ಶಫೀಕ್ ಮತ್ತು ಕವರ್ ಪೇಜ್ ವಿನ್ಯಾಸಕ್ಕಾಗಿ ನಿಪುನ್ ಜೈನ್ ಸಹಕರಿಸಿದ್ದು ಮಂಡಳಿ ಪುರಸ್ಕರಿಸಿದೆ.

ಸೋಮ ಚಂದ್ರ, ಸಂಪಾದಕ (ಗುತ್ತಿಗೆ), ದ್ವೈಪಾಯನ್ ಉಪಾಧ್ಯಾಯ, ಪ್ರೂಫ್ ರೀಡರ್ (ಗುತ್ತಿಗೆ), ಮತ್ತು ಡಿಟಿಪಿ ಆಪರೇಟರ್ ವಿವೇಕ್ ಮಂಡಲ್ (ಗುತ್ತಿಗೆ) ಅವರ ಕೊಡುಗೆಗಳನ್ನು ಸ್ಮರಿಸುತ್ತದೆ. ಪ್ರಕಟಣೆ ವಿಭಾಗವಾದ ಎನ್‌ಸಿಇಆರ್‌ಟಿ ಈ ಕೈಪಿಡಿಗೆ ಅದರ ಅಂತಿಮರೂಪವನ್ನು ನೀಡಿದ್ದು ಪ್ರಶಂಸನಾರ್ಹವಾಗಿದೆ.

## ಕಾರ್ಯನಿರ್ವಾಹಕ ಸಾರಾಂಶ

ಕಲೆಗಳು, ರಸಪ್ರಶ್ನೆಗಳು, ಕ್ರೀಡೆಗಳು ಮತ್ತು ವೃತ್ತಿಪರ ಕರಕುಶಲ ಕಲೆಗಳನ್ನೊಳಗೊಂಡ ವಿವಿಧ ರೀತಿಯ ಚಟುವಟಿಕೆಗಳಿಗೆ ವರ್ಷವಿಡೀ ಸಂಭ್ರಮ ಶನಿವಾರ (ಬ್ಯಾಗ್‌ಲೆಸ್ ಡೇ) ದಿನಗಳನ್ನು ಪ್ರೋತ್ಸಾಹಿಸಲಾಗುವುದು ಎಂದು ರಾಷ್ಟ್ರೀಯ ಶಿಕ್ಷಣ ನೀತಿ 2020 ಶಿಫಾರಸು ಮಾಡಿದೆ. ಐತಿಹಾಸಿಕ ಮತ್ತು ಸಾಂಸ್ಕೃತಿಕ ಪ್ರಾಮುಖ್ಯತೆಯ ಸ್ಥಳಗಳಿಗೆ ಭೇಟಿ ನೀಡುವ ಮೂಲಕ, ಸ್ಥಳೀಯ ಕಲಾವಿದರು ಮತ್ತು ಕುಶಲಕರ್ಮಿಗಳನ್ನು ಭೇಟಿ ಮಾಡುವ ಮೂಲಕ ಮತ್ತು ಅವರ ಗ್ರಾಮ/ತೆಹಸಿಲ್/ಜಿಲ್ಲೆ/ರಾಜ್ಯ (NEP 2020, ಪ್ಯಾರಾ 4.261) ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡುವ ಮೂಲಕ ಮಕ್ಕಳಿಗೆ ಶಾಲೆಯ ಹೊರಗಿನ ಚಟುವಟಿಕೆಗಳಿಗೆ ನಿಯತಕಾಲಿಕವಾಗಿ ಮಾನ್ಯತೆ ನೀಡಲಾಗುವುದು.

ಎಲ್ಲಾ ವಿದ್ಯಾರ್ಥಿಗಳು 10–ದಿನದ ಸಂಭ್ರಮ ಶನಿವಾರ (ಬ್ಯಾಗ್‌ಲೆಸ್ ಡೇ) ಅವಧಿಯಲ್ಲಿ ಭಾಗವಹಿಸುತ್ತಾರೆ. ಅವರು 6–8 ನೇ ತರಗತಿಗಳಲ್ಲಿ ಸ್ಥಳೀಯ ವೃತ್ತಿಪರ ತಜ್ಞರಾದ ಬಡಗಿಗಳು, ತೋಟಗಾರರು, ಕುಂಬಾರರು, ಕಲಾವಿದರು, ಇತ್ಯಾದಿ (NEP 2020, ಪ್ಯಾರಾ 4.26) ರವರೊಂದಿಗೆ ವೃತ್ತಿಪರ ಕಲಿಕೆಗೆ ಪೂರಕವಾದ ಜ್ಞಾನವನ್ನು ಪಡೆಯಬಹುದಾಗಿದೆ.

ಸಂಭ್ರಮ ಶನಿವಾರ (ಬ್ಯಾಗ್‌ಲೆಸ್ ಡೇ) ಚಟುವಟಿಕೆಗಳನ್ನು ಹ್ಯಾಂಡ್ಸ್ ಆನ್ ಪ್ರ್ಯಾಕ್ಟಿಸ್ ಮೂಲಕ ಸಂವಾದಾತ್ಮಕ ಕಲಿಕೆಯನ್ನು ಪ್ರೇರೇಪಿಸಲು ವಿನ್ಯಾಸಗೊಳಿಸಲಾಗಿದೆ. ವಿದ್ಯಾರ್ಥಿಗಳಿಗೆ ವಿವಿಧ ಶೈಕ್ಷಣಿಕ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶ ನೀಡುತ್ತದೆ. ಈ ಚಟುವಟಿಕೆಗಳು ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಕೌಶಲಗಳನ್ನು ಅಭಿವೃದ್ಧಿಪಡಿಸಲು ಮತ್ತು ಹೊಸ ಆಸಕ್ತಿಗಳನ್ನು ಅನ್ವೇಷಿಸಿ ಕಲಿಕೆಯನ್ನು ಆನಂದಿಸುವಂತೆ ಮಾಡುತ್ತದೆ. ರಾಷ್ಟ್ರೀಯ ಶಿಕ್ಷಣ ನೀತಿ 2020 ಕ್ಕೆ ಅನುಗುಣವಾಗಿ, ಈ ಉಪಕ್ರಮವು ವಿಮರ್ಶಾತ್ಮಕ ಚಿಂತನೆ, ಸೃಜನಶೀಲತೆ ಮತ್ತು ಸಮಸ್ಯೆ–ಪರಿಹರಿಸುವ ಮೂಲಕ ಅನುಭವಾತ್ಮ ಕಲಿಕೆಗೆ ಒತ್ತು ನೀಡುತ್ತದೆ ಹೊರತು ಕಂಠಪಾಠದ ಕಲಿಕೆಗಲ್ಲ. ಸಂಭ್ರಮ ಶನಿವಾರ (ಬ್ಯಾಗ್‌ಲೆಸ್ ಡೇ) ಭವಿಷ್ಯದ ಸವಾಲುಗಳಿಗೆ ಮತ್ತು ವಿದ್ಯಾರ್ಥಿಗಳ ಜೀವನೋಪಾಯಕ್ಕೆ ಅವರನ್ನು ಸಜ್ಜುಗೊಳಿಸುವ ಶಿಕ್ಷಣವನ್ನು ಒದಗಿಸುವ ಗುರಿಯನ್ನು ಹೊಂದಿದೆ.

ಈ ಕೈಪಿಡಿ 10 ಸಂಭ್ರಮ ಶನಿವಾರ (ಬ್ಯಾಗ್‌ಲೆಸ್ ಡೇ) ದಿನಗಳ ಅನುಷ್ಠಾನದ ಪ್ರಮುಖ ಅಂಶಗಳನ್ನು ಒಳಗೊಂಡಿದೆ. ಮಾರ್ಗದರ್ಶಿ ವಿಭಾಗವು 10 ಸಂಭ್ರಮ ಶನಿವಾರ (ಬ್ಯಾಗ್‌ಲೆಸ್ ಡೇ) ದಿನಗಳವರೆಗೆ ಮಾರ್ಗದರ್ಶಿ ಸೂತ್ರಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಪರಿಗಣಿಸಬೇಕಾದ ವಿವಿಧ ಆಯಾಮಗಳನ್ನು ಸೂಚಿಸುತ್ತದೆ ಮತ್ತು ಚಟುವಟಿಕೆಗಳನ್ನು ಯೋಜಿಸಲು ಮತ್ತು ನಿರ್ವಹಿಸಲು ಶಿಕ್ಷಕರಿಗೆ ಮಾರ್ಗದರ್ಶನವನ್ನು ನೀಡಲಾಗಿದೆ. ಈ ಮಾರ್ಗಸೂಚಿಯು ಚಟುವಟಿಕೆಗಳನ್ನು ವ್ಯವಸ್ಥಿತ ರೀತಿಯಲ್ಲಿ ಕಾರ್ಯಗತಗೊಳಿಸಲು ಶಾಲೆಗಳಿಗೆ ಸಹಾಯ ಮಾಡುತ್ತದೆ.

# ABBREVIATIONS

| | |
|---|---|
| **GER** | Gross Enrolment Ratio |
| **MoE** | Ministry of Education |
| **ASER** | Annual Survey of Education Report |
| **MSDE** | Ministry of Skill Development and Entrepreneurship |
| **PMKVY** | Pradhan Mantri Kaushal Vikas Yojana |
| **NSDC** | National Skill Development Corporation |
| **NEP** | National Education Policy 2020 |
| **NCERT** | National Council of Educational Research and Training |
| **NCFSE** | National Curriculum Framework for School Education |
| **ITI** | Industrial Training Institutes |
| **PMKK** | Pradhan Mantri Kaushal Kendras |
| **VET** | Vocational Education and Training |
| **NSQF** | National Skill Qualifications Framework |
| **UT** | Union Territories |
| **NGO** | Non Government Organisations |
| **MoU** | Memorandum of Understanding |
| **HEIs** | Higher Education Institutions |
| **CwSN** | Children with Special Needs |
| **GoI** | Government of India |
| **SCERT** | State Council of Educational Research and Training |

# ಪರಿಭಾಷೆ

| | |
|---|---|
| **ಮೌಲ್ಯಾಂಕನ:** | ಕೋರ್ಸನ್ನು ಅಧ್ಯಯನ ಮಾಡುವಾಗ ಮತ್ತು ನಂತರ ವಿದ್ಯಾರ್ಥಿಗಳ ಕಲಿಕೆ ಮತ್ತು ವಿಕಾಸಕ್ಕೆ ಸಂಬಂಧಿಸಿದಂತೆ ವ್ಯವಸ್ಥಿತವಾದ ತೀರ್ಮಾನವನ್ನು ಕೈಗೊಳ್ಳಲು ಆಧಾರವಾಗಿರುವುದೇ ಮೌಲ್ಯಾಂಕನ. |
| **ಸಾಮಾರ್ಥ್ಯ :** | ಸಾಮರ್ಥ್ಯ, ಜ್ಞಾನ, ಕೌಶಲಗಳು, ಸಾಧನೆ ಮತ್ತು ಮನೋಧೋರಣೆಗಳ ಅಗತ್ಯ ಮಿಶ್ರಣವನ್ನು ಸಾಮರ್ಥ್ಯವು ಉಲ್ಲೇಖಿಸುತ್ತದೆ. ಇದು ವಿಭಿನ್ನ ಕಲಿಕಾರ್ಥಿಗಳಿಗೆ ಶಿಕ್ಷಕರು ಪರಿಣಾಮಕಾರಿಯಾಗಿ ಬೋಧಿಸಲು ಮೌಲ್ಯಂಕನ ಮಾಡಲು ಮತ್ತು ಬೆಂಬಲ ನೀಡಲು ವ್ಯಾಖ್ಯಾನಿಸಲಾದ ಕಲಿಕಾ ಫಲಗಳ ಸಾಧನೆಗಳನ್ನು ಖಾತ್ರಿಪಡಿಸುತ್ತದೆ. |
| **ಮಾರ್ಗಸೂಚಿಗಳು:** | ಮಾರ್ಗಸೂಚಿಗಳು ದಾಖಲೆಗಳಲ್ಲಿರುವ ಸೂಚನೆಗಳಾಗಿದ್ದು ಶಾಲೆಗಳಲ್ಲಿ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಹೇಗೆ ಕಾರ್ಯಗತಗೊಳಿಸುತ್ತವೆ ಎಂಬುದನ್ನು ತೋರಿಸುತ್ತವೆ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಿಸಲು ಆಡಳಿತಗಾರರು ಮತ್ತು ಶಿಕ್ಷಕರಿಗೆ ಸ್ಪಷ್ಟ ನಿರ್ದೇಶನ ಮತ್ತು ಬೆಂಬಲವನ್ನು ಒದಗಿಸುತ್ತದೆ. |
| **ಇಂಟರ್ನ್‌ಶಿಪ್:** | ಇಂಟರ್ನ್‌ಶಿಪ್ ಉದ್ಯೋಗಕ್ಕೆ ಸಮಂಜಸವಾದ ಸೀಮಿತ ಕೌಶಲಗಳ ಗುಚ್ಛಗಳನ್ನು ಒಳಗೊಂಡಿದೆ. |
| **ಕೌಶಲ:** | ಕೌಶಲವು ತರಬೇತಿ ಮತ್ತು ಅನುಭವದ ಮೂಲಕ ಸ್ವಾಧೀನ ಪಡಿಸಿಕೊಂಡಿರುವ ಪ್ರಾಯೋಗಿಕ ಸಾಮರ್ಥ್ಯವಾಗಿದೆ ಇದು ಪರಿಣಿತಿ ಮತ್ತು ಪ್ರಾವೀಣ್ಯತೆಯನ್ನು ಸೂಚಿಸುತ್ತದೆ ಮತ್ತು ಆಯ್ಕೆ ಮಾಡಿದ ವೃತ್ತಿಯಲ್ಲಿ ನಿರ್ದಿಷ್ಟ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಅನುವು ಮಾಡಿಕೊಡುತ್ತದೆ. |
| **ಶಿಕ್ಷಕ:** | ಶಿಕ್ಷಕ ಎಂದರೆ ವೈಯಕ್ತಿಕವಾಗಿ ಬೋಧನಾ ವಿಧಾನ ಮತ್ತು ವೃತ್ತಿಪರ ಕೌಶಲಗಳು ಹಾಗೂ ಅನುಭವಗಳೊಂದಿಗೆ ವಿದ್ಯಾರ್ಥಿಗಳಿಗೆ ಬೋಧಿಸುವವರು |
| **ಶಿಕ್ಷಕ ಸಂಯೋಜಕರು:** | ಸಂಯೋಜಕರು ಶೈಕ್ಷಣಿಕ ಕಾರ್ಯಗಳಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ಕಾರ್ಯಗತಗೊಳಿಸುವ ಮತ್ತು ಅನುಷ್ಠಾನ ಜವಾಬ್ದಾರಿಯುತ ವ್ಯಕ್ತಿ |
| **ತರಬೇತುದಾರ:** | ತರಬೇತುದಾರರು ಬೋಧನಾ ವಿಧಾನ ವೃತ್ತಿಪರ ಕೌಶಲಗಳು ಮತ್ತು ಅನುಭವಗಳಿಂದ ಪ್ರಾಯೋಗಿಕ ಮತ್ತು ಸೈದ್ಧಾಂತಿಕ ತರಬೇತಿಯನ್ನು ನೀಡುವ ಹಾಗೂ ಶಿಕ್ಷಣ ನೀಡುವ ವ್ಯಕ್ತಿ. |
| **ವೃತ್ತಿಪರ ಶಿಕ್ಷಣ ಮತ್ತು ತರಬೇತಿ:** | ವೃತ್ತಿಪರ ಶಿಕ್ಷಣ ಮತ್ತು ತರಬೇತಿಯು ಸೈದ್ಧಾಂತಿಕ ಬೋಧನೆಯ ಸಂಯೋಜನೆಯ ಮೂಲಕ ನೀಡಲಾದ ವ್ಯಾಪಾರ ಮತ್ತು ಉದ್ಯಮದಲ್ಲಿ ನಿರ್ದಿಷ್ಟ ಉದ್ಯೋಗಕ್ಕಾಗಿ ನೀಡುವ ಶಿಕ್ಷಣವಾಗಿದೆ ಇದು ತರಬೇತಿ ಮತ್ತು ಪ್ರಾಯೋಗಿಕ ಅನುಭವಗಳ ಆಧಾರವಾಗಿದೆ |
| **ವೃತ್ತಿಪರ ಶಿಕ್ಷಣ ಶಾಸ್ತ್ರ :** | ವೃತ್ತಿಪರ ಶಿಕ್ಷಣ ಶಾಸ್ತ್ರವು ವಿಜ್ಞಾನ ಕಲೆ ಮತ್ತು ಕರಕುಶಲ ವಿಷಯಗಳ ಬೋಧನೆ ಮತ್ತು ಕಲಿಕೆಯಾಗಿದೆ |
| **ಕಾರ್ಯ ಯೋಜನೆ:** | ಕಾರ್ಯ ಯೋಜನೆಯು ಶಿಕ್ಷಕರು ನೀಡುವ ಚಟುವಟಿಕೆಗಳು ಯಾವಾಗ ಸಂಭವಿಸಬೇಕು ಮತ್ತು ಹೇಗೆ ಮಾಡಬೇಕು ಎಂಬುದನ್ನು ತೋರಿಸುತ್ತದೆ ಇದು ವಿದ್ಯಾರ್ಥಿಗಳಿಗೆ ಚಟುವಟಿಕೆಗಳನ್ನು ವ್ಯವಸ್ಥಿತ ರೀತಿಯಲ್ಲಿ ಕಾರ್ಯಗತಗೊಳಿಸಲು ಸಹಾಯ ಮಾಡುತ್ತದೆ |

## ಪರಿವಿಡಿ


| | |
|---|---|
| ಮುನ್ನುಡಿ | ix |
| ಪ್ರಸ್ತಾವನೆ | xi |
| ಮಾರ್ಗಸೂಚಿಯ ಕುರಿತು | xii |
| ಕಾರ್ಯನಿರ್ವಾಹಕ ಸಾರಾಂಶ | xiv |
| ಪೀಠಿಕೆ | 1 |
| 10 ಬ್ಯಾಗ್‌ಲೆಸ್ ಡೇಸ್ ಗಳ ಉದ್ದೇಶಗಳು | 4 |
| ವಿಧಾನಶಾಸ್ತ್ರ | 4 |
| ವಾರ್ಷಿಕ ಕೆಲಸದ ಯೋಜನೆಯನ್ನು ಅಭಿವೃದ್ಧಿಪಡಿಸುವುದು | 6 |
| ವಾರ್ಷಿಕ ಕಾರ್ಯಯೋಜನೆಯ ಅನುಷ್ಠಾನ | 7 |
| ಸಂಪನ್ಮೂಲಗಳು | 10 |
| ಸಮಯದ ಹಂಚಿಕೆ | 10 |
| ಮೌಲ್ಯಾಂಕನ ಮತ್ತು ಮೌಲ್ಯಮಾಪನ | 10 |
| ವಿಶೇಷ ಅಗತ್ಯವಿರುವ CWSN ಅಥವಾ Divyang ಹೊಂದಿರುವ ಮಕ್ಕಳ ಕಾಳಜಿ | 11 |
| ಉದಾಹರಣೆಗಳೊಂದಿಗೆ ಚಟುವಟಿಕೆಗಳ ಸೂಚಿತ ಪಟ್ಟಿ | 11 |


### ವಿಭಾಗ ಎ – ವಿಜ್ಞಾನ ಪರಿಸರ ಮತ್ತು ತಂತ್ರಜ್ಞಾನ


| | |
|---|---|
| 1. ಪಕ್ಷಿಧಾಮಕ್ಕೆ ಭೇಟಿ | 14 |
| 2. ಮಣ್ಣು ಪರೀಕ್ಷೆ | 16 |
| 3. ನೀರಿನ ಪರೀಕ್ಷೆ | 18 |
| 4. ಗೋ ಗ್ರೀನ್ ಕುರಿತು ಸೈಕಲ್ ರಾಲಿ | 20 |
| 5. ನಿಮ್ಮ ಶಾಲೆಯ ಸುತ್ತ ಗಿಡ ಮರಗಳು ಮತ್ತು ಪಕ್ಷಿಗಳ ಗುರುತಿಸುವಿಕೆ | 22 |
| 6. ಮರದ ಕೆಳಗಿನ ಬಿಡಾರ | 24 |
| 7. ಸೌರಶಕ್ತಿ ಉದ್ಯಾನವನಕ್ಕೆ ಭೇಟಿ | 26 |
| 8. ಜೈವಿಕ ಅನಿಲ ಘಟಕಕ್ಕೆ ಭೇಟಿ | 28 |
| 9. ಸಾಕುಪ್ರಾಣಿಗಳ ಆರೈಕೆಯ ಸಮೀಕ್ಷೆ ಮತ್ತು ವರದಿ | 30 |
| 10. ಕೃತಕ ಬುದ್ಧಿಮತ್ತೆ/ಡೇಟಾ ಸೈನ್ಸ್/ ರೋಬೋಟಿಕ್ಸ್ ಕುರಿತು ತಜ್ಞರ ಉಪನ್ಯಾಸ | 32 |
| 11. ಸೈಬರ್ ಭದ್ರತೆ ಕುರಿತು ತಜ್ಞರ ಚರ್ಚೆ | 34 |
| 12. ಹತ್ತಿರದ ಡ್ರೋನ್ ತರಬೇತಿ ಕೇಂದ್ರಕ್ಕೆ ಭೇಟಿ | 35 |
| 13. ಸ್ಥಳೀಯ ಕಸ ಸಂಗ್ರಹಣೆ ಸ್ಥಳಕ್ಕೆ ಭೇಟಿ | 37 |


### ವಿಭಾಗ ಬಿ: ಸಾರ್ವಜನಿಕ ಕಛೇರಿಗಳು ಸ್ಥಳೀಯ ಕೈಗಾರಿಕೆಗಳು ಮತ್ತು ವ್ಯವಹಾರಗಳು


| | |
|---|---|
| 14. ಗ್ರಾಮ ಭೇಟಿ | 41 |
| 15. ಗ್ರಾಮ ಪಂಚಾಯತ್ ಕಛೇರಿಗೆ ಭೇಟಿ | 43 |
| 16. ಆಸ್ಪತ್ರೆ ಭೇಟಿ | 45 |
| 17. ಅಂಚೆ ಕಛೇರಿಗೆ ಭೇಟಿ | 47 |

18. ದತ್ತಿ (ಚಾರಿಟಬಲ್) ಸಂಸ್ಥೆಗಳಿಗೆ ಭೇಟಿ 49
19. ರೈಲ್ವೆ ನಿಲ್ದಾಣಕ್ಕೆ ಭೇಟಿ 51
20. ರಕ್ಷಣಾ/ಪೊಲೀಸ್ ತರಬೇತಿ ಕೇಂದ್ರಕ್ಕೆ ಭೇಟಿ 53
21. ಬ್ಯಾಂಕ್‌ಗೆ ಭೇಟಿ 55
22. ಕೈಗಾರಿಕೆ/ಕಾರ್ಖಾನೆಗೆ ಭೇಟಿ 57
23. ಡೈರಿ ಫಾರ್ಮ್‌ಗೆ ಉದ್ಯಮದ ಭೇಟಿ / ಹಾಲು ಸಂಸ್ಕರಣಾ ಕೇಂದ್ರಕ್ಕೆ ಭೇಟಿ 59
24. ಕಟ್ಟಡ ನಿರ್ಮಾಣ ಸ್ಥಳಕ್ಕೆ ಭೇಟಿ 61
25. ತರಕಾರಿ ಮಾರುಕಟ್ಟೆಗೆ ಭೇಟಿ, ಸಮೀಕ್ಷೆ 63

## ವಿಭಾಗ – ಸಿ ಕಲೆ, ಸಂಸ್ಕೃತಿ ಮತ್ತು ಇತಿಹಾಸ

26. ಬೊಂಬೆಯಾಟ 66
27. ತ್ಯಾಜ್ಯದಿಂದ ಕಲೆ 68
28. ಗೊಂಬೆ ತಯಾರಿಕೆ ಚರ್ಚೆ/ ಡೂಡ್ಲಿಂಗ್ 70
29. ಗಾಳಿಪಟ ತಯಾರಿಸುವುದು ಮತ್ತು ಹಾರಿಸುವುದು 72
30. ಪುಸ್ತಕ ಮೇಳವನ್ನು ಆಯೋಜಿಸುವುದು 74
31. ನೃತ್ಯ ನಾಟಕ ಮತ್ತು ಮೈಮ್ಸ್ 76
32. ಏಕತೆಯ ರಾಷ್ಟ್ರೀಯ ಸ್ಮಾರಕ ಪ್ರತಿಮೆಗೆ ಭೇಟಿ 78
33. ಐತಿಹಾಸಿಕ ಸ್ಮಾರಕ ಸಾಂಚಿ ಸ್ತೂಪಕ್ಕೆ ಭೇಟಿ 81
ತಜ್ಞರ ಪಟ್ಟಿ 83
ಕ್ರೆಡಿಟ್‌ಗಳ ಪಟ್ಟಿ 85

## ಪರಿಚಯ



ರಾಷ್ಟ್ರೀಯ ಶಿಕ್ಷಣ ನೀತಿ 2020, ವೃತ್ತಿಪರ ಶಿಕ್ಷಣಕ್ಕೆ ಸಂಬಂಧಿಸಿದ ಸಾಮಾಜಿಕ ಸ್ಥಾನಮಾನದ ಅಂತರವನ್ನು ನಿವಾರಿಸುವ ಗುರಿಯನ್ನು ಹೊಂದಿದ್ದು, ಹಂತ ಹಂತವಾಗಿ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ವೃತ್ತಿ ಶಿಕ್ಷಣವನ್ನು ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಸಂಯೋಜಿಸುವ ಅಗತ್ಯವಿದೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಯಲ್ಲಿ ಆರಂಭಿಕ ವಯಸ್ಸಿನಲ್ಲೇ ವೃತ್ತಿ ಶಿಕ್ಷಣಕ್ಕೆ ತೆರೆದುಕೊಳ್ಳುವುದರೊಂದಿಗೆ ಗುಣಮಟ್ಟದ ವೃತ್ತಿ ಶಿಕ್ಷಣವನ್ನು ಉನ್ನತ ಶಿಕ್ಷಣದಲ್ಲಿ ಸರಾಗವಾಗಿ ಸಂಯೋಜಿಸಲು ಸಾಧ್ಯವಾಗುತ್ತದೆ. ಪ್ರತಿ ಮಗುವೂ ಕನಿಷ್ಠ ಒಂದು ವೃತ್ತಿಯನ್ನು ಕಲಿಯುವುದು ಮಾತ್ರವಲ್ಲದೆ, ಇನ್ನೂ ಹಲವಾರು ವೃತ್ತಿಗಳನ್ನು ಆಯ್ಕೆಮಾಡಿಕೊಳ್ಳುವುದನ್ನು ಇದು ಖಚಿತಪಡಿಸುತ್ತದೆ. ಇದು ಕೌಶಲ ನಿರ್ಮಾಣ, ವೃತ್ತಿ ಘನತೆ, ಭಾರತೀಯ ಕಲೆಗಳು ಮತ್ತು ಕುಶಲಕರ್ಮಿಗಳನ್ನು ಒಳಗೊಂಡಿರುವ ವಿವಿಧ ವೃತ್ತಿಗಳ ಪ್ರಾಮುಖ್ಯತೆಯನ್ನು ಒತ್ತಿಹೇಳಲು ಸಾಧ್ಯವಾಗುತ್ತದೆ (ಪ್ಯಾರಾ 16.4, 2020). 6 ರಿಂದ 8 ನೇ ತರಗತಿಗಳಿಗೆ ಅಭ್ಯಾಸ ಆಧಾರಿತ ಪಠ್ಯಕ್ರಮವನ್ನು ಎನ್‌ಸಿಇಆರ್‌ಟಿಯು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು–ಶಾಲಾ ಶಿಕ್ಷಣವನ್ನು ರೂಪಿಸುವಾಗ (ಎನ್.ಸಿ.ಎಫ್.ಎಸ್.ಇ) ಸೂಕ್ತ ರೀತಿಯಲ್ಲಿ ವಿನ್ಯಾಸಗೊಳಿಸುವಲ್ಲಿ ಪೂರಕವಾಗಿರುತ್ತದೆ.



2020ರ ರಾಷ್ಟ್ರೀಯ ಶಿಕ್ಷಣ ನೀತಿಯು ಕಲಿಕೆಯಲ್ಲಿ ನಿರತ ಕನಿಷ್ಠ 50 ಪ್ರತಿಶತ ವಿದ್ಯಾರ್ಥಿಗಳನ್ನು ವೃತ್ತಿ ಶಿಕ್ಷಣಕ್ಕೆ ಪರಿಚಯಿಸುವಂತೆ ಪ್ರಸ್ತಾಪಿಸುತ್ತದೆ ಮತ್ತು ನೀತಿಯ ಪ್ರಕಾರ 6 ನೇ ತರಗತಿಯಿಂದಲೇ ಮಕ್ಕಳು ವೃತ್ತಿಪರ ವಿಷಯಗಳಿಗೆ ಪರಿಚಿತರಾಗುತ್ತಾರೆ. ಅದೇ ರೀತಿ, 6 ರಿಂದ 8 ನೇ ತರಗತಿಯ ಮಕ್ಕಳು 10 ಸಂಭ್ರಮ ಶನಿವಾರ (ಬ್ಯಾಗ್‌ಲೆಸ್ ಡೇ) ದಿನದ ಚಟುವಟಿಕೆಗಳ ಮೂಲಕ ವಿವಿಧ ವೃತ್ತಿಗಳ ಬಗೆಗಿನ ಜ್ಞಾನ ಮತ್ತು ಕೌಶಲಗಳನ್ನು ಪಡೆದುಕೊಳ್ಳಲು ಪ್ರೋತ್ಸಾಹಿಸಲಾಗುತ್ತದೆ. ಈ ಚಟುವಟಿಕೆಗಳ ಮೂಲಕ, ವಿದ್ಯಾರ್ಥಿಗಳು ಭವಿಷ್ಯದಲ್ಲಿ ತಾವು ಆಯ್ಕೆ ಮಾಡಿಕೊಳ್ಳಬಹುದಾದ ವೃತ್ತಿ ಮತ್ತು ಆ ವೃತ್ತಿಗೆ ಪೂರಕವಾದ ಉನ್ನತ ಶಿಕ್ಷಣದ ಮಾರ್ಗಗಳನ್ನು ಕಂಡುಕೊಳ್ಳುತ್ತಾರೆ.

# 10 ಸಂಭ್ರಮ ಶನಿವಾರ (ಬ್ಯಾಗ್ ಲೆಸ್ ಡೇ) ದಿನಗಳ ಪರಿಕಲ್ಪನೆ



10 ಸಂಭ್ರಮ ಶನಿವಾರ (ಬ್ಯಾಗ್ ಲೆಸ್ ಡೇ) ದಿನಗಳ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿರುವ ಉದ್ದೇಶವೇನೆಂದರೆ; 6–8 ನೇ ತರಗತಿಗಳಲ್ಲಿ ಅಸ್ತಿತ್ವದಲ್ಲಿರುವ ಶೈಕ್ಷಣಿಕ ಕಾರ್ಯಕ್ರಮಗಳ ಅಧ್ಯಯನದ ಯೋಜನೆಗೆ ಹೆಚ್ಚುವರಿಯಾಗಿ, ಅವುಗಳನ್ನು ಬೋಧನಾ–ಕಲಿಕಾ ಪ್ರಕ್ರಿಯೆಯ ಅವಿಭಾಜ್ಯ ಅಂಗವನ್ನಾಗಿ ಮಾಡುವುದು. ಇದು ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಜ್ಞಾನದ ನಡುವಿನ ಅಂತರವನ್ನು ಕಡಿಮೆ ಮಾಡುವುದಲ್ಲದೆ, ಕಾರ್ಯ ಕ್ಷೇತ್ರಗಳಲ್ಲಿ ಅಗತ್ಯವಿರುವ ಕೌಶಲಗಳಿಗೆ ಮಕ್ಕಳನ್ನು ಪರಿಚಯಿಸುತ್ತದೆ. ಹೀಗಾಗಿ ಭವಿಷ್ಯದಲ್ಲಿ ಸರಿಯಾದ ವೃತ್ತಿಯನ್ನು ಆಯ್ಕೆಮಾಡಿಕೊಳ್ಳಲು ಅವರಿಗೆ ಸಹಾಯ ಮಾಡುತ್ತದೆ. ಈ ಬಹು–ಕೌಶಲ ಚಟುವಟಿಕೆಗಳು, ಇತರ ವಿಷಯಗಳೊಂದಿಗೆ ಸೌಂದರ್ಯ ಪ್ರಜ್ಞೆ, ಸಹಕಾರ, ತಂಡದಲ್ಲಿ ಕೆಲಸ ನಿರ್ವಹಣೆ, ಕಚ್ಚಾ ವಸ್ತುಗಳ ವಿವೇಚನಾಶೀಲ ಬಳಕೆ, ಸೃಜನಶೀಲತೆ, ಗುಣಮಟ್ಟದ ಅರಿವು ಇತ್ಯಾದಿಗಳಂತಹ ಸಾಫ್ಟ್ ಸ್ಕಿಲ್ ಗಳ ಅಭಿವೃದ್ಧಿಯನ್ನು ಉತ್ತೇಜಿಸುತ್ತದೆ.



ರಾಜ್ಯಗಳು ಮತ್ತು ಸ್ಥಳೀಯ ಸಮುದಾಯಗಳಿಂದ ನಿರ್ಧರಿಸಲಾದಂತೆ ಹಾಗೂ ಸ್ಥಳೀಯ ಕೌಶಲದ ಅಗತ್ಯಗಳಿಂದ ಹೊಂದಾಣಿಕೆ ಮಾಡಿರುವಂತೆ, ಪ್ರತಿ ವಿದ್ಯಾರ್ಥಿಯು 6–8 ನೇ ತರಗತಿಯ ಅವಧಿಯಲ್ಲಿ ಆಸಕ್ತಿದಾಯಕ/ಸಂತಸದಾಯಕ ವಿಷಯವನ್ನು ತೆಗೆದುಕೊಳ್ಳುತ್ತಾರೆ, ಇದು ವಿದ್ಯಾರ್ಥಿಗಳಿಗೆ ಮರಗೆಲಸ, ಎಲೆಕ್ಟ್ರಿಕಲ್ ಕೆಲಸ, ಲೋಹದ ಕೆಲಸ, ತೋಟಗಾರಿಕೆ, ಕುಂಬಾರಿಕೆ ಇತ್ಯಾದಿಗಳಂತಹ ಪ್ರಮುಖ ವೃತ್ತಿಪರ ಕರಕುಶಲ ವಸ್ತುಗಳ ತಯಾರಿಕೆಯ ಪ್ರಾಯೋಗಿಕ ಅನುಭವವನ್ನು ನೀಡುತ್ತದೆ. ಎಲ್ಲಾ ವಿದ್ಯಾರ್ಥಿಗಳು 6–8 ನೇ ತರಗತಿಗಳ ಸಮಯದಲ್ಲಿ 10 ಸಂಭ್ರಮ ಶನಿವಾರ ದಿನಗಳ (ಬ್ಯಾಗ್ ಲೆಸ್ ಡೇ) ಅವಧಿಯಲ್ಲಿ ಭಾಗವಹಿಸುತ್ತಾರೆ, ಅಲ್ಲಿ ಅವರು ಬಡಗಿಗಳು, ತೋಟಗಾರರು, ಕುಂಬಾರರು ಮುಂತಾದ ಸ್ಥಳೀಯ ವೃತ್ತಿ ತಜ್ಞರಿಂದ ತರಬೇತಿ ಪಡೆಯುತ್ತಾರೆ.

ಕಲೆ, ರಸಪ್ರಶ್ನೆ, ಕ್ರೀಡೆ ಮತ್ತು ವೃತ್ತಿಪರ ಕರಕುಶಲಗಳನ್ನು ಒಳಗೊಂಡಿರುವ ವಿವಿಧ ರೀತಿಯ ಪುಷ್ಟೀಕರಣ ಚಟುವಟಿಕೆಗಳಿಗೆ ವರ್ಷದುದ್ದಕ್ಕೂ ಸಂಭ್ರಮ ಶನಿವಾರದ (ಬ್ಯಾಗ್‌ಲೆಸ್ ಡೇ) ದಿನಗಳನ್ನು ಪ್ರೋತ್ಸಾಹಿಸಲಾಗುತ್ತದೆ. ಸ್ಥಳೀಯ ಸಮುದಾಯ ಮತ್ತು ಸ್ಥಳೀಯ ಕೌಶಲಗಳಿಗೆ ಹೊಂದಾಣಿಕೆ ಮಾಡಿ ಪಟ್ಟಿ ಮಾಡಲಾಗಿರುವ ನೀತಿಯಂತೆ ಐತಿಹಾಸಿಕ, ಸಾಂಸ್ಕೃತಿಕ ಮತ್ತು ಪ್ರವಾಸಿ ಪ್ರಾಮುಖ್ಯತೆಯ ಸ್ಥಳಗಳು/ಸ್ಮಾರಕಗಳಿಗೆ ಭೇಟಿ ನೀಡುವುದು, ಸ್ಥಳೀಯ ಕಲಾವಿದರು ಮತ್ತು ಕುಶಲಕರ್ಮಿಗಳನ್ನು ಭೇಟಿ ಮಾಡುವುದು ಮತ್ತು ರಾಜ್ಯಗಳು ನಿರ್ಧರಿಸಿದಂತೆ ತಮ್ಮ ಗ್ರಾಮ/ತಾಲೂಕ/ಜಿಲ್ಲೆ/ರಾಜ್ಯದಲ್ಲಿನ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡುವ ಮೂಲಕ ಮಕ್ಕಳಿಗೆ ಸಕಾಲದಲ್ಲಿ ಶಾಲೆಯ ಹೊರಗಿನ ಚಟುವಟಿಕೆಗಳಿಗೆ ಆದ್ಯತೆ ನೀಡಲಾಗುತ್ತದೆ.



ಮಕ್ಕಳು, ವಿವಿಧ ಪರಿಕಲ್ಪನೆಗಳು ಮತ್ತು ವೈಜ್ಞಾನಿಕ ತತ್ವಗಳನ್ನು ಕಲಿಯಲು ವಿವಿಧ ಶೈಕ್ಷಣಿಕ ವಿಷಯಗಳೊಂದಿಗೆ ವೃತ್ತಿಯನ್ನು ಸಂಯೋಜಿಸಲು, ಪ್ರಪಂಚದಲ್ಲಿನ ಅನೇಕ ಉದ್ಯೋಗಗಳು ಮತ್ತು ವೃತ್ತಿ ಅವಕಾಶಗಳಿಗೆ ಪೂರಕವಾದ ಮೂಲಭೂತ ಕೌಶಲಗಳನ್ನು ಹೊಂದಿಸಲು ಶಕ್ತರಾಗಬೇಕು.

ವಿವಿಧ ಕ್ಷೇತ್ರಗಳು ಅಥವಾ ವಲಯಗಳಲ್ಲಿರುವ ವಿವಿಧ ಕಾರ್ಯಗಳ ಕುರಿತ ಮಕ್ಕಳ ದೃಷ್ಟಿಕೋನವು ಸರಿಯಾದ ವೃತ್ತಿಯನ್ನು ಆಯ್ಕೆ ಮಾಡಲು ಅವರಿಗೆ ಸಹಾಯ ಮಾಡುತ್ತದೆ. 8ನೇ ತರಗತಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಕೌಶಲ ಆಧಾರಿತ ಚಟುವಟಿಕೆಗಳು ಅವರು ಇಚ್ಛಿಸುವ ವೃತ್ತಿ ಮಾರ್ಗವನ್ನು ಕಲ್ಪಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ.

ಹೀಗಾಗಿ, 6–8 ನೇ ತರಗತಿ ವಿದ್ಯಾರ್ಥಿಗಳಿಗೆ 10 ಸಂಭ್ರಮ ಶನಿವಾರ ದಿನಗಳು (ಬ್ಯಾಗ್‌ಲೆಸ್ ಡೇ) ಶಿಕ್ಷಣ ಕಾರ್ಯಕ್ರಮವು ಜ್ಞಾನವನ್ನು ಪಡೆದುಕೊಳ್ಳುವಲ್ಲಿ ಮಾತ್ರವಲ್ಲದೆ ಮೌಲ್ಯಗಳನ್ನು ಅಭಿವೃದ್ಧಿಪಡಿಸುವಲ್ಲಿ ಮತ್ತು ಬಹು–ಕೌಶಲ ರಚನೆಗೆ ಸಹಕಾರಿಯಾಗುತ್ತದೆ. ಮಗು ಪ್ರಬುದ್ಧವಾಗುತ್ತಿದ್ದಂತೆ, ವೃತ್ತಿ ಜಗತ್ತಿಗೆ ತಯಾರಾಗಲು ಮಗುವಿನ ಅಗತ್ಯತೆಯನ್ನು ಗುರುತಿಸುವಂತಹ ಪಠ್ಯಕ್ರಮದ ಅವಶ್ಯಕತೆಯಿದೆ ಮತ್ತು ವೃತ್ತಿ–ಕೇಂದ್ರಿತ ಶಿಕ್ಷಣಶಾಸ್ತ್ರವನ್ನು ಹೆಚ್ಚುತ್ತಿರುವ ಸಂಕೀರ್ಣತೆಯೊಂದಿಗೆ ಅನುಸರಿಸಬಹುದು ಮತ್ತು ಯಾವಾಗಲೂ ಅಗತ್ಯವಾದ ನಮ್ಯತೆ ಮತ್ತು ಸಂದರ್ಭದೊಂದಿಗೆ ಪುಷ್ಟೀಕರಿಸಬಹುದು.



## 10 ಸಂಭ್ರಮ ಶನಿವಾರ (ಬ್ಯಾಗ್ ಲೆಸ್ ಡೇ) ದಿನಗಳ ಉದ್ದೇಶ

10 ಸಂಭ್ರಮ ಶನಿವಾರ (ಬ್ಯಾಗ್‌ಲೆಸ್ ಡೇ) ದಿನಗಳ ಸಾಮಾನ್ಯ ಉದ್ದೇಶವು ಮಕ್ಕಳಿಗೆ ಆಸಕ್ತಿಯಿಂದ ಸಂತಸದಾಯಕ ಕಲಿಕೆಯಲ್ಲಿ ತೊಡಗಲು ಸಹಾಯ ಮಾಡುವುದು. ನಿರ್ದಿಷ್ಟ ಅರ್ಥದಲ್ಲಿ 10 ಸಂಭ್ರಮ ಶನಿವಾರ (ಬ್ಯಾಗ್‌ಲೆಸ್ ಡೇ) ದಿನಗಳ ಉದ್ದೇಶಗಳು ಹೀಗಿವೆ:



- ➔ ಶಾಲೆಯ ಹೊರಗಿನ ವೃತ್ತಿ ಪ್ರಪಂಚಕ್ಕೆ ಆದ್ಯತೆ ನೀಡುವುದು.
- ➔ ದೈನಂದಿನ ಜೀವನಕ್ಕೆ ಕೊಡುಗೆ ನೀಡುವಂತಹ ವಹಿವಾಟುಗಳನ್ನು ಪರಿಚಯಿಸುವುದು.
- ➔ ನೋಡಿ–ಕಲಿ ತತ್ವವನ್ನು ಉತ್ತೇಜಿಸಲು ಹಾಗೂ ಕಲಿಕೆಯ ಸಾಮರ್ಥ್ಯ ಮತ್ತು ಅಭ್ಯಾಸದ ವ್ಯಾಪ್ತಿಯನ್ನು ಹೆಚ್ಚಿಸುವುದು.
- ➔ ಸಮುದಾಯದ ಸಂಪರ್ಕ ಮತ್ತು ಪರಸ್ಪರ ಅವಲಂಬನೆಯ ತಿಳಿವಳಿಕೆಯನ್ನು ಅಭಿವೃದ್ಧಿಪಡಿಸುವುದು.
- ➔ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಅನ್ವಯದೊಂದಿಗೆ ತರಗತಿಯ ಪರಸ್ಪರ ಅವಲಂಬನೆಯನ್ನು ಅಭಿವೃದ್ಧಿಪಡಿಸುವುದು.
- ➔ ಅನುಭವಾತ್ಮಕ ಕೆಲಸಗಳ ಮೂಲಕ ಕಾರ್ಮಿಕರ ಘನತೆಯನ್ನು ಉತ್ತೇಜಿಸುವುದು ಮತ್ತು ಅಸ್ತಿತ್ವದಲ್ಲಿರುವ ಸ್ಥಳೀಯ ವೃತ್ತಿಗಳಾದ ಮರಗೆಲಸ, ತೋಟಗಾರಿಕೆ, ಕುಂಬಾರಿಕೆ, ಇತ್ಯಾದಿಗಳನ್ನು ಅಭಿವೃದ್ಧಿಪಡಿಸಲು ಮತ್ತು ಜನಪ್ರಿಯಗೊಳಿಸುವುದು.
- ➔ ವೋಕಲ್ ವಿತ್ ಲೋಕಲ್ ಪರಿಕಲ್ಪನೆಯನ್ನು ಪ್ರಸಿದ್ಧಿಗೊಳಿಸಲು ಸ್ಥಳೀಯ ಕುಶಲಕರ್ಮಿಗಳೊಂದಿಗೆ ಸಂವಹನ ನಡೆಸುವುದು.
- ➔ ವಿವಿಧ ಸಂಸ್ಥೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಂಭವನೀಯ ವೃತ್ತಿ ಆಯ್ಕೆಗಳಿಗೆ ಆದ್ಯತೆ ನೀಡುವುದು.

## 3. ವಿಧಾನ

10 ಸಂಭ್ರಮ ಶನಿವಾರ (ಬ್ಯಾಗ್ ಲೆಸ್ ಡೇ) ಕಾರ್ಯಕ್ರಮದಲ್ಲಿ ಮೇಲಿನ ಉದ್ದೇಶಗಳನ್ನು ಪೂರೈಸಲು, ಶಾಲೆಯು ಸಂಬಂಧಪಟ್ಟ ಶಿಕ್ಷಕರ ಮಾರ್ಗದರ್ಶನದಲ್ಲಿ ಹೊರಾಂಗಣ ಮತ್ತು ಒಳಾಂಗಣ ಚಟುವಟಿಕೆಗಳನ್ನು ನಡೆಸಲು ಅವಕಾಶ ಕಲ್ಪಿಸುತ್ತದೆ, ಅದೇ ಸಮಯದಲ್ಲಿ ಸಮುದಾಯದ ಸದಸ್ಯರನ್ನು ಒಳಗೊಳ್ಳುವ ಪ್ರಮುಖ ಚಟುವಟಿಕೆಗಳನ್ನು ರೂಪಿಸಬಹುದು.



- ➔ ಶೈಕ್ಷಣಿಕ ಪ್ರವಾಸಗಳು ಅಥವಾ ಕ್ಷೇತ್ರ ಭೇಟಿಗಳು
- ➔ ಪ್ರಯೋಗಗಳು
- ➔ ಪ್ರಾಕೃತಿಕ ಪರಿಶೋಧನೆಗಳು
- ➔ ಸಮೀಕ್ಷೆಗಳು ಮತ್ತು ವ್ಯಕ್ತಿ ಅಧ್ಯಯನ
- ➔ ಸಮುದಾಯ, ಪೋಷಕರನ್ನು ಒಳಗೊಂಡ ಸಂದರ್ಶನಗಳು.

## ಶೈಕ್ಷಣಿಕ ಪ್ರವಾಸಗಳು ಮತ್ತು ಕ್ಷೇತ್ರ ಭೇಟಿಗಳು



ಕ್ಷೇತ್ರ ಭೇಟಿಗಳನ್ನು ಸಾಮಾನ್ಯವಾಗಿ ಸಂತಸದಾಯಕ ಚಟುವಟಿಕೆಗಳಾಗಿ ಪರಿಗಣಿಸಲಾಗುತ್ತದೆ, ಆದರೆ ಅವುಗಳು ಕಲಿಕೆಯನ್ನು ಉತ್ತೇಜಿಸುವಂತಹ ಪ್ರಮುಖ ಉದ್ದೇಶಗಳನ್ನು ಸಹ ಪೂರೈಸುತ್ತವೆ. ಪ್ರಾಯೋಗಿಕ ಅನುಭವವನ್ನು ಒದಗಿಸಲು, ವೈಯಕ್ತಿಕ ಬೆಳವಣಿಗೆಯನ್ನು ಉತ್ತೇಜಿಸಲು, ಮಕ್ಕಳು ಪರಿಕಲ್ಪನೆಗಳನ್ನು ಕಲಿಯಲು ಮತ್ತು ಸಾಮಾಜಿಕ–ಪರಿಸರ ಸಮಸ್ಯೆಗಳ ಬಗ್ಗೆ ಸಂವೇದನಾಶೀಲರಾಗಲು ಸಹಾಯ ಮಾಡುವ ರೀತಿಯಲ್ಲಿ ಶಾಲೆಗಳು ಅವುಗಳನ್ನು ಯೋಜಿಸಬೇಕು ಮತ್ತು ಸಂಘಟಿಸಬೇಕು. ಶಾಲೆಗಳು ಕೆಲವು ಸಂತಸದಾಯಕ ಚಟುವಟಿಕೆಗಳನ್ನು ಗುರುತಿಸಬೇಕು ಮತ್ತು ಅವುಗಳನ್ನು ಗಣಿತ, ವಿಜ್ಞಾನ ಇತ್ಯಾದಿಗಳೊಂದಿಗೆ ಸಂಯೋಜಿಸಬೇಕು. ಉದಾಹರಣೆಗೆ, ಇತಿಹಾಸವನ್ನು ಕಲಿಸುವಾಗ ನಾವು ಆಗಾಗ್ಗೆ ವಸ್ತುಸಂಗ್ರಹಾಲಯಗಳು ಮತ್ತು ಸ್ಮಾರಕಗಳ ಬಗ್ಗೆ ಕಲಿಯುತ್ತೇವೆ. ಇದನ್ನು ಕಲಿಸುವಾಗ ಶಿಕ್ಷಕರು ವೃತ್ತಿಶಿಕ್ಷಣ ಕ್ಷೇತ್ರಗಳಲ್ಲಿ ಒಂದಾದ ಪ್ರವಾಸ ಮತ್ತು ಪ್ರವಾಸೋದ್ಯಮದ ಕಲ್ಪನೆಯನ್ನು ಪರಿಚಯಿಸಬಹುದು.

ಕೃಷಿ ಭೂಮಿಗಳು, ಡೈರಿ ಫಾರ್ಮ್‌ಗಳು, ಸಂಶೋಧನಾ ಸಂಸ್ಥೆಗಳು, ವಿಶೇಷ ಸಂಸ್ಥೆಗಳಾದ, ಕೈಗಾರಿಕಾ ತರಬೇತಿ ಸಂಸ್ಥೆಗಳು (ಐಟಿಐಗಳು), ಪಾಲಿಟೆಕ್ನಿಕ್ ಕಾಲೇಜುಗಳು, ಕೈಗಾರಿಕೆಗಳು, ಆಸ್ಪತ್ರೆಗಳು, ಉನ್ನತ ಶಿಕ್ಷಣ ಸಂಸ್ಥೆಗಳು ಮತ್ತು ಇತರ ಸ್ಥಳಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳನ್ನು ವಿವಿಧ ಉದ್ಯೋಗಗಳಿಗೆ ಪರಿಚಯಿಸಲು, ವೃತ್ತಿ ಜಗತ್ತಿನಲ್ಲಿ ವಿವಿಧ ಉದ್ಯೋಗಾವಕಾಶಗಳು ಮತ್ತು ವಿವಿಧ ವೃತ್ತಿಯಲ್ಲಿ ತೊಡಗಿರುವ ಜನರಿಗೆ ಅಗತ್ಯವಿರುವ ಜ್ಞಾನ ಮತ್ತು ಕೌಶಲಗಳ ಅರಿವನ್ನು ವಿದ್ಯಾರ್ಥಿಗಳಲ್ಲಿ ಮೂಡಿಸಲು ಶಾಲೆಯು ಶೈಕ್ಷಣಿಕ ಪ್ರವಾಸಗಳನ್ನು ಆಯೋಜಿಸುತ್ತದೆ.

## ಪ್ರಯೋಗಗಳು



ಪ್ರಯೋಗಾಲಯ ವ್ಯವಸ್ಥೆಯಲ್ಲಿನ ಪ್ರಾಯೋಗಿಕ ದೃಷ್ಟಿಕೋನ ಮತ್ತು ಪರಿಶೋಧನೆಗಳು, ಪ್ರಶ್ನಿಸಲು, ವೀಕ್ಷಿಸಲು, ರಚಿಸಲು, ಚರ್ಚಿಸಲು, ವಿಮರ್ಶಾತ್ಮಕವಾಗಿ ಯೋಚಿಸಲು, ವರ್ಗೀಕರಿಸಲು, ವಿಶ್ಲೇಷಿಸಲು, ತರ್ಕಿಸಲು ಮತ್ತು ತೀರ್ಮಾನಗಳನ್ನು ತೆಗೆದುಕೊಳ್ಳಲು ಮಕ್ಕಳನ್ನು ಪ್ರೋತ್ಸಾಹಿಸುತ್ತದೆ.

## ನೈಸರ್ಗಿಕ ಪರಿಶೋಧನೆಗಳು



ರಾಷ್ಟ್ರೀಯ ಉದ್ಯಾನವನಗಳಿಗೆ ಭೇಟಿ ನೀಡುವುದು, ಪಾದಯಾತ್ರೆ, ಆಕಾಶಕಾಯಗಳ ವೀಕ್ಷಣೆ, ಟ್ರೆಕ್ಕಿಂಗ್, ವನ್ಯಜೀವಿಗಳನ್ನು ವೀಕ್ಷಿಸುವುದು ಮತ್ತು ಅವುಗಳ ಸುತ್ತಲಿನ ಪ್ರಪಂಚವನ್ನು ವೀಕ್ಷಿಸುವುದು ಸೇರಿದಂತೆ ನೈಸರ್ಗಿಕ ಪ್ರಪಂಚದ ಇನ್ನೂ ಅನೇಕ ವಿಸ್ಮಯಗಳನ್ನು ವೀಕ್ಷಿಸುವ ಮತ್ತು ಕಲಿಯುವ ನಿಟ್ಟಿನಲ್ಲಿ ಚಟುವಟಿಕೆಗಳನ್ನು ರೂಪಿಸಬಹುದು. ಇವುಗಳನ್ನು ಅನ್ವೇಷಿಸುವ ಮೂಲಕ ವಿದ್ಯಾರ್ಥಿಗಳು ವಿವಿಧ ಕೌಶಲಗಳನ್ನು ಅಭಿವೃದ್ಧಿಪಡಿಸಬಹುದು ಮತ್ತು ನಿಜ ಜೀವನದ ಸನ್ನಿವೇಶಗಳನ್ನು ಅನುಭವಿಸಬಹುದು. ಈ ಚಟುವಟಿಕೆಗಳು ಮತ್ತಷ್ಟು ಹೊಸ ವೃತ್ತಿಗಳ ಬಗ್ಗೆ ತಿಳಿಯಲು ವಿದ್ಯಾರ್ಥಿಗಳಿಗೆ ಸಹಾಯ ಮಾಡಬಹುದು.

## ಸಮೀಕ್ಷೆಗಳು ಮತ್ತು ಸಂದರ್ಶನಗಳು



ಅರ್ಥಪೂರ್ಣ ಒಳನೋಟಗಳನ್ನು ಪಡೆಯಲು ಅಗತ್ಯ ಮಾಹಿತಿಯನ್ನು ಹುಡುಕಲು, ಸಂಗ್ರಹಿಸಲು ಮತ್ತು ಪಡೆದ ಮಾಹಿತಿಯನ್ನು ಬಳಸಿಕೊಳ್ಳಲು ಮಕ್ಕಳನ್ನು ತೊಡಗಿಸಿಕೊಳ್ಳುವಲ್ಲಿ ಸಮೀಕ್ಷೆಗಳು ಸಹಾಯ ಮಾಡುತ್ತವೆ. ಹೆಚ್ಚಿನ ಪರಿಶೋಧನೆ ಮತ್ತು ಸಮೀಕ್ಷೆ ಚಟುವಟಿಕೆಗಳಲ್ಲಿ ಮಕ್ಕಳು ಸಂದರ್ಶನಗಳ ಮೂಲಕ ಜನರಿಂದ ಮಾಹಿತಿಯನ್ನು ಪಡೆದುಕೊಳ್ಳುತ್ತಾರೆ. ಮಕ್ಕಳು ತಮ್ಮ

ಸುತ್ತಮುತ್ತಲಿನ ಜನರೊಂದಿಗೆ ಮಾತನಾಡಲು ಮತ್ತು ಸಮಸ್ಯೆ ಬಗೆಹರಿಸಲು ಅಥವಾ ನೀಡಿದ ಕಾರ್ಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಲು ಪ್ರೋತ್ಸಾಹಿಸಬಹುದು. ಇದು ಅವರ ಸುತ್ತಮುತ್ತಲಿನ ಸಮಸ್ಯೆಗಳನ್ನು ತಿಳಿದುಕೊಳ್ಳಲು ಮತ್ತು ನೈಜ ಅನುಭವ ಪಡೆಯಲು ಸಹಾಯ ಮಾಡುತ್ತದೆ.

ಸಂದರ್ಶನಕ್ಕಾಗಿ ತಮ್ಮದೇ ಆದ ಪ್ರಶ್ನೆಗಳನ್ನು ರೂಪಿಸಲು ಮಕ್ಕಳನ್ನು ಪ್ರೋತ್ಸಾಹಿಸಬಹುದು ಮತ್ತು ವರದಿಯನ್ನು ತಯಾರಿಸಲು ಸಂಗ್ರಹಿಸಿದ ಮಾಹಿತಿಯನ್ನು ಬಳಸುವುದು. ಜನರೊಂದಿಗೆ ಸಂವಹನ ನಡೆಸಿ ಅವರನ್ನು ಸಂದರ್ಶಿಸುವುದರಿಂದ, ವಿದ್ಯಾರ್ಥಿಗಳಲ್ಲಿ ಸಂವಹನ ಕೌಶಲಗಳನ್ನು ಅಭಿವೃದ್ಧಿಪಡಿಸಲು, ಪ್ರಶ್ನೆಗಳನ್ನು ರಚಿಸಲು ಮತ್ತು ಕೇಳಲು, ಪ್ರತಿಕ್ರಿಯೆಗಳನ್ನು ದಾಖಲಿಸಲು ಮತ್ತು ವರದಿಗಳನ್ನು ಸಿದ್ಧಪಡಿಸಲು ಇತ್ಯಾದಿಗಳಿಗೆ ಸಹಾಯ ಮಾಡುತ್ತದೆ.

## ವಾರ್ಷಿಕ ಕ್ರಿಯಾ ಯೋಜನೆಯನ್ನು ಅಭಿವೃದ್ಧಿಪಡಿಸುವುದು

ಶಾಲೆಯಲ್ಲಿ 10 ಸಂಭ್ರಮ ಶನಿವಾರ (ಬ್ಯಾಗ್‌ಲೆಸ್ ಡೇ) ದಿನಗಳ ಅನುಷ್ಠಾನದ ಪ್ರಮುಖ ಭಾಗಗಳಲ್ಲಿ ವಾರ್ಷಿಕ ಕ್ರಿಯಾ ಯೋಜನೆ ಒಂದಾಗಿದೆ. ಪ್ರತಿ ಶಾಲೆಯು ಚಟುವಟಿಕೆಗಳನ್ನು ಸರಿಯಾಗಿ ಕಾರ್ಯಗತಗೊಳಿಸಲು ಒಳಾಂಗಣ ಮತ್ತು ಹೊರಾಂಗಣ ಚಟುವಟಿಕೆಗಳ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಬೇಕು. ಶಾಲೆಯ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವಾಗ ಈ ಕೆಳಗಿನ ಅಂಶಗಳು ಮಾರ್ಗಸೂಚಿಗಳಾಗಿ ಕಾರ್ಯನಿರ್ವಹಿಸುತ್ತವೆ:



1. 10 ಸಂಭ್ರಮ ಶನಿವಾರ (ಬ್ಯಾಗ್‌ಲೆಸ್ ಡೇ) ದಿನಗಳ ಚಟುವಟಿಕೆಗಳನ್ನು ವಾರ್ಷಿಕ ಕ್ಯಾಲೆಂಡರ್‌ನಲ್ಲಿ ಅವಶ್ಯಕತೆಗೆ ಅನುಗುಣವಾಗಿ ಅವಧಿಗಳನ್ನು ನೀಡಬಹುದು. ಆದರೆ 2 ಅಥವಾ 3 ಅವಧಿಗಳನ್ನು ನೀಡುವುದು ಸೂಕ್ತ.
2. ವಾರ್ಷಿಕ ಕ್ರಿಯಾ ಯೋಜನೆಯನ್ನು ಅಭಿವೃದ್ಧಿಪಡಿಸುವಾಗ ಎಲ್ಲಾ ವಿಷಯ ಶಿಕ್ಷಕರು ಭಾಗಿಯಾಗಬಹುದು.
3. ಅಗತ್ಯವಿದ್ದಲ್ಲಿ ಒಂದೇ ದಿನದಲ್ಲಿ ಒಳಾಂಗಣ ಮತ್ತು ಹೊರಾಂಗಣ ಚಟುವಟಿಕೆಗಳನ್ನು ಸಮ್ಮಿಳಿತಗೊಳಿಸಬಹುದು.
4. ನಿರ್ದಿಷ್ಟ ಉದ್ದೇಶವನ್ನು ಸಾಧಿಸಲು ವಿವಿಧ ಚಟುವಟಿಕೆಗಳನ್ನು ವರ್ಗೀಕರಿಸಲಾಗಿದೆ. ಒಂದೇ ಉದ್ದೇಶವಿರುವ ಎರಡು ಚಟುವಟಿಕೆಗಳನ್ನು ಒಟ್ಟಿಗೆ ಆಯೋಜಿಸದಿರುವುದು ಸೂಕ್ತವಾಗಿದೆ.
5. ನಿರ್ದಿಷ್ಟ ಚಟುವಟಿಕೆಯನ್ನು ಅನುಷ್ಠಾನಗೊಳಿಸುವಾಗ, ವಿಷಯ ಶಿಕ್ಷಕರು ಭಾಗಿಯಾಗಬಹುದು. ಒಬ್ಬ ಶಿಕ್ಷಕ ಎಲ್ಲಾ ಚಟುವಟಿಕೆಗಳಿಗೆ ಅಥವಾ ಕೇವಲ ಕೆಲವು ಚಟುವಟಿಕೆಗಳಿಗೆ ಸೀಮಿತವಾಗಿರಬಾರದು. ಉದಾಹರಣೆಗೆ, ಸಮಾಜಶಾಸ್ತ್ರದ ಶಿಕ್ಷಕರು ವಸ್ತುಸಂಗ್ರಹಾಲಯಕ್ಕೆ ಭೇಟಿ ನೀಡಲು ಚಟುವಟಿಕೆಗಳನ್ನು ಯೋಜಿಸಬಹುದು ಮತ್ತು ಕಾರ್ಯಗತಗೊಳಿಸಬಹುದು. ಅಂತೆಯೇ, ವಿಜ್ಞಾನ ಶಿಕ್ಷಕರು ಪ್ರಯೋಗಗಳು ಮತ್ತು ಕ್ಷೇತ್ರ ಭೇಟಿಗಳನ್ನು ಯೋಜಿಸಬಹುದು ಮತ್ತು ಕಾರ್ಯಗತಗೊಳಿಸಬಹುದು.
6. ಚಟುವಟಿಕೆಗಳನ್ನು ಅನುಷ್ಠಾನಗೊಳಿಸುತ್ತಿರುವ ಶಿಕ್ಷಕರು ಚಟುವಟಿಕೆಗಳ ಮೂಲಕ ಕಲಿಕಾ ಫಲಗಳ ಸಾಧನೆಯನ್ನು ಖಚಿತಪಡಿಸಿಕೊಳ್ಳುತ್ತಾರೆ.
7. ವಾರ್ಷಿಕ ಕಾರ್ಯಯೋಜನೆಯನ್ನು ಅಭಿವೃದ್ಧಿಪಡಿಸುವಾಗ, ವಿಶೇಷ ಅಗತ್ಯವುಳ್ಳ ಮಕ್ಕಳು ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಮತ್ತು ಅವರ ಅಗತ್ಯತೆಗಳಿಗೆ ಅನುಗುಣವಾಗಿ ಚಟುವಟಿಕೆಗಳಲ್ಲಿ ಬದಲಾವಣೆಗಳನ್ನು ಮಾಡಲು ಗಮನ ನೀಡಬೇಕು.

ಶಾಲೆಗಳಲ್ಲಿ ಶಿಕ್ಷಕರು ತಮ್ಮ ಶೈಕ್ಷಣಿಕ ಕ್ಯಾಲೆಂಡರ್‌ನಲ್ಲಿ ಹೊರಾಂಗಣ ಮತ್ತು ಒಳಾಂಗಣ ಚಟುವಟಿಕೆಗಳಿಗೆ ವಾರ್ಷಿಕ ಯೋಜನೆಯನ್ನು ಮಾಡುತ್ತಾರೆ. ಶಾಲಾ ಪೂರ್ವ ಮತ್ತು ನಂತರದ ಚಟುವಟಿಕೆಗಳಿಗೆ ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸುವಾಗ ಪ್ರತಿ ಚಟುವಟಿಕೆಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದು ಅಗತ್ಯ.

**ಚಟುವಟಿಕೆಗಳ ಪೂರ್ವ ಯೋಜನೆ:** ಶಿಕ್ಷಕರು ಚಟುವಟಿಕೆಗಳನ್ನು ಕೈಗೊಳ್ಳಲು ಮುಂಚಿತವಾಗಿ ಯೋಜನೆ ಸಿದ್ಧಪಡಿಸುತ್ತಾರೆ. ಇದು ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಚಟುವಟಿಕೆಗಳನ್ನು ಕೈಗೊಳ್ಳಲು ಮತ್ತು ತಮ್ಮನ್ನು ತಾವು ಸಿದ್ಧಪಡಿಸಿಕೊಳ್ಳಲು ಸಹಾಯ ಮಾಡುತ್ತದೆ.

**ಚಟುವಟಿಕೆಯ ನಂತರದ ವರದಿ:** ಚಟುವಟಿಕೆಗಳ ನಂತರ, ಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ಚಟುವಟಿಕೆಗಳ ಒಟ್ಟಾರೆ ವರದಿಯನ್ನು ತಯಾರಿಸಬಹುದು.

ಶಿಕ್ಷಕರು ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ತಾವು ಬಯಸಿದಂತೆ ಮಾರ್ಪಾಡುಗಳನ್ನು ಮಾಡಬಹುದು. ವಾರ್ಷಿಕ ಕ್ರಿಯಾ ಯೋಜನೆಯನ್ನು ಅಭಿವೃದ್ಧಿಪಡಿಸಲು ಸೂಚಿಸುವ ಸ್ವರೂಪವನ್ನು ಈ ಕೆಳಗೆ ಕೋಷ್ಟಕದಲ್ಲಿ ನೀಡಲಾಗಿದೆ.

ಗ್ರೇಡ್–6/7/8

| ತಿಂಗಳು / ವಾರ | ಚಟುವಟಿಕೆಯ ಹೆಸರು | ಕಲಿಕೆಯ ಉದ್ದೇಶಗಳು | ದಿನಗಳ ಸಂಖ್ಯೆ | ಅಗತ್ಯ ಸಂಪನ್ಮೂಲಗಳು | ಯೋಜನೆ (ಪೂರ್ವ ಚಟುವಟಿಕೆ) | ಅನುಷ್ಠಾನ (ಚಟುವಟಿಕೆ ನಡೆಯುವಲ್ಲಿ) | ಫಲಿತಾಂಶ (ನಂತರದ ಚಟುವಟಿಕೆ) | ಅಭಿಪ್ರಾಯ(*) |
|---|---|---|---|---|---|---|---|---|
| | | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |

* ವಿಶೇಷ ಅಗತ್ಯತೆವುಳ್ಳ ಮಕ್ಕಳ ಸಕ್ರಿಯ ಭಾಗವಹಿಸುವಿಕೆಗಾಗಿ ಅವರ ನಿರ್ದಿಷ್ಟ ಅವಶ್ಯಕತೆಗಳನ್ನು ಉಲ್ಲೇಖಿಸಬಹುದು.

## ವಾರ್ಷಿಕ ಕ್ರಿಯಾ ಯೋಜನೆಯ ಅನುಷ್ಠಾನ

ಪರಿಣಾಮಕಾರಿ ಅನುಷ್ಠಾನ ಮತ್ತು ಅಪೇಕ್ಷಿತ ಫಲಿತಾಂಶಗಳನ್ನು ಪಡೆಯಲು, ವಿವಿಧ ಕಾರ್ಯ ನಿರ್ವಹಿಸುವವರು ತಮ್ಮನ್ನು ಸೂಕ್ತ ರೀತಿಯಲ್ಲಿ ತೊಡಗಿಸಿಕೊಳ್ಳಬೇಕು. ಈ ಕಾರ್ಯಕ್ರಮದ ಅನುಷ್ಠಾನದಲ್ಲಿ ಇವರು ಪ್ರಮುಖ ಕಾರ್ಯ ನಿರ್ವಹಿಸುವವರಾಗಿರುತ್ತಾರೆ.

1. ಶಾಲೆಯ ಪ್ರಾಂಶುಪಾಲರು/ ಮುಖ್ಯೋಪಾಧ್ಯಾಯರು
2. ವಿವಿಧ ವಿಷಯ ಶಿಕ್ಷಕರು
3. 6–8ನೇ ತರಗತಿಗಳ ವಿದ್ಯಾರ್ಥಿಗಳು
4. ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಪೋಷಕರು
5. ಸಮುದಾಯ

## ಪ್ರಾಂಶುಪಾಲರು/ ಶಾಲೆಯ ಮುಖ್ಯೋಪಾಧ್ಯಾಯರ ಪಾತ್ರಗಳು ಮತ್ತು ಜವಾಬ್ದಾರಿಗಳು

10 ಸಂಭ್ರಮ ಶನಿವಾರ (ಬ್ಯಾಗ್‌ಲೆಸ್) ದಿನಗಳ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ರೂಪಿಸಲಾದ ಚಟುವಟಿಕೆಗಳ ಅನುಷ್ಠಾನಕ್ಕಾಗಿ ಭೌತಿಕ ಸೌಲಭ್ಯಗಳು/ಸಂಪನ್ಮೂಲಗಳನ್ನು ಒದಗಿಸುವ ಜವಾಬ್ದಾರಿಯನ್ನು ಪ್ರಾಂಶುಪಾಲರು / ಮುಖ್ಯೋಪಾಧ್ಯಾಯರು/ ಶಾಲೆಯ ಮುಖ್ಯಸ್ಥರು ನಾಯಕರಾಗಿರುತ್ತಾರೆ. ಯೋಜನೆಯನ್ನು ಅನುಷ್ಠಾನಗೊಳಿಸುವಾಗ, ಪ್ರಾಂಶುಪಾಲರು/ಮುಖ್ಯೋಪಾಧ್ಯಾಯರು ಹೀಗೆ ಮಾಡಬೇಕು:

1. ಶಾಲೆಯಲ್ಲಿ ವಾರ್ಷಿಕ ಕ್ರಿಯಾಯೋಜನೆಯ ಅನುಷ್ಠಾನಕ್ಕೆ ಮಾರ್ಗದರ್ಶನ, ಪ್ರೇರಣೆ ಮತ್ತು ಮೇಲ್ವಿಚಾರಣೆ ಮಾಡುವುದು.
2. ಯೋಜನೆಯ ಅಡಿಯಲ್ಲಿ ಅಪೇಕ್ಷಿತ ಚಟುವಟಿಕೆಗಳನ್ನು ಕಾರ್ಯಗತಗೊಳಿಸಲು ಸೂಕ್ತವಾದ ಭೌತಿಕ ಮತ್ತು ಆರ್ಥಿಕ ಸಂಪನ್ಮೂಲಗಳನ್ನು ಒದಗಿಸಿಕೊಡುವುದು.
3. ಯೋಜನೆಯ ವಿವಿಧ ಭಾಗೀದಾರರಿಂದ ಸೂಕ್ತ ಪ್ರತಿಕ್ರಿಯೆಯನ್ನು ತೆಗೆದುಕೊಳ್ಳುವುದು ಮತ್ತು ಕಾಲಕಾಲಕ್ಕೆ ಅಗತ್ಯವಿದ್ದರೆ ಸರಿಪಡಿಸುವ ಕ್ರಮಗಳನ್ನು ಜಾರಿಗೊಳಿಸುವುದು.
4. 10 ಸಂಭ್ರಮ ಶನಿವಾರ (ಬ್ಯಾಗ್‌ಲೆಸ್ ಡೇ) ದಿನಗಳ ಮಾರ್ಗದರ್ಶಿ ದಾಖಲೆಯಲ್ಲಿ ಸೂಚಿಸಿದಂತೆ ಅಪೇಕ್ಷಿತ ಉದ್ದೇಶಗಳನ್ನು ಸರಿಯಾಗಿ ಕಾರ್ಯಗತಗೊಳಿಸಲು ವಿವಿಧ ವಿಷಯ ಶಿಕ್ಷಕರಿಗೆ ಮಾರ್ಗದರ್ಶನ ಮತ್ತು ಬೆಂಬಲ ನೀಡುವುದು.
5. ಬೆಂಬಲ ಮತ್ತು ಅನುಕೂಲಕರ ಕಲಿಕೆಯ ವಾತಾವರಣವನ್ನು ಒದಗಿಸುವುದು.

## 2. ವಿವಿಧ ವಿಷಯ ಶಿಕ್ಷಕರ ಪಾತ್ರಗಳು ಮತ್ತು ಜವಾಬ್ದಾರಿಗಳು.

ಶಾಲೆಯ ಎಲ್ಲಾ ಶಿಕ್ಷಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು. ಶಿಕ್ಷಕರು ತಮ್ಮ ವಿಷಯಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಮೇಲೆ ಸೂಚಿಸಿದ ಉದ್ದೇಶಗಳ ಆಧಾರದಲ್ಲಿ ಗುರುತಿಸವುದು. ಭಾಷೆಗಳು, ಗಣಿತ, ವಿಜ್ಞಾನ, ಸಮಾಜ ವಿಜ್ಞಾನ, ದೈಹಿಕ ಶಿಕ್ಷಣ, ಕಲೆ, ಸಂಗೀತ ಮತ್ತು ವೃತ್ತಿಪರ ಕೆಲಸದ ಅನುಭವದಂತಹ ವಿಷಯಗಳನ್ನು ಬೋಧಿಸುವ ಶಿಕ್ಷಕರು ಕ್ಷೇತ್ರ ಭೇಟಿಗಳನ್ನು ಮತ್ತು ಕೌಶಲ ಆಧಾರಿತ ಚಟುವಟಿಕೆಗಳನ್ನು ಆಯೋಜಿಸುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಬಹುದು. ಅವರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ, ಕಲಿಕಾ ಸಾಮಗ್ರಿಗಳ ವ್ಯವಸ್ಥೆ, ನಿರಂತರ ಮಾರ್ಗದರ್ಶನ ಮತ್ತು ಸಮಾಲೋಚನಾ ಅವಧಿಗಳನ್ನು ನಡೆಸುವುದು, ಪಾರದರ್ಶಕ ಮೌಲ್ಯಮಾಪನ, ಕಾರ್ಯಕ್ಷಮತೆಯ ಬಗ್ಗೆ ನಿರಂತರ ಪ್ರತಿಕ್ರಿಯೆಯನ್ನು ನೀಡುವುದರ ಮೂಲಕ ವಿದ್ಯಾರ್ಥಿಗಳನ್ನು ಬೆಂಬಲಿಸುವುದು. ಈ ಕಾರ್ಯಕ್ರಮದ ಸಮಯದಲ್ಲಿ ಕಲಿಕಾ ಫಲಗಳನ್ನು ಸಾಧಿಸಲು ಶಿಕ್ಷಕರು ಚಟುವಟಿಕೆಯ ವೇಳಾಪಟ್ಟಿಯನ್ನು ಯೋಜಿಸುತ್ತಾರೆ.

**ಶಿಕ್ಷಕರಿಂದ ಈ ಕೆಳಗಿನ ಕಾರ್ಯಗಳನ್ನು ನಿರೀಕ್ಷಿಸಬಹುದು:**

- ➔ 10 ಸಂಭ್ರಮ ಶನಿವಾರ (ಬ್ಯಾಗ್‌ಲೆಸ್) ದಿನದ ಚಟುವಟಿಕೆಗಳ ಪ್ರಾಮುಖ್ಯತೆಯ ಬಗ್ಗೆ ಪೋಷಕರಿಗೆ ಅರಿವು ಮೂಡಿಸುವುದು.
- ➔ ಈ ಕಾರ್ಯಕ್ರಮದ ಮಹತ್ವದ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸುವುದು.
- ➔ ಮಾರ್ಗಸೂಚಿಗಳಲ್ಲಿ ನೀಡಲಾದ ಚಟುವಟಿಕೆಗಳ ಮಾಹಿತಿಯ ಆಧಾರದ ಮೇಲೆ ಚಟುವಟಿಕೆಗಳನ್ನು ಆಯ್ಕೆಮಾಡುವುದು ಅಥವಾ ಹೆಚ್ಚುವರಿಯಾಗಿ ವಿನ್ಯಾಸಗೊಳಿಸುವುದು ಹಾಗೂ ಚಟುವಟಿಕೆಗಳನ್ನು ನಡೆಸಲು ಪಾಠ ಯೋಜನೆಗಳನ್ನು ತಯಾರಿಸುವುದು.
- ➔ ಸಾಮಗ್ರಿಗಳು ಮತ್ತು ಸಂಪನ್ಮೂಲಗಳನ್ನು ಸಂಗ್ರಹಿಸುವುದು.
- ➔ ಪರಿಣಿತ ಸಂಸ್ಥೆಗಳು ಮತ್ತು ಸಮುದಾಯದೊಂದಿಗೆ ಸಂಪರ್ಕವನ್ನು ಸಾಧಿಸುವುದು.
- ➔ ಚಟುವಟಿಕೆಗಳನ್ನು ಆಯೋಜಿಸಿ, ಅವುಗಳನ್ನು ನಿತ್ಯ ಜೀವನದ ಸನ್ನಿವೇಶಗಳೊಂದಿಗೆ ಹೊಂದಿಸುವುದು.
- ➔ ಸಂಬಂಧಿತ ವಿಷಯ ಕ್ಷೇತ್ರಗಳೊಂದಿಗೆ ಅಡಕಗೊಂಡಿರುವ ಪರಿಕಲ್ಪನೆ, ಪ್ರಾಮುಖ್ಯತೆ, ಪ್ರಸ್ತುತತೆಯನ್ನು ವಿವರಿಸುವುದು.
- ➔ ಚಟುವಟಿಕೆಗಳ ಅನುಷ್ಠಾನದ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ, ಪ್ರೇರಣೆ ಮತ್ತು ಸಲಹೆ ನೀಡುವುದು.
- ➔ ಪ್ರತಿ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿ, ಗಮನಿಸಿ ಮತ್ತು ಮೌಲ್ಯಮಾಪನ ಮಾಡುವುದು.

## 3. 6–8 ನೇ ತರಗತಿಯ ವಿದ್ಯಾರ್ಥಿಗಳ ಪಾತ್ರಗಳು ಮತ್ತು ಜವಾಬ್ದಾರಿಗಳು

ವಿದ್ಯಾರ್ಥಿಗಳು ಯಾವುದೇ ಬೋಧನಾ ಕಲಿಕಾ ಪ್ರಕ್ರಿಯೆಯ ಬೆನ್ನೆಲುಬು. ವಿಭಿನ್ನ ಚಟುವಟಿಕೆಗಳಲ್ಲಿ ಅವರ ನಿಜವಾದ ಪಾಲ್ಗೊಳ್ಳುವಿಕೆ ಅತ್ಯಗತ್ಯ. ರಾಷ್ಟ್ರೀಯ ಶಿಕ್ಷಣ ನೀತಿ 2020 ಸಹ ಸಂತಸದಾಯಕ ಕಲಿಕೆಯ ವಾತಾವರಣದೊಂದಿಗೆ ತರಗತಿ ಕೊಠಡಿಯ ಒಳಗೆ ಮತ್ತು ಹೊರಗೆ ಅನುಭವಗಳನ್ನು ರಚಿಸುವ ಮೂಲಕ ತಮ್ಮದೇ ಆದ ಕಲಿಕೆಯ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವ ಮೂಲಕ ಪ್ರಾಯೋಗಿಕ ಕಲಿಕೆಗೆ ಒತ್ತು ನೀಡುತ್ತದೆ.

ಇದು ವಿವಿಧ ಕೌಶಲಗಳನ್ನು ಮಾತ್ರವಲ್ಲದೆ ವಿಷಯದ ಆಳವಾದ ತಿಳಿವಳಿಕೆಯನ್ನೂ ಸಹ ಅಭಿವೃದ್ಧಿಪಡಿಸುತ್ತದೆ. ವಿದ್ಯಾರ್ಥಿಗಳು ಹೀಗೆ ಮಾಡಬೇಕು–

- ➔ ತಾವು ಕೈಗೊಂಡ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದು.
- ➔ ಸ್ಥಳೀಯ ಕುಶಲಕರ್ಮಿಗಳೊಂದಿಗೆ ಸಂವಹನ ನಡೆಸುವುದು.
- ➔ ವರ್ಕ್ ಟೇಬಲ್, ಸುತ್ತಿಗೆ, ತಂತಿ ಕಟ್ಟರ್, ಇಕ್ಕಳ ಮುಂತಾದ ಆಧುನಿಕ ಉಪಕರಣಗಳ ಬಳಕೆಯ ಬಗ್ಗೆ ತಿಳಿಯುವುದು.
- ➔ ನೈಸರ್ಗಿಕ ವಿದ್ಯಮಾನಗಳನ್ನು ಅನ್ವೇಷಿಸುವುದು.
- ➔ ನಿರ್ದಿಷ್ಟ ವೃತ್ತಿಯನ್ನು ಗಮನದಲ್ಲಿಟ್ಟುಕೊಂಡು, ವೃತ್ತಿಪರ ಕೌಶಲಗಳ ವಿವಿಧ ಮಾರ್ಗಗಳನ್ನು ದೃಶ್ಯೀಕರಿಸುವುದು.
- ➔ ಅವರ ವೈಯಕ್ತಿಕ ಕುತೂಹಲ ಮತ್ತು ಸೃಜನಶೀಲತೆಗೆ ಸೂಕ್ತವಾದ ರೀತಿಯಲ್ಲಿ ವಸ್ತು ಮತ್ತು ಸಲಕರಣೆಗಳನ್ನು ಬಳಸುವುದು.

## 4. ಪೋಷಕರ ಪಾತ್ರಗಳು ಮತ್ತು ಜವಾಬ್ದಾರಿಗಳು

10 ಸಂಭ್ರಮ ಶನಿವಾರ (ಬ್ಯಾಗ್ ಲೆಸ್ ಡೇ) ಯೋಜನೆಯ ಯಶಸ್ಸಿಗೆ ಪೋಷಕರು ಪ್ರಮುಖ ಪಾಲುದಾರರಾಗಿರುತ್ತಾರೆ. ಅವರ ನಿರಂತರ ಬೆಂಬಲ ಮತ್ತು ತೊಡಗಿಸಿಕೊಳ್ಳುವಿಕೆಯನ್ನು ಈ ಮೂಲಕ ಕೋರಲಾಗಿದೆ:

- ➔ 10 ಸಂಭ್ರಮ ಶನಿವಾರ (ಬ್ಯಾಗ್‌ಲೆಸ್) ದಿನಗಳ ಅಡಿಯಲ್ಲಿ ವಿವಿಧ ಚಟುವಟಿಕೆಗಳನ್ನು ಕೈಗೊಳ್ಳಲು ತಮ್ಮ ಮಕ್ಕಳನ್ನು ಪ್ರೋತ್ಸಾಹಿಸುವುದು ಮತ್ತು ಬೆಂಬಲಿಸುವುದು.
- ➔ ತಮ್ಮ ಮಕ್ಕಳಲ್ಲಿ ವೃತ್ತಿ ಘನತೆಗೆ ಸೂಕ್ತವಾದ ಮನೋಭಾವವನ್ನು ಅಭಿವೃದ್ಧಿಪಡಿಸುವುದು.
- ➔ ಪೋಷಕ ಶಿಕ್ಷಕರ ಸಂಘ (ಪಿಟಿಎ) ಮೂಲಕ ಶಾಲಾ ಆಡಳಿತ ಮತ್ತು ನಿರ್ವಹಣೆಯನ್ನು ಬೆಂಬಲಿಸುವುದು.
- ➔ ಅಗತ್ಯವಿದ್ದಾಗ ಸೂಕ್ತ ಮತ್ತು ಸಮಯೋಚಿತ ಬೆಂಬಲವನ್ನು ನೀಡುವ ಮೂಲಕ ತಮ್ಮನ್ನು ತಾವು ತೊಡಗಿಸಿಕೊಳ್ಳುವುದು.
- ➔ ವಿಶೇಷ ಅಗತ್ಯವಿರುವ/ದಿವ್ಯಾಂಗ ಮಕ್ಕಳ (CwSN) ಪೋಷಕರು ತಮ್ಮ ಮಕ್ಕಳನ್ನು ಅಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಸಿದ್ಧಪಡಿಸಬೇಕು ಮತ್ತು ಪ್ರೇರೇಪಿಸಬೇಕು.

## 5. ಸಮುದಾಯದ ಪಾತ್ರಗಳು ಮತ್ತು ಜವಾಬ್ದಾರಿಗಳು

ಸಮಗ್ರ ಕಾರ್ಯಕ್ರಮದ ಅನುಷ್ಠಾನಕ್ಕೆ ಸಮುದಾಯದ ಭಾಗವಹಿಸುವಿಕೆ ಅತ್ಯಗತ್ಯ. 10 ಸಂಭ್ರಮ ಶನಿವಾರದ (ಬ್ಯಾಗ್‌ಲೆಸ್ ಡೇ) ಯಶಸ್ಸಿಗೆ, ಚಟುವಟಿಕೆಗಳ ಅನುಷ್ಠಾನದಲ್ಲಿ ಸಮುದಾಯದ ಬೆಂಬಲ ಮತ್ತು ತೊಡಗಿಸಿಳ್ಳುವಿಕೆ ಪ್ರಮುಖ ಅವಶ್ಯಕತೆಗಳಲ್ಲಿ ಒಂದಾಗಿದೆ.

- ➔ ಅವರ ನಿರ್ದಿಷ್ಟ ಕಾರ್ಯ ಕ್ಷೇತ್ರಗಳಲ್ಲಿ ಚಟುವಟಿಕೆ ಆಧಾರಿತ ಪ್ರಸ್ತುತಿಗಳು ಮತ್ತು ಪ್ರದರ್ಶನಗಳನ್ನು ಒದಗಿಸುವುದು.
- ➔ ಗ್ರಾಮದ ಜಾತ್ರೆ, ಮೇಳ, ಸಂತೆಗಳು ಇತ್ಯಾದಿಗಳ ಸಂದರ್ಭದಲ್ಲಿ ಶಾಲೆಯ ವಿದ್ಯಾರ್ಥಿಗಳು ಪಾಲ್ಗೊಳ್ಳಲು ಅನುವು ಮಾಡಿಕೊಡುವುದು.



- ಅವಶ್ಯಕತೆಯ ಸಂದರ್ಭದಲ್ಲಿ ವಸ್ತು ಮತ್ತು ಮಾನವ ಸಂಪನ್ಮೂಲಗಳ ರೂಪದಲ್ಲಿ ಬೆಂಬಲವನ್ನು ಒದಗಿಸುವುದು.
- 10 ಸಂಭ್ರಮ ಶನಿವಾರ (ಬ್ಯಾಗ್‌ಲೆಸ್ ಡೇ) ಅಡಿಯಲ್ಲಿ ಚಟುವಟಿಕೆಗಳನ್ನು ಆಯೋಜಿಸಲು ವ್ಯವಸ್ಥಿತ ಬೆಂಬಲವನ್ನು ಒದಗಿಸುವುದು.

## ಸಂಪನ್ಮೂಲಗಳು

10 ಸಂಭ್ರಮ ಶನಿವಾರ (ಬ್ಯಾಗ್‌ಲೆಸ್ ಡೇ) ದಿನಗಳ ಅಡಿಯಲ್ಲಿ ಯೋಜಿಸಲಾದ ಒಳಾಂಗಣ ಮತ್ತು ಹೊರಾಂಗಣ ಚಟುವಟಿಕೆಗಳ ಅನುಷ್ಠಾನಕ್ಕೆ ಸಾಮಾನ್ಯ ಮತ್ತು ನಿರ್ದಿಷ್ಟ ಸಂಪನ್ಮೂಲಗಳ ಅಗತ್ಯವಿರುತ್ತದೆ. ಉದಾಹರಣೆಗೆ, ಶಾಲಾವರಣದೊಳಗೆ ಅಭಿವೃದ್ಧಿಪಡಿಸಲಾದ ವೃತ್ತಿಪರ/ಕೌಶಲ ಪ್ರಯೋಗಾಲಯಗಳನ್ನು 6–8 ನೇ ತರಗತಿಗಳಲ್ಲಿ ವೃತ್ತಿಪರ ಶಿಕ್ಷಣ ಘಟಕಗಳ ಅಭಿವೃದ್ಧಿಗಾಗಿ 10 ಸಂಭ್ರಮ ಶನಿವಾರ (ಬ್ಯಾಗ್‌ಲೆಸ್ ಡೇ) ದಿನಗಳ ಅಡಿಯಲ್ಲಿ ಒಳಾಂಗಣ ಚಟುವಟಿಕೆಗಳನ್ನು ಕಾರ್ಯಗತಗೊಳಿಸಲು ಬಳಸಬಹುದು.

## ಸಾಮಾನ್ಯ ಸಂಪನ್ಮೂಲಗಳು

ಈ ಸಂಪನ್ಮೂಲಗಳು ಯಾವುವೆಂದರೆ:

- **ಭೌತಿಕ/ವಸ್ತು ಸಂಪನ್ಮೂಲಗಳು –** ಅಗತ್ಯವಿರುವ ಸ್ಥಳ, ವಿಷಯ ಪ್ರಯೋಗಾಲಯಗಳು, ವೃತ್ತಿಪರ/ ಕೌಶಲ ಪ್ರಯೋಗಾಲಯಗಳು, ಉದ್ಯಾನವನಗಳು, ತೋಟಗಳು, ಕಂಪ್ಯೂಟರ್‌ಗಳು/ಲ್ಯಾಪ್‌ಟಾಪ್‌ಗಳು, ಸ್ಪೀಕರ್‌ಗಳು, ಪೋರ್ಟಬಲ್ ಮೈಕ್‌ಗಳು, ಪ್ರೊಜೆಕ್ಟರ್‌ಗಳು, ವೀಡಿಯೊ ಸಂಪನ್ಮೂಲಗಳು, ಬ್ಯಾನರ್‌ಗಳು, ಪೋಸ್ಟರ್‌ಗಳು, ಮಾದರಿಗಳು, ಚಾರ್ಟ್‌ಗಳು; ಪ್ರಥಮ ಚಿಕಿತ್ಸಾ ಪೆಟ್ಟಿಗೆ, ಬಳಸಬಹುದಾದ ಮತ್ತು ಬಳಕೆಯಾಗದ ಉಪಕರಣಗಳು ಮತ್ತು ಗ್ಯಾಜೆಟ್‌ಗಳು.
- **ಆರ್ಥಿಕ ಸಂಪನ್ಮೂಲಗಳು –** ಚಟುವಟಿಕೆಗಳಿಗೆ ಅನುದಾನದ ಹಂಚಿಕೆ, ಸಾರಿಗೆ ಸಂಪರ್ಕ, ಅಗತ್ಯ ವ್ಯವಸ್ಥೆಗಳು ಇತ್ಯಾದಿ..
- **ಮಾನವ ಸಂಪನ್ಮೂಲಗಳು –** ಸ್ಥಳೀಯವಾಗಿ ಲಭ್ಯವಿರುವ ಕರಕುಶಲ ವ್ಯಕ್ತಿಗಳು ಮತ್ತು ನುರಿತ ಸಂಪನ್ಮೂಲ ವ್ಯಕ್ತಿಗಳು

## ಚಟುವಟಿಕೆ ಆಧಾರಿತ ಸಂಪನ್ಮೂಲಗಳು

ಈ ಸಂಪನ್ಮೂಲಗಳು ಅನುಷ್ಠಾನದಲ್ಲಿರುವ ಚಟುವಟಿಕೆಯ ನಿರ್ದಿಷ್ಟ ಅವಶ್ಯಕತೆಗಳನ್ನು ಒಳಗೊಂಡಿರಬಹುದು. ಅಗತ್ಯವಿರುವ ಪ್ರತಿಯೊಂದು ಸಂಪನ್ಮೂಲಗಳ ವಿವರಗಳನ್ನು ಉದಾಹರಣೆಯ ಅಡಿಯಲ್ಲಿ ಚಟುವಟಿಕೆಯೊಂದಿಗೆ ನೀಡಲಾಗಿದೆ.

## ಸಮಯ ಹಂಚಿಕೆ

ಸರಾಸರಿಯಾಗಿ, ಶಿಕ್ಷಕರು ಮತ್ತು ಮಕ್ಕಳು ಶಾಲೆಯಲ್ಲಿ ವರ್ಷಕ್ಕೆ ಸುಮಾರು 6 ಗಂಟೆಗಳಿಗಿಂತ ಹೆಚ್ಚು 1000 ಗಂಟೆಗಳ ಕಾಲ ಇರುತ್ತಾರೆ. ಈ ಕಾರ್ಯಕ್ರಮದ ಚಟುವಟಿಕೆಗಳಿಗೆ ಕನಿಷ್ಠ 10 ದಿನಗಳು ಅಥವಾ 60 ಗಂಟೆಗಳ ಶಾಲಾ ಸಮಯವನ್ನು ನಿಗದಿಪಡಿಸಬೇಕು. ಶಾಲೆಯು ಐದು ದಿನಗಳ ಎರಡು ಭಾಗಗಳಲ್ಲಿ ಚಟುವಟಿಕೆಗಳನ್ನು ಯೋಜಿಸಬಹುದು ಎಂದು ಸೂಚಿಸಲಾಗಿದೆ.



## ಮೌಲ್ಯಾಂಕನ ಮತ್ತು ಮೌಲ್ಯಮಾಪನ




ಸಂತಸದಾಯಕವಾಗಿ ವಿವಿಧ ರೀತಿಯ ಹಾಗೂ ವಿವಿಧ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ತಮ್ಮನ್ನು ತಾವು ತೊಡಗಿಸಿಕೊಳ್ಳಲು ಆದ್ಯತೆ ನೀಡುವುದು ಕಾರ್ಯಕ್ರಮಗಳ ಉದ್ದೇಶವಾಗಿದೆ. ಕಾರ್ಯಕ್ರಮದ ಸಮಯದಲ್ಲಿ ಕಲಿಕೆಯಲ್ಲಿ ವಿದ್ಯಾರ್ಥಿಗಳ ಆಸಕ್ತಿ ಮತ್ತು ಮನೋಭಾವವನ್ನು ಶಿಕ್ಷಕರು ಗಮನಿಸಬಹುದು. ಆದರೂ, ವಿದ್ಯಾರ್ಥಿಗಳಿಗೆ ಯಾವುದೇ ಅಂಕಗಳು ಅಥವಾ ಶ್ರೇಣಿಗಳನ್ನು

ನೀಡಬೇಕೆಂದಿಲ್ಲ, ಕಲಿಕೆಯಲ್ಲಿ ಸುಧಾರಣೆಗಾಗಿ ಶಿಕ್ಷಕರು ಆಗಾಗ್ಗೆ ಪ್ರತಿಕ್ರಿಯೆಗಳನ್ನು ನೀಡುವ ಮೂಲಕ ಅಪೇಕ್ಷಿತ ಉದ್ದೇಶಗಳನ್ನು ಸಾಧಿಸಲು ಅವರಿಗೆ ಸಹಾಯ ಮಾಡಲು, ಆಂತರಿಕ ಮತ್ತು ಅನೌಪಚಾರಿಕ ಮೌಲ್ಯಮಾಪನವನ್ನು ಕೈಗೊಳ್ಳಬಹುದು. ಸ್ವ-ಕಲಿಕೆಯನ್ನು ಉತ್ತೇಜಿಸಲು ಕಲಿಯುವವರಿಗೆ ಸ್ವ-ಮೌಲ್ಯಾಂಕನ ಮತ್ತು ಮೌಲ್ಯಮಾಪನವನ್ನು ಪ್ರೋತ್ಸಾಹಿಸಲಾಗುತ್ತದೆ.

## ವಿಶೇಷ ಅಗತ್ಯತೆವುಳ್ಳ (CwSN) ಮಕ್ಕಳ ಆರೈಕೆ

ನಮ್ಮ ಶಾಲಾ ವ್ಯವಸ್ಥೆಯಲ್ಲಿ, ವಿಶೇಷ ಅಗತ್ಯವುಳ್ಳ ಮಕ್ಕಳು (CwSN) ಸಹ ದಾಖಲಾಗಿರುತ್ತಾರೆ. ಸಾಮಾನ್ಯವಾಗಿ, ಈ ಮಕ್ಕಳನ್ನು ನೋಡಿಕೊಳ್ಳಲು ವಿಶೇಷ ಶಿಕ್ಷಕರನ್ನು ನೇಮಿಸಲಾಗುತ್ತದೆ.



ಸಂಭ್ರಮ ಶನಿವಾರ (ಬ್ಯಾಗ್‌ಲೆಸ್ ಡೇ) ಚಟುವಟಿಕೆಗಳ ಸಮಯದಲ್ಲಿ, ವಿಶೇಷ ಶಿಕ್ಷಕರು ಈ ಮಕ್ಕಳೊಂದಿಗೆ ಇರುತ್ತಾರೆ ಮತ್ತು ಚಟುವಟಿಕೆಗಳಿಗೆ ಸಂಬಂಧಿಸಿದ ಎಲ್ಲಾ ಪರಿಕಲ್ಪನೆಗಳನ್ನು ವಿವರಿಸುತ್ತಾರೆ ಹಾಗೂ ಮಾರ್ಗದರ್ಶನ ಮಾಡುತ್ತಾರೆ. ಇದು ಎಲ್ಲಾ ಸಂಬಂಧಿತ ಚಟುವಟಿಕೆಗಳನ್ನು ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತದೆ.

ಒಂದು ವೇಳೆ ಶಾಲೆಯಲ್ಲಿ ವಿಶೇಷ ಶಿಕ್ಷಕರು ಲಭ್ಯವಿಲ್ಲದಿದ್ದರೆ, ಈ ಮಕ್ಕಳ ಪೋಷಕರನ್ನು ತಮ್ಮ ಮಗುವಿನೊಂದಿಗೆ ಭಾಗವಹಿಸುವಂತೆ ಹೇಳಬಹುದು. ವಿಶೇಷ ಅಗತ್ಯವುಳ್ಳ ಮಕ್ಕಳಿಗಾಗಿ ತರಬೇತಿ ಪಡೆದ ಶಿಕ್ಷಕರು ಸಹ ಈ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬಹುದು. ಶಿಕ್ಷಕ ಸಂಯೋಜಕರ ಸಹಾಯದಿಂದ, ಮುಂಚಿತವಾಗಿ ಉತ್ತಮವಾಗಿ ಚಟುವಟಿಕೆಗಳನ್ನು ಶಿಕ್ಷಕರು ಯೋಜಿಸಬೇಕು ಮತ್ತು ಪ್ರತಿ ಚಟುವಟಿಕೆಗೆ ಮಕ್ಕಳನ್ನು ಮಾನಸಿಕವಾಗಿ ಸಿದ್ಧಪಡಿಸಬೇಕು.

### ರಾಷ್ಟ್ರೀಯ ವೃತ್ತಿ ಸೇವೆ

ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ

https://www.ncs.gov.in/

ರಾಷ್ಟ್ರೀಯ ವೃತ್ತಿ ಸೇವೆ (NCS) ಭಾರತದ ನಾಗರಿಕರಿಗೆ ಉದ್ಯೋಗ ಮತ್ತು ವೃತ್ತಿ ಸಂಬಂಧಿತ ಸೇವೆಗಳ ವ್ಯಾಪಕ ಶ್ರೇಣಿಯನ್ನು ಒದಗಿಸುವ ಒನ್-ಸ್ಟಾಪ್ ಮಾರ್ಗವಾಗಿದೆ. ಇದು ಉದ್ಯೋಗಾಕಾಂಕ್ಷಿಗಳು ಮತ್ತು ಉದ್ಯೋಗದಾತರು, ತರಬೇತಿ ಮತ್ತು ವೃತ್ತಿ ಮಾರ್ಗದರ್ಶನವನ್ನು ಬಯಸುವ ಅಭ್ಯರ್ಥಿಗಳು, ತರಬೇತಿ ಮತ್ತು ವೃತ್ತಿ ಸಮಾಲೋಚನೆಯನ್ನು ಒದಗಿಸುವ ಏಜೆನ್ಸಿಗಳ ನಡುವಿನ ಅಂತರವನ್ನು ಕಡಿಮೆ ಮಾಡುವ ಕೆಲಸ ಮಾಡುತ್ತದೆ.

ಈ ಪೋರ್ಟಲ್ ಉದ್ಯೋಗಾಕಾಂಕ್ಷಿಗಳು, ಉದ್ಯೋಗದಾತರು, ಕೌಶಲ ಮಾರ್ಗದರ್ಶಕರು, ವೃತ್ತಿ ಸಲಹೆಗಾರರು, ಸ್ಥಳೀಯ ಸೇವಾ ಪೂರೈಕೆದಾರರು (LSP ಗಳು), ವೃತ್ತಿ ಕೇಂದ್ರಗಳು, ಉದ್ಯೋಗ ಸಂಸ್ಥೆಗಳು, ಕುಟುಂಬಗಳು (LSPಗಳ ಸೇವೆಗಳನ್ನು ಪಡೆಯಲು) ಮತ್ತು ಸರ್ಕಾರಿ ಇಲಾಖೆಗಳ ನೋಂದಣಿಯನ್ನು ಸುಗಮಗೊಳಿಸುತ್ತದೆ.

## ಉದಾಹರಣೆಗಳೊಂದಿಗೆ ಚಟುವಟಿಕೆಗಳ ಸೂಚಿತ ಪಟ್ಟಿ.

ಶಾಲಾ ಶಿಕ್ಷಣ ನಿರ್ದೇಶನಾಲಯ/ಶಿಕ್ಷಕರು ಕಾರ್ಯಕ್ರಮದ ಉದ್ದೇಶಗಳನ್ನು ಅರ್ಥಮಾಡಿಕೊಂಡ ನಂತರ ಸ್ಥಳೀಯ ಸನ್ನಿವೇಶಗಳಿಗೆ ಅನುಗುಣವಾಗಿ ವಿವಿಧ ಸಂಭ್ರಮ ಶನಿವಾರ (ಬ್ಯಾಗ್ ಲೆಸ್) ದಿನಗಳ ಚಟುವಟಿಕೆಗಳನ್ನು ಗುರುತಿಸಬಹುದು, ವಿವಿಧ ವರ್ಗಗಳ ವಿಶೇಷ ಚೇತನ ಮಕ್ಕಳ ಅಗತ್ಯತೆಗಳು, ವಿವಿಧ ಚಟುವಟಿಕೆಗಳು, ಅವರು ತೆಗೆದುಕೊಳ್ಳುವ ಸಮಯ, ಚಟುವಟಿಕೆಗಳ ಕ್ರಮ ಇತ್ಯಾದಿಗಳನ್ನು ನೋಡಬಹುದು. ಹಲವು ನಿಗದಿತ ಮಾದರಿ ಚಟುವಟಿಕೆಗಳನ್ನು ಕೆಳಗೆ ನೀಡಲಾಗಿದೆ, ಇವುಗಳಿಂದ ಮಕ್ಕಳ ಅಗತ್ಯತೆಗಳು ಮತ್ತು ಸಂದರ್ಭಗಳಿಗೆ ಅನುಗುಣವಾಗಿ ಚಟುವಟಿಕೆಗಳನ್ನು ಆಯ್ಕೆ ಮಾಡಬಹುದು. ಶಿಕ್ಷಕರು ಸ್ಥಳೀಯ ಅವಶ್ಯಕತೆಗಳನ್ನು ಗಮನದಲ್ಲಿರಿಸಿಕೊಂಡು ತಮ್ಮದೇ ಆದ ಚಟುವಟಿಕೆಗಳನ್ನು ವಿನ್ಯಾಸಗೊಳಿಸಬಹುದು.

10 ಸಂಭ್ರಮ ಶನಿವಾರ (ಬ್ಯಾಗ್ ಲೆಸ್) ದಿನಗಳಿಗೆ ಸಂಬಂಧಿಸಿದ ಪ್ರಮುಖ ಚಟುವಟಿಕೆಗಳನ್ನು ಶಿಕ್ಷಕರಿಂದ ಸಿದ್ಧಪಡಿಸಲಾಗಿದೆ. ಪ್ರಾಯೋಗಿಕ ಮಾನ್ಯತೆಗಾಗಿ, ಚಟುವಟಿಕೆಗಳ ವಿವರಗಳನ್ನು ಸಹ ಉದಾಹರಣೆಗಳೊಂದಿಗೆ ಇಲ್ಲಿ ವಿವರಿಸಲಾಗಿದೆ. ಉತ್ತಮ ತಿಳಿವಳಿಕೆಗಾಗಿ ಅನುಕರಣೀಯ ಚಟುವಟಿಕೆಗಳನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ, ಭಾಗ ಎ–ವಿಜ್ಞಾನ, ಪರಿಸರ ಮತ್ತು ತಂತ್ರಜ್ಞಾನ. ಭಾಗ ಬಿ – ಸಾರ್ವಜನಿಕ ಕಛೇರಿಗಳು, ಸ್ಥಳೀಯ ಕೈಗಾರಿಕೆಗಳು ಮತ್ತು ವ್ಯಾಪಾರ, ಮತ್ತು ಭಾಗ ಸಿ – ಕಲೆ, ಸಂಸ್ಕೃತಿ ಮತ್ತು ಇತಿಹಾಸ.

- ➔ ರಾಷ್ಟ್ರೀಯ ಸ್ಮಾರಕಗಳು, ವಸ್ತುಸಂಗ್ರಹಾಲಯಗಳಿಗೆ ಭೇಟಿ
- ➔ ಕರಕುಶಲ: ಸೆಣಬು ತಯಾರಿಕೆ, ಬಿದಿರಿನ ಕೆಲಸ, ಕ್ರಾಫ್ಟ್
- ➔ "ಕಸದಿಂದ ರಸ"
- ➔ ಶೈಕ್ಷಣಿಕ ಆಟಗಳು/ಕ್ರೀಡೆಗಳು
- ➔ ನೈರ್ಮಲ್ಯ ಮತ್ತು ಶುಚಿತ್ವ
- ➔ ಪರಿಸರ ಮತ್ತು ಹಸಿರೀಕರಣ ಚಟುವಟಿಕೆಗಳು
- ➔ ಸಂಗೀತ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು
- ➔ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಕ್ಕೆ ಸಂಬಂಧಿಸಿದ ಚಟುವಟಿಕೆಗಳು (ICT)
- ➔ ಮೌಲ್ಯ ಮತ್ತು ಶಾಂತಿ ಶಿಕ್ಷಣ
- ➔ ರಾಷ್ಟ್ರೀಯ ಹಬ್ಬಗಳ ಆಚರಣೆ
- ➔ ಸ್ಥಳೀಯ ಕರಕುಶಲಕರ್ಮಿ/ಕುಶಲಕರ್ಮಿಗಳೊಂದಿಗೆ ಸಂವಹನ
- ➔ ಯೋಜನೆ ಆಧಾರಿತ ಚಟುವಟಿಕೆಗಳು
- ➔ ಅನಿಮೇಷನ್, ಗ್ರಾಫಿಕ್, ಫ್ಯಾಶನ್ ಡಿಸೈನಿಂಗ್
- ➔ ಗಾಳಿಪಟ ತಯಾರಿಕೆ, ನಾಟಕಗಳು, ಸ್ಕ್ರಾಪ್‌ಬುಕ್ ರಚನೆ, ಇತ್ಯಾದಿ.
- ➔ ಮಹಿಳಾ ಪೊಲೀಸ್ ಠಾಣೆ, ಬ್ಯಾಂಕ್, ಇತರೆ ಸರ್ಕಾರಿ ಕಚೇರಿಗಳಾದ ಅಂಚೆ ಕಚೇರಿ, ರೈಲ್ವೆ ನಿಲ್ದಾಣಗಳು, ಆಸ್ಪತ್ರೆಗಳು, ಪಾಲಿಟೆಕ್ನಿಕ್ ಕಾಲೇಜುಗಳು ಹಾಗೂ ತರಬೇತಿ ಕೇಂದ್ರಗಳು, ವಸ್ತುಸಂಗ್ರಹಾಲಯಗಳು, ಪರಂಪರೆಯ ತಾಣಗಳು, ನ್ಯಾಯಬೆಲೆ ಅಂಗಡಿ ಇತ್ಯಾದಿ.
- ➔ ವಲಯವಾರು ಚಟುವಟಿಕೆಗಳು, ಮಾಹಿತಿ ತಂತ್ರಜ್ಞಾನ ಸೇವೆಗಳು (ITeS). ಇಂಟರ್ನೆಟ್ ಆಫ್ ಥಿಂಗ್ಸ್ (IoT), ನೆಟ್‌ವರ್ಕಿಂಗ್, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ (AI), ರೊಬೊಟಿಕ್ಸ್ ಮತ್ತು ಡೂಡ್ಲಿಂಗ್ ಇತ್ಯಾದಿ.

# ಭಾಗ-ಎ

## ವಿಜ್ಞಾನ, ಪರಿಸರ ಮತ್ತು ತಂತ್ರಜ್ಞಾನ

**ಚಟುವಟಿಕೆ 1**

| ಪಕ್ಷಿಧಾಮಕ್ಕೆ ಭೇಟಿ ನೀಡಿ | |
|---|---|
| ಚಟುವಟಿಕೆಯ ವಿಧ | ಹೊರಾಂಗಣ |
| ಬೇಕಾಗುವ ಅವಧಿ | 4 ಗಂಟೆಗಳು |
| ಅಭಿವೃದ್ಧಿಪಡಿಸ ಬೇಕಾದ ಕೌಶಲಗಳು | ವೀಕ್ಷಣಾ ಕೌಶಲಗಳು, ತಾರ್ಕಿಕ ಮತ್ತು ಚಿಂತನೆಯ ಕೌಶಲಗಳು, ಪ್ರಕೃತಿಯೊಂದಿಗೆ ಸಮನ್ವಯತೆಯ ಕೌಶಲ, ಸಂವಹನ ಕೌಶಲ, ಪರಸ್ಪರ ಹೊಂದಾಣಿಕೆಯ ಕೌಶಲಗಳು |



**ಕಲಿಕಾ ಫಲಗಳು**

- ಪಕ್ಷಿಗಳ ಬಗ್ಗೆ ಜ್ಞಾನವನ್ನು ಪಡೆಯುವರು.
- ವಿವಿಧ ಸ್ಥಳಗಳಲ್ಲಿರುವ ಪಕ್ಷಿಗಳ ಚಲನವಲನಗಳ ಬಗ್ಗೆ ಜ್ಞಾನವನ್ನು ಪಡೆಯುವರು.
- ಮಾನವರು ಮತ್ತು ನೈಸರ್ಗಿಕ ಪರಿಸರದ ನಡುವಿನ ಸಂಪರ್ಕವನ್ನು ವಿವರಿಸುವರು.
- ಪಕ್ಷಿಧಾಮಗಳ ರಕ್ಷಣೆ ಮತ್ತು ಸಂರಕ್ಷಣೆ ಬಗ್ಗೆ ತಿಳಿಯುವರು.

**ಅಗತ್ಯ ಸಾಮಗ್ರಿಗಳು**



- ಆರಾಮದಾಯಕ ಪಾದರಕ್ಷೆಗಳು
- ಬ್ರಿಮ್ಡ್ ಹ್ಯಾಟ್/ಕ್ಯಾಪ್
- ಹಕ್ಕಿ ಹಾಡು-ಸಿಡಿಗಳು
- ನೋಟ್ ಪುಸ್ತಕ ಮತ್ತು ಪೆನ್
- ದುರ್ಬೀನುಗಳು (ಬೈನಾಕ್ಯುಲರ್) (ಲಭ್ಯವಿದ್ದರೆ)

**ಶಿಕ್ಷಕರಿಗೆ ಸೂಚನೆ**

- ಭೇಟಿ ನೀಡಬೇಕಾದ ಸ್ಥಳವನ್ನು ಆಯ್ಕೆಮಾಡುವುದು.
- ಚಟುವಟಿಕೆಯ ಯೋಜನೆಯನ್ನು ಅಭಿವೃದ್ಧಿಪಡಿಸುವುದು.
- ಚಟುವಟಿಕೆಯ ಉದ್ದೇಶ ಮತ್ತು ತಯಾರಿಕೆಯ ವಿಧಾನದ ಬಗ್ಗೆ ವಿದ್ಯಾರ್ಥಿಗೆ ಸಂಕ್ಷಿಪ್ತವಾಗಿ ತಿಳಿಸುವುದು.
- ಅನುದಾನ, ಕಚ್ಚಾ ಸಾಮಗ್ರಿ, ಸಾರಿಗೆ ಇತ್ಯಾದಿ ಚಟುವಟಿಕೆಗಳಿಗೆ ಅಗತ್ಯ ವ್ಯವಸ್ಥೆಗಳನ್ನು ಮಾಡುವುದು.
- ಚಟುವಟಿಕೆಯ ಉದ್ದೇಶ ಮತ್ತು ತಯಾರಿಕೆಯ ವಿಧಾನದ ಬಗ್ಗೆ ಪೋಷಕರಿಗೆ ತಿಳಿಸುವುದು.
- ಮಕ್ಕಳಿಗೆ ವೀಕ್ಷಣೆಯಲ್ಲಿ ಆಸಕ್ತಿ ಮೂಡಿಸುವುದು.
- ಸಂವಾದಿಸಲು ಮತ್ತು ಪ್ರಶ್ನೆಗಳನ್ನು ಕೇಳಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.
- ಪಕ್ಷಿಗಳ ವೀಕ್ಷಣೆಯ ಬಗ್ಗೆ ಸಣ್ಣ ಸ್ಮರಣೀಯ ಟಿಪ್ಪಣಿ ಬರೆಯಲು ಮಕ್ಕಳನ್ನು ಪ್ರೋತ್ಸಾಹಿಸುವುದು.
- ಚಟುವಟಿಕೆಯ ವರದಿಯನ್ನು ಪ್ರಾಂಶುಪಾಲರು/ಮುಖ್ಯೋಪಾಧ್ಯಾಯರಿಗೆ ಸಲ್ಲಿಸುವುದು.

**ವಿದ್ಯಾರ್ಥಿಗಳಿಗೆ ಸೂಚನೆ**

- ಶಿಕ್ಷಕರು ನೀಡಿದ ಸಂಕ್ಷಿಪ್ತ ಸೂಚನೆಗಳ ಪ್ರಕಾರ ಸಿದ್ಧತೆಗಳನ್ನು ಮಾಡಿ.
- ಸ್ಥಳದ ಇತಿಹಾಸವನ್ನು ಅಧ್ಯಯನ ಮಾಡಿ.
- ಚಟುವಟಿಕೆಯ ಸಂದರ್ಭದಲ್ಲಿ ಶಿಸ್ತು ಕಾಪಾಡಿ
- ಶಿಕ್ಷಕರು, ಮಾರ್ಗದರ್ಶಿ ಅಥವಾ ಬೋಧಕರ ಸೂಚನೆಗಳನ್ನು ಅನುಸರಿಸಿ.
- ವರದಿಗಾಗಿ ಮಾಹಿತಿಯನ್ನು ಸಂಗ್ರಹಿಸಿ

**ವಿಧಾನ**

- ವಿದ್ಯಾರ್ಥಿಗಳಿಗೆ ಪಕ್ಷಿಧಾಮದ ಭೇಟಿಯ ಬಗ್ಗೆ ಮುಂಚಿತವಾಗಿ ತಿಳಿಸುವುದು.
- ಪಕ್ಷಿಧಾಮದ ಮಹತ್ವದ ಬಗ್ಗೆ ವಿದ್ಯಾರ್ಥಿಗಳಿಗೆ ವಿವರಿಸುವುದು.
- ನಿಗದಿ ಪಡಿಸಿದ ಸ್ಥಳಕ್ಕೆ ಭೇಟಿ ನೀಡುವುದು.
- ಕಾರ್ಮಿಕರೊಂದಿಗೆ ಸಂವಹನ ನಡೆಸಲು ವಿದ್ಯಾರ್ಥಿಗಳನ್ನು ಪ್ರೇರೇಪಿಸುವುದರ ಜೊತೆಗೆ ಪಕ್ಷಿಧಾಮದ ಅಭಿವೃದ್ಧಿಗೆ ಬಳಸುವ ವಿವಿಧ ಕಚ್ಚಾ ವಸ್ತುಗಳ ಬಗ್ಗೆ ತಿಳಿಸುವುದು.
- ಪಕ್ಷಿಗಳು ಮತ್ತು ಅವುಗಳ ವರ್ತನೆಗಳ ಬಗ್ಗೆ ಚರ್ಚಿಸುವುದು.
- ಚಟುವಟಿಕೆಯ ಸಮಯದಲ್ಲಿ ವಿದ್ಯಾರ್ಥಿಗಳ ಅವಲೋಕನ ಮತ್ತು ಕಲಿಕೆಯ ಬಗ್ಗೆ ಚರ್ಚಿಸುವುದು.
- ವರದಿಯನ್ನು ತಯಾರಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.

**ಮೌಲ್ಯಮಾಪನ**

ಪ್ರತಿಯೊಂದು ಚಟುವಟಿಕೆಯನ್ನು ಈ ಕೆಳಗಿನ ಮಾನದಂಡಗಳ ಮೇಲೆ ಮೌಲ್ಯಮಾಪನ ಮಾಡಬೇಕಾಗುತ್ತದೆ

- ಸಮಯ ನಿರ್ವಹಣೆ
- ಸೃಜನಶೀಲತೆ
- ಕಲ್ಪನೆ
- ತಂಡದ ಕೆಲಸ
- ಭಾಷಾ ಸಾಮರ್ಥ್ಯ
- ಪ್ರಶ್ನಿಸುವ ಕೌಶಲ
- ಶಿಸ್ತು



**ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು**

ವೀಕ್ಷಣೆ, ವಿಶ್ಲೇಷಣೆ, ವ್ಯಾಖ್ಯಾನ, ವರದಿಗಳನ್ನು ಬರೆಯುವ ಕೌಶಲಗಳನ್ನು ಅಭಿವೃದ್ಧಿಪಡಿಸುವ ಮೂಲಕ, ಅವರು ತಮ್ಮ ಆಸಕ್ತಿಗೆ ಅನುಗುಣವಾಗಿ ಭವಿಷ್ಯದಲ್ಲಿ ಈ ಕೆಳಗಿನ ವೃತ್ತಿಗಳನ್ನು ಆಯ್ಕೆಮಾಡಿಕೊಳ್ಳಬಹುದು ಎಂದು ಮಕ್ಕಳಿಗೆ ವಿವರಿಸಬಹುದು.

- ವನ್ಯಜೀವಿ ಛಾಯಾಗ್ರಾಹಕ
- ಪರಿಸರವಾದಿ
- ವರದಿಗಾರ
- ವಿಜ್ಞಾನಿ
- ಪತ್ರಕರ್ತ

**ಚಟುವಟಿಕೆ 2**

| ಮಣ್ಣು ಪರೀಕ್ಷೆ | |
|---|---|
| ಚಟುವಟಿಕೆಯ ವಿಧ | ಒಳಾಂಗಣ |
| ಬೇಕಾಗುವ ಅವಧಿ | 2 ಗಂಟೆಗಳು |
| ಅಭಿವೃದ್ಧಿಪಡಿಸಬೇಕಾದ ಕೌಶಲಗಳು | ತಾರ್ಕಿಕ ಮತ್ತು ಚಿಂತನಾ ಕೌಶಲ, ವೈಜ್ಞಾನಿಕವಾಗಿ ಪ್ರಶ್ನಿಸುವ ಕೌಶಲ, ಮಾಪನ ಮತ್ತು ಡೇಟಾ ಸಂಗ್ರಹಣೆ, ಸಂವಹನ ಕೌಶಲಗಳು, ಇತ್ಯಾದಿ. |



**ಕಲಿಕಾ ಫಲಗಳು**

- ಮಣ್ಣಿನ ಮಹತ್ವ ಮತ್ತು ಅದರ ಗುಣಲಕ್ಷಣಗಳನ್ನು ಅರ್ಥಮಾಡಿಕೊಳ್ಳುವುದು.
- pH ಮಾಪನ, ಸಾರಜನಕ-ರಂಜಕ-ಪೊಟ್ಯಾಸಿಯಮ್ (NPK) ಮಾಪನ ಮತ್ತು ಮಣ್ಣಿನ ತೇವಾಂಶ ಮಾಪನದಂತಹ ಮಣ್ಣಿನ ಪರೀಕ್ಷಾ ಅಭ್ಯಾಸಗಳನ್ನು ನಿರ್ವಹಿಸಲು ಸಾಧ್ಯವಾಗುತ್ತದೆ.
- ಮಣ್ಣು, ಸಸ್ಯಗಳು, ಪ್ರಾಣಿಗಳು ಮತ್ತು ಮಾನವರ ನಡುವಿನ ಪರಸ್ಪರ ಸಂಬಂಧದ ಪ್ರಾಮುಖ್ಯತೆಯನ್ನು ಚರ್ಚಿಸುವುದು.

**ಅಗತ್ಯ ಸಾಮಗ್ರಿಗಳು**

- ಮಣ್ಣು ಪರೀಕ್ಷಾ ಕಿಟ್
- NPK ಮತ್ತು ಮಣ್ಣಿನ ತೇವಾಂಶ ಮಾಪನ ಕಿಟ್
- ಮಣ್ಣಿನ ಮಾದರಿ
- ಖುರ್ಪಿ
- ಕಂಟೇನರ್ ಅಥವಾ ಪಾತ್ರೆ
- ನೀರು
- ಸುರಕ್ಷತಾ ಕನ್ನಡಕ ಮತ್ತು ಕೈಗವಸುಗಳು
- ನೋಟ್‌ಬುಕ್ ಮತ್ತು ಪೆನ್

**ಶಿಕ್ಷಕರಿಗೆ ಸೂಚನೆ**

- ಚಟುವಟಿಕೆಯ ಯೋಜನೆಯನ್ನು ಅಭಿವೃದ್ಧಿಪಡಿಸುವುದು.
- ಚಟುವಟಿಕೆಗೆ ಅಗತ್ಯವಿರುವ ಮತ್ತು ಶಾಲೆಯಲ್ಲಿ ಲಭ್ಯವಿರುವ ಎಲ್ಲಾ ವಸ್ತುಗಳನ್ನು ಸಂಗ್ರಹಿಸುವುದು.
- ವಿಷಯ ಶಿಕ್ಷಕರು/ಸ್ಥಳೀಯ ತಜ್ಞರನ್ನು ಚಟುವಟಿಕೆ ಸಂದರ್ಭದಲ್ಲಿ ಆಹ್ವಾನಿಸುವುದು.
- ಚಟುವಟಿಕೆಯನ್ನು ನಿರ್ವಹಿಸಲು ಸೂಕ್ತವಾದ ಸ್ಥಳವನ್ನು (ಲ್ಯಾಬ್ ಅಥವಾ ತರಗತಿ) ಆಯ್ಕೆಮಾಡಿಕೊಳ್ಳುವುದು.
- ಮಣ್ಣಿನ ಪರೀಕ್ಷೆಯ ಉದ್ದೇಶ ಮತ್ತು ಅದರ ಮಾನದಂಡಗಳನ್ನು ಚರ್ಚಿಸುವುದು.
- ಚಟುವಟಿಕೆಯ ವರದಿಯನ್ನು ಪ್ರಾಂಶುಪಾಲರು/ಮುಖ್ಯೋಪಾಧ್ಯಾಯರಿಗೆ ಸಲ್ಲಿಸುವುದು.

**ವಿದ್ಯಾರ್ಥಿಗಳಿಗೆ ಸೂಚನೆ**

- ಶಿಕ್ಷಕರು, ಮಾರ್ಗದರ್ಶಿ ಅಥವಾ ಬೋಧಕರ ಸೂಚನೆಗಳನ್ನು ಅನುಸರಿಸಿ.
- ಚಟುವಟಿಕೆಯ ಸಂದರ್ಭದಲ್ಲಿ ಶಿಸ್ತು ಕಾಪಾಡಿ.
- ಪರೀಕ್ಷೆಯ ಸಮಯದಲ್ಲಿ ಅನುಸರಿಸಬೇಕಾದ ಸುರಕ್ಷತಾ ಮುನ್ನೆಚ್ಚರಿಕೆಗಳನ್ನು ಅರ್ಥಮಾಡಿಕೊಳ್ಳಿ.
- ಯಾವಾಗಲೂ ಸುರಕ್ಷತೆಯೊಂದಿಗೆ ಉಪಕರಣಗಳನ್ನು ಬಳಸಿ.
- ಮಣ್ಣು ಪರೀಕ್ಷೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ವಿದ್ಯಾರ್ಥಿಗಳು ತಮ್ಮಲ್ಲಿಯೇ ಚರ್ಚಿಸುವುದು.

**ವಿಧಾನ**

- ಚಟುವಟಿಕೆಯ ಬಗ್ಗೆ ವಿದ್ಯಾರ್ಥಿಗಳಿಗೆ ಮುಂಚಿತವಾಗಿ ತಿಳಿಸುವುದು.
- ಚಟುವಟಿಕೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ವಿವರಿಸುವುದು.
- ಯೋಜಿಸಿದಂತೆ ಚಟುವಟಿಕೆಯನ್ನು ನಿರ್ವಹಿಸುವುದು.
- ಪ್ರಶ್ನೆಗಳನ್ನು ಕೇಳಲು ವಿದ್ಯಾರ್ಥಿಗಳನ್ನು ಪ್ರೇರೇಪಿಸುವುದು.
- ಚಟುವಟಿಕೆಯ ಸಮಯದಲ್ಲಿ ಅವರ ಅವಲೋಕನ ಮತ್ತು ಕಲಿಕೆ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು.
- ವರದಿಯನ್ನು ತಯಾರಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.

**ಮಣ್ಣಿನ pH ಪರೀಕ್ಷೆ**

- ಎಲ್ಲಾ ವಿದ್ಯಾರ್ಥಿಗಳು ಸೂಕ್ತವಾದ ಲ್ಯಾಬ್/ಸ್ಥಳದಲ್ಲಿ ಸೇರುವರು.
- ಶಿಕ್ಷಕರು/ತಜ್ಞರು ಮಣ್ಣಿನ ಪಿಹೆಚ್ ಅನ್ನು ಕಂಡುಹಿಡಿಯುವ ವಿಧಾನವನ್ನು ಪ್ರಾತ್ಯಕ್ಷಿಕೆಯ ಮೂಲಕ ಪ್ರದರ್ಶಿಸುತ್ತಾರೆ.
- ಮಣ್ಣಿನ ಮಾದರಿಗಳನ್ನು ಸಂಗ್ರಹಿಸುವುದು.
- ಮಣ್ಣು ಪರೀಕ್ಷಾ ಕಿಟ್‌ನಲ್ಲಿ ಲಭ್ಯವಿರುವ ಕೆಂಪು ಮತ್ತು ನೀಲಿ ಲಿಟ್ಮಸ್ ಪೇಪರ್ ಪಟ್ಟಿಗಳನ್ನು ತಯಾರಿಸುವುದು.
- ನೀರಿನೊಂದಿಗೆ ಪೇಸ್ಟ್ ರೂಪದಲ್ಲಿ ಮಣ್ಣಿನ ಮಿಶ್ರಣ ಮಾಡುವುದು.
- ಕೆಂಪು ಲಿಟ್ಮಸ್ ಪೇಪರ್ ಅನ್ನು ಈ ಮಿಶ್ರಣದಲ್ಲಿ ಅದ್ದಿದಾಗ ಅದು ನೀಲಿ ಬಣ್ಣಕ್ಕೆ ತಿರುಗಿದರೆ ಅದು ಕ್ಷಾರೀಯ ಮಣ್ಣು.
- ನೀಲಿ ಲಿಟ್ಮಸ್ ಪೇಪರ್ ಅನ್ನು ಈ ಮಿಶ್ರಣದಲ್ಲಿ ಅದ್ದಿದಾಗ ಅದು ಕೆಂಪು ಬಣ್ಣಕ್ಕೆ ತಿರುಗಿದರೆ ಅದು ಆಮ್ಲೀಯ ಮಣ್ಣು.
- ವಿದ್ಯಾರ್ಥಿಗಳು, ಮಣ್ಣಿನ pH (ಆಮ್ಲ, ತಟಸ್ಥ, ಕ್ಷಾರೀಯ) ನಿರ್ಧರಿಸಲು ಬಣ್ಣಗಳನ್ನು ಹೋಲಿಕೆ ಮಾಡಿ, ಪರಿಣಿತರು/ಶಿಕ್ಷಕರೊಂದಿಗೆ ಫಲಿತಾಂಶಗಳನ್ನು ಚರ್ಚಿಸುವರು.
- ಈಗ, ವಿದ್ಯಾರ್ಥಿಗಳು ಮೇಲೆ ತಿಳಿಸಿದಂತೆ ಮಣ್ಣಿನ pH ಅನ್ನು ಪರೀಕ್ಷಿಸುತ್ತಾರೆ.

**NPK ಪರೀಕ್ಷೆ**

- ವಿವಿಧ ಸ್ಥಳಗಳಿಂದ ಮಣ್ಣನ್ನು ಸಂಗ್ರಹಿಸಿ, ಕಲ್ಲುಗಳು ಮತ್ತು ಭಗ್ನಾವಶೇಷಗಳನ್ನು ತೆಗೆದುಹಾಕಿ, ಪಾತ್ರೆಗಳಲ್ಲಿ ಮಣ್ಣನ್ನು ಹಾಕಿ ಆಯಾ ಪಾತ್ರೆಯ ಮೇಲೆ ಸ್ಥಳಗಳನ್ನು ಹೆಸರಿಸುವುದು.
- NPK ಪರೀಕ್ಷಾ ಕಿಟ್‌ನಲ್ಲಿರುವ ಸೂಚನೆಗಳನ್ನು ಅನುಸರಿಸಿ, ನೀರಿನೊಂದಿಗೆ ಮಣ್ಣನ್ನು ಮಿಶ್ರಣ ಮಾಡಿ, ಪರೀಕ್ಷಾ ಫಲಿತಾಂಶಗಳೊಂದಿಗೆ ಬದಲಾವಣೆಗಳನ್ನು ಗಮನಿಸುವುದು.
- ಕಿಟ್‌ನಲ್ಲಿ ಲಭ್ಯವಿರುವ ಚಾರ್ಟ್ ಬಳಸಿ ಬಣ್ಣ ಬದಲಾವಣೆಗಳನ್ನು ಹೋಲಿಕೆ ಮಾಡುವುದು ಮತ್ತು ಸಾರಜನಕ (N), ರಂಜಕ (P), ಮತ್ತು ಪೊಟ್ಯಾಸಿಯಮ್ (K) ಮಟ್ಟವನ್ನು ಬರೆಯುವುದು.

**ತೇವಾಂಶ ಪರೀಕ್ಷೆ**

- ವಿವಿಧ ಸ್ಥಳಗಳಿಂದ ಮಣ್ಣನ್ನು ಸಂಗ್ರಹಿಸಿ, ಕಲ್ಲುಗಳು ಮತ್ತು ಭಗ್ನಾವಶೇಷಗಳನ್ನು ತೆಗೆದುಹಾಕಿ, ಪಾತ್ರೆಗಳಲ್ಲಿ ಮಣ್ಣನ್ನು ಹಾಕಿ ಆಯಾ ಪಾತ್ರೆಯ ಮೇಲೆ ಸ್ಥಳಗಳನ್ನು ಹೆಸರಿಸುವುದು.
- ತೇವಾಂಶ ಪರೀಕ್ಷೆ ಮಾಡುವ ಉಪಕರಣವನ್ನು ಅಥವಾ ಸಂವೇದಕವನ್ನು ಅಳವಡಿಸಲು ಕಿಟ್‌ನಲ್ಲಿ ನೀಡಿರುವ ಸೂಚನೆಗಳನ್ನು ಅನುಸರಿಸುವುದು.
- ಪ್ರತಿ ಮಣ್ಣಿನ ಮಾದರಿಯಲ್ಲಿ ತೇವಾಂಶ ಪರೀಕ್ಷೆಮಾಡುವ ಉಪಕರಣವನ್ನು ಅಳವಡಿಸಿ, ಮಾಪನದ ಫಲಿತಾಂಶವನ್ನು ನಿರೀಕ್ಷಿಸುವುದು ಹಾಗೂ ಮಣ್ಣಿನಲ್ಲಿ ಎಷ್ಟು ತೇವಾಂಶವಿದೆ ಎಂಬುದನ್ನು ತಮ್ಮ ನೋಟ್ ಪುಸ್ತಕದಲ್ಲಿ ನಮೂದಿಸುದು.
- ಕಿಟ್‌ನಲ್ಲಿ ಲಭ್ಯವಿರುವ ಚಾರ್ಟ್‌ನೊಂದಿಗೆ ಮಣ್ಣಿನ ಫಲಿತಾಂಶವನ್ನು ಹೋಲಿಕೆ ಮಾಡುವುದು.

**ಮೌಲ್ಯಮಾಪನ**

ಪ್ರತಿಯೊಂದು ಚಟುವಟಿಕೆಯನ್ನು ಈ ಕೆಳಗಿನ ಮಾನದಂಡಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡಬೇಕಾಗುತ್ತದೆ

- ಆಸಕ್ತಿ
- ಭಾಗವಹಿಸುವಿಕೆ
- ತಂಡದ ಕೆಲಸ
- ಪರಸ್ಪರ ಕೌಶಲಗಳು
- ವರದಿ ತಯಾರಿ
- ವೈಜ್ಞಾನಿಕ ಕೌಶಲಗಳು

**ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು**

ವೀಕ್ಷಣೆ, ವಿಶ್ಲೇಷಣೆ, ವ್ಯಾಖ್ಯಾನ, ವರದಿಗಳನ್ನು ಬರೆಯುವ ಕೌಶಲಗಳನ್ನು ಅಭಿವೃದ್ಧಿಪಡಿಸುವ ಮೂಲಕ, ಅವರು ತಮ್ಮ ಆಸಕ್ತಿಗೆ ಅನುಗುಣವಾಗಿ ಭವಿಷ್ಯದಲ್ಲಿ ಈ ಕೆಳಗಿನ ವೃತ್ತಿಗಳನ್ನು ಆಯ್ಕೆಮಾಡಿಕೊಳ್ಳುವುದು ಎಂದು ಮಕ್ಕಳಿಗೆ ವಿವರಿಸಬಹುದು.

- ಮಣ್ಣು ಪರೀಕ್ಷಾ ತಂತ್ರಜ್ಞ
- ಮಾರಾಟಗಾರ (ಸೇಲ್ಸ್‌ಮ್ಯಾನ್)
- ಕೃಷಿ ತಂತ್ರಜ್ಞ
- ಸಂಶೋಧಕ

**ಚಟುವಟಿಕೆ 3**

| ನೀರಿನ ಪರೀಕ್ಷೆ | |
|---|---|
| ಚಟುವಟಿಕೆಯ ವಿಧ | ಒಳಾಂಗಣ |
| ಬೇಕಾಗುವ ಅವಧಿ | 3 ಗಂಟೆಗಳು |
| ಅಭಿವೃದ್ಧಿಪಡಿಸ ಬೇಕಾದ ಕೌಶಲಗಳು | ವೀಕ್ಷಣಾ ಕೌಶಲಗಳು ವೈಜ್ಞಾನಿಕವಾಗಿ ಪ್ರಶ್ನಿಸುವ ಕೌಶಲ, ಮಾಪನ ಮತ್ತು ಡೇಟಾ ಸಂಗ್ರಹಣೆ, ಸಂವಹನ ಕೌಶಲಗಳು, ಇತ್ಯಾದಿ. |



**ಕಲಿಕೆಯ ಫಲಗಳು**

- ನೀರಿನ ಗುಣಮಟ್ಟದ ಮಾನದಂಡಗಳನ್ನು ಮತ್ತು ಅವುಗಳ ಮಹತ್ವವನ್ನು ಅರ್ಥಮಾಡಿಕೊಳ್ಳುವುದು.
- ನೀರಿನ ಭೌತಿಕ ಗುಣಮಟ್ಟದ ಮಾನದಂಡಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅಳೆಯಲು ಸಾಧ್ಯವಾಗುತ್ತದೆ. ಉದಾಹರಣೆಗೆ ತಾಪಮಾನ, ಬಣ್ಣ, ಪ್ರಕ್ಷುಬ್ಧತೆ ಮತ್ತು ವಾಸನೆ.
- ಒಟ್ಟು ಕರಗಿದ ಘನವಸ್ತುಗಳು (TDS) ಮತ್ತು ನೀರಿನಲ್ಲಿ pH ಅಂಶದಂತಹ ನೀರಿನ ರಾಸಾಯನಿಕ ಗುಣಮಟ್ಟದ ಮಾನದಂಡಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅಳೆಯಲು ಸಾಧ್ಯವಾಗುತ್ತದೆ.
- ದೈನಂದಿನ ಜೀವನದಲ್ಲಿ ನೀರಿನ ಸಂಪನ್ಮೂಲಗಳು ಮತ್ತು ಪರಿಸರದ ಮೇಲೆ ಮಾನವ ಚಟುವಟಿಕೆಗಳ ಪ್ರಭಾವವನ್ನು ಅರ್ಥಮಾಡಿಕೊಳ್ಳುವುದು.

### ಅಗತ್ಯ ಸಾಮಗ್ರಿಗಳು

- ನೀರಿನ ಪರೀಕ್ಷಾ ಕಿಟ್
- ಪಾರದರ್ಶಕ ಗಾಜು
- ಪರೀಕ್ಷಾ ಕೊಳವೆಗಳು
- ಸುರಕ್ಷತಾ ಕನ್ನಡಕ ಮತ್ತು ಕೈಗವಸುಗಳು
- ನೋಟ್ ಬುಕ್ ಮತ್ತು ಪೆನ್

### ಶಿಕ್ಷಕರಿಗೆ ಸೂಚನೆ

- ಚಟುವಟಿಕೆಯ ಯೋಜನೆಯನ್ನು ಅಭಿವೃದ್ಧಿಪಡಿಸುವುದು.
- ಚಟುವಟಿಕೆಗೆ ಅಗತ್ಯವಿರುವ ಮತ್ತು ಶಾಲೆಯಲ್ಲಿ ಲಭ್ಯವಿರುವ ಎಲ್ಲಾ ವಸ್ತುಗಳನ್ನು ಸಂಗ್ರಹಿಸುವುದು.
- ಚಟುವಟಿಕೆಗೆ ಸ್ಥಳೀಯ ತಜ್ಞರನ್ನು ಆಹ್ವಾನಿಸಿ ನೀರಿನ ಪರೀಕ್ಷೆಗೆ ಸೂಕ್ತವಾದ ಸ್ಥಳವನ್ನು ಆಯ್ಕೆಮಾಡಿಕೊಳ್ಳುವುದು.
- ಚಟುವಟಿಕೆಯ ವಿಧಾನದಲ್ಲಿ ನೀಡಲಾದ ಸೂಚನೆಗಳನ್ನು ಅನುಸರಿಸುವುದು.
- ನೀರಿನ ಗುಣಮಟ್ಟದ ಮಾನದಂಡಗಳನ್ನು ಪರೀಕ್ಷಿಸುವ ಉದ್ದೇಶ ಮತ್ತು ಪ್ರಾಮುಖ್ಯತೆಯನ್ನು ಚರ್ಚಿಸುವುದು.
- ಚಟುವಟಿಕೆಯ ವರದಿಯನ್ನು ಪ್ರಾಂಶುಪಾಲರು/ಮುಖ್ಯೋಪಾಧ್ಯಾಯರಿಗೆ ಸಲ್ಲಿಸಿ.

### ವಿದ್ಯಾರ್ಥಿಗಳಿಗೆ ಸೂಚನೆ

- ಶಿಕ್ಷಕರು, ಮಾರ್ಗದರ್ಶಿ ಅಥವಾ ಬೋಧಕರ ಸೂಚನೆಗಳನ್ನು ಅನುಸರಿಸಿ.
- ಶಿಸ್ತು ಕಾಪಾಡಿ.
- ಪರೀಕ್ಷೆಯ ಸಮಯದಲ್ಲಿ ಅನುಸರಿಸಬೇಕಾದ ಸುರಕ್ಷತಾ ಮುನ್ನೆಚ್ಚರಿಕೆಗಳನ್ನು ಅರ್ಥಮಾಡಿಕೊಳ್ಳಿ.
- ವಿದ್ಯಾರ್ಥಿಗಳು ನೀರಿನ ಪರೀಕ್ಷೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ತಮ್ಮಲ್ಲಿಯೇ ಚರ್ಚಿಸಬೇಕು.

### ವಿಧಾನ

- ಚಟುವಟಿಕೆಯ ಬಗ್ಗೆ ವಿದ್ಯಾರ್ಥಿಗಳಿಗೆ ಮುಂಚಿತವಾಗಿ ತಿಳಿಸುವುದು.
- ಚಟುವಟಿಕೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ವಿವರಿಸುವುದು.
- ಯೋಜಿಸಿದಂತೆ ಚಟುವಟಿಕೆಯನ್ನು ನಿರ್ವಹಿಸುವುದು.
- ಎಲ್ಲಾ ವಿದ್ಯಾರ್ಥಿಗಳು ಪ್ರಯೋಗಾಲಯದಲ್ಲಿ ಅಥವಾ ಸೂಕ್ತವಾದ ಸ್ಥಳದಲ್ಲಿ ಸೇರುವುದು.
- ಶಿಕ್ಷಕರು/ತಜ್ಞರು ವಿವಿಧ ನೀರಿನ ಗುಣಮಟ್ಟದ ಮಾನದಂಡಗಳ ಪರೀಕ್ಷಾ ವಿಧಾನವನ್ನು ಪ್ರದರ್ಶಿಸುವುದು.
- ನೀರಿನ ಭೌತಿಕ ಗುಣಮಟ್ಟದ ಮಾನದಂಡಗಳನ್ನು ಪರೀಕ್ಷಿಸಲು ಕೆಳಗಿನ ಹಂತಗಳು

1. ಪಾರದರ್ಶಕ ಗ್ಲಾಸ್‌ಗಳಲ್ಲಿ ನೀರಿನ ಮಾದರಿಗಳನ್ನು ಸಂಗ್ರಹಿಸುವುದು.
2. ನೀರಿನ ತಾಪಮಾನವನ್ನು ಅಳೆಯಲು ಥರ್ಮಾಮೀಟರ್ ಬಳಸುವುದು.
3. ಯಾವುದೇ ಉಪಕರಣಗಳನ್ನು ಬಳಸದೇ ನೀರಿನ ಬಣ್ಣವನ್ನು ಪರಿಶೀಲಿಸುವುದು.
4. ಪ್ರಕ್ಷುಬ್ಧತೆ, ಒಟ್ಟು ಕರಗಿದ ಘನವಸ್ತುಗಳು (TDS), pH ಇನ್ನಿತರ ಮಾನದಂಡಗಳನ್ನು ಅಳೆಯಲು ನೀರಿನ ಪರೀಕ್ಷಾ ಕಿಟ್ ಅನ್ನು ಬಳಸುವುದು.

- ಪ್ರಶ್ನೆಗಳನ್ನು ಕೇಳಲು ವಿದ್ಯಾರ್ಥಿಗಳನ್ನು ಪ್ರೇರೇಪಿಸುವುದು.
- ಚಟುವಟಿಕೆಯ ಸಮಯದಲ್ಲಿ ಅವರ ಅವಲೋಕನ ಮತ್ತು ಕಲಿಕೆಗಳ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು.
- ವರದಿಯನ್ನು ತಯಾರಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.

### ಮೌಲ್ಯಮಾಪನ

ಪ್ರತಿಯೊಂದು ಚಟುವಟಿಕೆಯನ್ನು ಈ ಮುಂದಿನ ಮಾನದಂಡಗಳ ಮೇಲೆ ಮೌಲ್ಯಮಾಪನ ಮಾಡಬೇಕಾಗುತ್ತದೆ.

- ಆಸಕ್ತಿ
- ಭಾಗವಹಿಸುವಿಕೆ
- ತಂಡದ ಕೆಲಸ
- ಪರಸ್ಪರ ಕೌಶಲ
- ವರದಿ ತಯಾರಿ

**ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು**

ವೀಕ್ಷಣೆ, ವಿಶ್ಲೇಷಣೆ, ವ್ಯಾಖ್ಯಾನ, ವರದಿಗಳನ್ನು ಬರೆಯುವ ಕೌಶಲಗಳನ್ನು ಅಭಿವೃದ್ಧಿಪಡಿಸುವ ಮೂಲಕ, ಅವರು ತಮ್ಮ ಆಸಕ್ತಿಗೆ ಅನುಗುಣವಾಗಿ ಭವಿಷ್ಯದಲ್ಲಿ ಈ ಕೆಳಗಿನ ವೃತ್ತಿಗಳನ್ನು ಆಯ್ಕೆಮಾಡಿಕೊಳ್ಳುವುದು ಎಂದು ಮಕ್ಕಳಿಗೆ ವಿವರಿಸಬಹುದು.

- ಜಲ ವಿಶ್ಲೇಷಕ
- ಲ್ಯಾಬ್ ಟೆಕ್ನಿಷಿಯನ್
- ವಿಜ್ಞಾನಿ
- ಪರಿಸರವಾದಿ

**ಚಟುವಟಿಕೆ 4**

| 'ಗೋ ಗ್ರೀನ್' ಕುರಿತು ಸೈಕಲ್ ರ್‍ಯಾಲಿ | |
|---|---|
| ಚಟುವಟಿಕೆಯ ವಿಧ | ಹೊರಾಂಗಣ |
| ಬೇಕಾಗುವ ಅವಧಿ | 1 ಗಂಟೆಗಳು |
| ಅಭಿವೃದ್ಧಿಪಡಿಸಬೇಕಾದ ಕೌಶಲಗಳು | ವೀಕ್ಷಣಾ ಕೌಶಲಗಳು, ಕಠಿಣ ಪರಿಶ್ರಮ, ಸಮುದಾಯದೆಡೆಗಿನ ಜವಾಬ್ದಾರಿ, ಪರಿಸರ ಜಾಗೃತಿ, ಸಂವಹನ ಕೌಶಲ ಮತ್ತು ನಾಯಕತ್ವ ಕೌಶಲಗಳು |



**ಕಲಿಕೆಯ ಫಲಗಳು**

- ಸಮುದಾಯದ ಬಗ್ಗೆ ವಿದ್ಯಾರ್ಥಿಗಳು ತಮ್ಮ ಜವಾಬ್ದಾರಿಯನ್ನು ಅರಿಯುವರು.
- ವಿದ್ಯಾರ್ಥಿಗಳು ಪರಿಸರ ಜಾಗೃತಿಯ ಮಹತ್ವ ತಿಳಿಯುವರು.

**ಅಗತ್ಯ ಸಾಮಗ್ರಿಗಳು**

- ಘೋಷಣೆಗಳಿರುವ ಫಲಕಗಳು
- ಸೈಕಲ್‌ಗಳು
- ಕ್ಯಾಪ್ ಮತ್ತು ನೀರಿನ ಬಾಟಲ್
- ಆರಾಮದಾಯಕ ಪಾದರಕ್ಷೆಗಳು

**ಶಿಕ್ಷಕರಿಗೆ ಸೂಚನೆ**

- ಚಟುವಟಿಕೆಯ ಯೋಜನೆಯನ್ನು ಅಭಿವೃದ್ಧಿಪಡಿಸುವುದು.
- ಚಟುವಟಿಕೆಯ ಉದ್ದೇಶ ಮತ್ತು ತಯಾರಿಕೆಯ ವಿಧಾನವನ್ನು ವಿದ್ಯಾರ್ಥಿಗಳಿಗೆ ಸಂಕ್ಷಿಪ್ತವಾಗಿ ತಿಳಿಸುವುದು.
- ವಿದ್ಯಾರ್ಥಿಗಳಿಗೆ ರಸ್ತೆ ಸುರಕ್ಷತಾ ನಿಯಮಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸುವುದು.
- ಅನುದಾನ, ಕಚ್ಚಾ ಸಾಮಗ್ರಿ, ಸಾರಿಗೆ ಇತ್ಯಾದಿ ಚಟುವಟಿಕೆಗಳಿಗೆ ಅಗತ್ಯ ವ್ಯವಸ್ಥೆಗಳನ್ನು ಮಾಡುವುದು.
- ರ್‍ಯಾಲಿಯ ಸಂದರ್ಭದಲ್ಲಿ ವಿದ್ಯಾರ್ಥಿಗಳ ಶಿಸ್ತನ್ನು ಮೇಲ್ವಿಚಾರಣೆ ಮಾಡಲು ವಿದ್ಯಾರ್ಥಿ ನಾಯಕರನ್ನು ನೇಮಿಸುವುದು.

- ಫಲಕಗಳನ್ನು ಸಿದ್ಧಪಡಿಸುವುದು.
- ಸಾರ್ವಜನಿಕರಿಂದ ಪ್ರತಿಕ್ರಿಯೆ ಪಡೆಯುವುದು.
- ಚಟುವಟಿಕೆಯ ವರದಿಯನ್ನು ಪ್ರಾಂಶುಪಾಲರು/ಮುಖ್ಯೋಪಾಧ್ಯಾಯರಿಗೆ ಸಲ್ಲಿಸುವುದು.

**ವಿದ್ಯಾರ್ಥಿಗಳಿಗೆ ಸೂಚನೆ**

- ಶಿಕ್ಷಕರ, ಮಾರ್ಗದರ್ಶಿ ಅಥವಾ ಬೋಧಕರ ಸೂಚನೆಗಳನ್ನು ಅನುಸರಿಸುವುದು.
- ಚಟುವಟಿಕೆಯ ಸಂದರ್ಭದಲ್ಲಿ ಶಿಸ್ತು ಕಾಪಾಡುವುದು.
- ಶಿಕ್ಷಕರು ನೀಡಿದ ಸಂಕ್ಷಿಪ್ತ ಸೂಚನೆಗಳ ಪ್ರಕಾರ ಸಿದ್ಧತೆಗಳನ್ನು ಮಾಡುವುದು.
- ಬೈಸಿಕಲ್‌ನಲ್ಲಿ ಹೋಗುವಾಗ ರಸ್ತೆ ಮತ್ತು ಸುರಕ್ಷತಾ ನಿಯಮಗಳನ್ನು ಅರ್ಥಮಾಡಿಕೊಳ್ಳುವುದು,
- ಸೈಕಲ್ ರ್‍ಯಾಲಿಯ ಮಾರ್ಗವನ್ನು ಚರ್ಚಿಸುವುದು.

**ವಿಧಾನ**

- ಚಟುವಟಿಕೆಯ ಬಗ್ಗೆ ವಿದ್ಯಾರ್ಥಿಗಳಿಗೆ ಮುಂಚಿತವಾಗಿ ತಿಳಿಸುವುದು.
- ಚಟುವಟಿಕೆಯ ಮಹತ್ವದ ಬಗ್ಗೆ ವಿವರಿಸುವುದು.
- 'ಗೋ ಗ್ರೀನ್' ಎಂಬ ಘೋಷಣೆಗಳೊಂದಿಗೆ ಫಲಕಗಳನ್ನು ತಯಾರಿಸುವುದು.
- ಯೋಜಿಸಿದಂತೆ ಚಟುವಟಿಕೆಯನ್ನು ನಿರ್ವಹಿಸುವುದು.
- ಸೈಕಲ್ ರ್‍ಯಾಲಿಯಲ್ಲಿ ಭಾಗವಹಿಸುವುದು.
- ಸೈಕಲ್ ರ್‍ಯಾಲಿಯಲ್ಲಿ 'GO GREEN' ಕುರಿತು ಜಾಗೃತಿ ಮೂಡಿಸುವುದು.
- ಸಾರ್ವಜನಿಕ ಸ್ಥಳಗಳಲ್ಲಿ ಮರಗಳನ್ನು ಬೆಳೆಸುವ ಮಹತ್ವವನ್ನು ವಿವರಿಸುವುದು.
- ಚಟುವಟಿಕೆಯ ಸಮಯದಲ್ಲಿ ಅವರ ಅವಲೋಕನಗಳು ಮತ್ತು ಕಲಿಕೆಗಳ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು.
- ವರದಿಯನ್ನು ತಯಾರಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.

**ಮೌಲ್ಯಮಾಪನ**

ಪ್ರತಿಯೊಂದು ಚಟುವಟಿಕೆಯನ್ನು ಈ ಕೆಳಗಿನ ಮಾನದಂಡಗಳ ಮೇಲೆ ಮೌಲ್ಯಮಾಪನ ಮಾಡಬೇಕಾಗುತ್ತದೆ

- ಭಾಗವಹಿಸುವಿಕೆ
- ವಿಶ್ವಾಸ
- ಶಿಸ್ತು
- ಪದಗಳ ಬಳಕೆ
- ತಂಡದ ಕೆಲಸ

**ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು**

- ವೀಕ್ಷಣೆ, ವಿಶ್ಲೇಷಣೆ, ವ್ಯಾಖ್ಯಾನ, ವರದಿಗಳನ್ನು ಬರೆಯುವ ಕೌಶಲಗಳನ್ನು ಅಭಿವೃದ್ಧಿಪಡಿಸುವ ಮೂಲಕ ಅವರು ಈ ಕೆಳಗಿನವುಗಳನ್ನು ಅನುಸರಿಸಬಹುದು ಎಂದು ಮಕ್ಕಳಿಗೆ ವಿವರಿಸಬಹುದು.
- ಅವರ ಆಸಕ್ತಿಗೆ ಅನುಗುಣವಾಗಿ ಭವಿಷ್ಯದಲ್ಲಿ ವೃತ್ತಿಗಳು
- ಪರಿಸರವಾದಿ
- ಕನ್ಸರ್ವೇಟರ್ ಎನ್‌ಜಿಒ
- ಗೊಬ್ಬರ ಪೂರೈಕೆದಾರ
- ಪೋಸ್ಟರ್ ಡಿಸೈನರ್
- ನರ್ಸರಿ ಮಾಲೀಕರು
- ಸೈಕ್ಲಿಸ್ಟ್

**ಚಟುವಟಿಕೆ 5**

| ನಿಮ್ಮ ಶಾಲೆಯ ಸುತ್ತಲಿನ ಗಿಡ, ಮರ ಮತ್ತು ಪಕ್ಷಿಗಳ ಗುರುತಿಸುವಿಕೆ | |
|---|---|
| ಚಟುವಟಿಕೆಯ ವಿಧ | ಹೊರಾಂಗಣ |
| ಬೇಕಾಗುವ ಅವಧಿ | 3 ಗಂಟೆಗಳು |
| ಅಭಿವೃದ್ಧಿಪಡಿಸ ಬೇಕಾದ ಕೌಶಲಗಳು | ವೀಕ್ಷಣಾ ಕೌಶಲಗಳು, ವೈಜ್ಞಾನಿಕವಾಗಿ ಪ್ರಶ್ನಿಸುವುದು, ವಿಮರ್ಶಾತ್ಮಕ ಚಿಂತನೆ, ಪರಿಸರ ಜಾಗೃತಿ, ಸಂವಹನ ಕೌಶಲಗಳು ಇತ್ಯಾದಿ. |



## ಕಲಿಕಾ ಫಲಗಳು

- ವಿದ್ಯಾರ್ಥಿಗಳು ತಮ್ಮ ಶಾಲೆಯ ಸುತ್ತಮುತ್ತಲಿನ ಸಾಮಾನ್ಯ ಸಸ್ಯಗಳು, ಮರಗಳು ಮತ್ತು ಪಕ್ಷಿಗಳನ್ನು ಗುರುತಿಸುವರು.
- ಗುರುತಿಸಲಾದ ಸಸ್ಯಗಳು ಮತ್ತು ಮರಗಳಿಗೆ ನಾಮಫಲಕಗಳನ್ನು ಸಿದ್ಧಪಡಿಸುವರು.
- ವಿದ್ಯಾರ್ಥಿಗಳು ತಮ್ಮ ಸುತ್ತ ಮುತ್ತ ಗುರುತಿಸಿದ ಪಕ್ಷಿಗಳ ರೇಖಾಚಿತ್ರಗಳನ್ನು ಬಿಡಿಸುವರು ಮತ್ತು ಪ್ರದರ್ಶಿಸುವರು.

## ಅಗತ್ಯ ಸಾಮಗ್ರಿಗಳು

- ನೋಟ್ ಬುಕ್ ಮತ್ತು ಪೆನ್
- ಪೆನ್ಸಿಲ್ ಮತ್ತು ರಬ್ಬರ್
- ಡ್ರಾಯಿಂಗ್ ಪುಸ್ತಕ
- ನೀರಿನ ಬಣ್ಣಗಳು
- ದುರ್ಬೀನುಗಳು (ಐಚ್ಛಿಕ)
- ಆರಾಮದಾಯಕ ಪಾದರಕ್ಷೆಗಳು

## ಶಿಕ್ಷಕರಿಗೆ ಸೂಚನೆ

- ಚಟುವಟಿಕೆಯ ಯೋಜನೆಯನ್ನು ಅಭಿವೃದ್ಧಿಪಡಿಸುವುದು.
- ಚಟುವಟಿಕೆಯ ಹಾಗೂ ತಯಾರಿಕಾ ವಿಧಾನದ ಬಗ್ಗೆ ವಿದ್ಯಾರ್ಥಿಗಳಿಗೆ ಸಂಕ್ಷಿಪ್ತವಾಗಿ ತಿಳಿಸುವುದು.
- ಶಾಲೆಯ ಸುತ್ತಲಿನ ಸುರಕ್ಷಿತ ಪ್ರದೇಶವನ್ನು ಚಟುವಟಿಕೆ ನಡೆಸಲು ಆಯ್ಕೆಮಾಡುವುದು.
- ಚಟುವಟಿಕೆಯ ಉದ್ದೇಶದ ಬಗ್ಗೆ ಪೋಷಕರಿಗೆ ಸಂಕ್ಷಿಪ್ತವಾಗಿ ತಿಳಿಸುವುದು.
- ಸಸ್ಯಗಳು, ಮರಗಳು ಮತ್ತು ಪಕ್ಷಿಗಳನ್ನು ಗುರುತಿಸುವಲ್ಲಿ ಉದ್ಯಾನವನ ಪಾಲಕ ಅಥವಾ ಸಂಪನ್ಮೂಲ ವ್ಯಕ್ತಿಯ ಸಹಾಯವನ್ನು ತೆಗೆದುಕೊಳ್ಳುವುದು.
- ವಿದ್ಯಾರ್ಥಿಗಳಿಗೆ ತಾವು ವೀಕ್ಷಿಸಿದ ಅಂಶಗಳನ್ನು ಚಿತ್ರಿಸಲು ಮತ್ತು ಟಿಪ್ಪಣಿ ಮಾಡಿಕೊಳ್ಳಲು ಪ್ರೋತ್ಸಾಹಿಸುವುದು.
- ಚಟುವಟಿಕೆಯ ವರದಿಯನ್ನು ಪ್ರಾಂಶುಪಾಲರು/ಮುಖ್ಯೋಪಾಧ್ಯಾಯರಿಗೆ ಸಲ್ಲಿಸುವುದು.

## ವಿದ್ಯಾರ್ಥಿಗಳಿಗೆ ಸೂಚನೆ

- ಶಿಕ್ಷಕ, ಮಾರ್ಗದರ್ಶಿ ಅಥವಾ ಬೋಧಕರ ಸೂಚನೆಗಳನ್ನು ಅನುಸರಿಸಿ.
- ಚಟುವಟಿಕೆಯ ಸಂದರ್ಭದಲ್ಲಿ ಶಿಸ್ತು ಕಾಪಾಡಿ.
- ಚಟುವಟಿಕೆಯ ಸಮಯದಲ್ಲಿ ಪ್ರಶ್ನೆಗಳನ್ನು ಕೇಳುವ ಮೂಲಕ ಸಂಪನ್ಮೂಲ ವ್ಯಕ್ತಿಗಳಿಂದ ಮತ್ತಷ್ಟು ಮಾಹಿತಿಯನ್ನು ಸಂಗ್ರಹಿಸಿ.

**ವಿಧಾನ:**

- ಚಟುವಟಿಕೆಯ ಬಗ್ಗೆ ವಿದ್ಯಾರ್ಥಿಗಳಿಗೆ ಮುಂಚಿತವಾಗಿ ತಿಳಿಸುವುದು.
- ವಿದ್ಯಾರ್ಥಿಗಳಿಗೆ ಚಟುವಟಿಕೆಯ ಮಹತ್ವವನ್ನು ವಿವರಿಸುವುದು.
- ಚಟುವಟಿಕೆಗಾಗಿ ನಿಮ್ಮ ಶಾಲೆಯ ಸಮೀಪ ನಿಗದಿಪಡಿಸಿದ ಪ್ರದೇಶಕ್ಕೆ ಭೇಟಿ ನೀಡುವುದು.
- ಭೇಟಿ ನೀಡಿದ ಪ್ರದೇಶದಲ್ಲಿನ ಎಲ್ಲಾ ಸಸ್ಯಗಳು ಮತ್ತು ಮರಗಳನ್ನು ಗುರುತಿಸುವುದು.
- ವಿದ್ಯಾರ್ಥಿಗಳು ತಮ್ಮ ನೋಟ್‌ಬುಕ್‌ನಲ್ಲಿ ಮರಗಳ ಹೆಸರುಗಳನ್ನು ಅವುಗಳ ವೈಶಿಷ್ಟ್ಯಗಳು ಮತ್ತು ಉಪಯೋಗಗಳನ್ನು ಬರೆಯುವುದು.
- ಸಸ್ಯ ಹಾಗೂ ಮರಗಳ ನಾಮಫಲಕವನ್ನು ಸಿದ್ಧಪಡಿಸಿ, ಭವಿಷ್ಯದಲ್ಲಿ ಅವುಗಳನ್ನು ಗುರುತಿಸಲು ಸಹಾಯವಾಗುವಂತೆ ಅವುಗಳ ಹತ್ತಿರದಲ್ಲಿ ಇರಿಸುವುದು.
- ಅವಶ್ಯವಿದ್ದಲ್ಲಿ ದುರ್ಬೀನು ಬಳಸಿ ಆ ಪ್ರದೇಶದಲ್ಲಿನ ವಿವಿಧ ಪಕ್ಷಿಗಳನ್ನು ಗಮನಿಸಿ ಗುರುತಿಸುವುದು.
- ವಿದ್ಯಾರ್ಥಿಗಳು ಡ್ರಾಯಿಂಗ್ ಪುಸ್ತಕದಲ್ಲಿ ಪಕ್ಷಿಗಳ ಚಿತ್ರ ಬಿಡಿಸಿ ಅವುಗಳ ಹೆಸರು ಮತ್ತು ಗುಣಲಕ್ಷಣಗಳನ್ನು ಬರೆಯುವುದು.
- ಚಟುವಟಿಕೆಯ ಸಮಯದಲ್ಲಿ ಅವರ ಅವಲೋಕನ ಮತ್ತು ಕಲಿಕೆಗಳ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು.
- ತಾವು ವೀಕ್ಷಿಸಿದ ಸಸ್ಯ, ಮರ ಮತ್ತು ಪಕ್ಷಿಗಳ ಹೆಸರನ್ನು ಮತ್ತು ಅವುಗಳ ವೈಶಿಷ್ಟ್ಯಗಳನ್ನೊಳಗೊಂಡ ವರದಿಯನ್ನು ತಯಾರಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.

**ಮೌಲ್ಯಮಾಪನ**

- ಪ್ರತಿಯೊಂದು ಚಟುವಟಿಕೆಯನ್ನು ಈ ಕೆಳಗಿನ ಮಾನದಂಡಗಳ ಮೇಲೆ ಮೌಲ್ಯಮಾಪನ ಮಾಡಬೇಕಾಗುತ್ತದೆ
- ಭಾಗವಹಿಸುವಿಕೆ
- ಗುಂಪು ಕಾರ್ಯ
- ಪರಸ್ಪರ ಕೌಶಲಗಳು
- ವರದಿ ಬರವಣಿಗೆ

**ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು**

ವೀಕ್ಷಣೆ, ವಿಶ್ಲೇಷಣೆ, ವ್ಯಾಖ್ಯಾನ, ವರದಿಗಳನ್ನು ಬರೆಯುವ ಕೌಶಲಗಳನ್ನು ಅಭಿವೃದ್ಧಿಪಡಿಸುವ ಮೂಲಕ, ಅವರು ತಮ್ಮ ಆಸಕ್ತಿಗೆ ಅನುಗುಣವಾಗಿ ಭವಿಷ್ಯದಲ್ಲಿ ಈ ಕೆಳಗಿನ ವೃತ್ತಿಗಳನ್ನು ಆಯ್ಕೆಮಾಡಿಕೊಳ್ಳಬಹುದು ಎಂದು ಮಕ್ಕಳಿಗೆ ವಿವರಿಸಬಹುದು.

- ಸಸ್ಯಶಾಸ್ತ್ರಜ್ಞ
- ಪಕ್ಷಿವಿಜ್ಞಾನಿ
- ಪರಿಸರ ವಿಜ್ಞಾನಿ
- ಉದ್ಯಾನವನಪಾಲಕ/ಗಾರ್ಡನರ್
- ವನ್ಯಜೀವಿ ಛಾಯಾಗ್ರಾಹಕ

**ಚಟುವಟಿಕೆ 6**

| ಮರದ ಕೆಳಗೆ ಕುಳಿತುಕೊಳ್ಳುವುದು | |
|---|---|
| ಚಟುವಟಿಕೆಯ ವಿಧ | ಹೊರಾಂಗಣ |
| ಬೇಕಾಗುವ ಅವಧಿ | 2 ಗಂಟೆಗಳು |
| ಅಭಿವೃದ್ಧಿಪಡಿಸ ಬೇಕಾದ ಕೌಶಲಗಳು | ಪ್ರಕೃತಿಯ ಬಗ್ಗೆ ಸಹಾನುಭೂತಿ, ಪರಿಸರ ಪ್ರಜ್ಞೆ, ವೀಕ್ಷಣಾ ಕೌಶಲಗಳು |



**ಕಲಿಕೆಯ ಫಲಗಳು**

- ಮಾನವರು ಹಾಗೂ ಪ್ರಕೃತಿಯೊಂದಿಗೆ ಭಾವನಾತ್ಮಕ ಬಾಂಧವ್ಯವನ್ನು ಬೆಳೆಸುವಲ್ಲಿ ಮರಗಳ ಪ್ರಾಮುಖ್ಯತೆಯ ಬಗ್ಗೆ ತಿಳಿಯುವರು.
- ಮಾನವ ಜೀವನದ ಮೇಲೆ ಮರಗಳ ಪ್ರಭಾವದ ಬಗ್ಗೆ ತಿಳಿಯುವರು.
- ಮರದ ಕೆಳಗೆ ಕುಳಿತುಕೊಳ್ಳುವುದರಿಂದಾಗುವ ಪ್ರಾಯೋಗಿಕ ಮತ್ತು ಮಾನಸಿಕ ಪ್ರಯೋಜನಗಳ ಬಗ್ಗೆ ತಿಳಿಯುವರು.
- ಮರಗಳ ಮಹತ್ವ ಮತ್ತು ಅವುಗಳ ಪ್ರಾಯೋಗಿಕ ಉಪಯೋಗಗಳನ್ನು ಅರ್ಥಮಾಡಿಕೊಳ್ಳುವರು.
- ಅಗತ್ಯ ಸಾಮಗ್ರಿಗಳು
- ಮರದ ಕೆಳಗೆ ಕುಳಿತುಕೊಳ್ಳಲು ಚಾಪೆ/ ಬೆಡ್‌ಶೀಟ್‌ಗಳು
- ನೋಟ್ ಬುಕ್ ಮತ್ತು ಪೆನ್

**ಶಿಕ್ಷಕರಿಗೆ ಸೂಚನೆ**

- ಚಟುವಟಿಕೆಯ ಯೋಜನೆಯನ್ನು ಅಭಿವೃದ್ಧಿಪಡಿಸುವುದು.
- ಚಟುವಟಿಕೆಯ ಉದ್ದೇಶ ಮತ್ತು ತಯಾರಿಕೆಯ ವಿಧಾನವನ್ನು ವಿದ್ಯಾರ್ಥಿಗಳಿಗೆ ಸಂಕ್ಷಿಪ್ತವಾಗಿ ತಿಳಿಸುವುದು.
- ಮರಗಳು ಮತ್ತು ಅವುಗಳ ಪ್ರಾಮುಖ್ಯತೆಯ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು.
- ವಿದ್ಯಾರ್ಥಿಗಳು ಭೇಟಿ ನೀಡಬಹುದಾದ ಮರವನ್ನು ಗುರುತಿಸುವುದು.
- ವಿದ್ಯಾರ್ಥಿಗಳೊಂದಿಗೆ ಚಟುವಟಿಕೆಯ ಬಗ್ಗೆ ಚರ್ಚಿಸುವುದು.
- ಚಟುವಟಿಕೆಯ ವರದಿಯನ್ನು ಪ್ರಾಂಶುಪಾಲರು/ಮುಖ್ಯೋಪಾಧ್ಯಾಯರಿಗೆ ಸಲ್ಲಿಸುವುದು.

**ವಿದ್ಯಾರ್ಥಿಗಳಿಗೆ ಸೂಚನೆ**

- ಶಿಕ್ಷಕರು, ಮಾರ್ಗದರ್ಶಿ ಅಥವಾ ಬೋಧಕರ ಸೂಚನೆಗಳನ್ನು ಅನುಸರಿಸಿ.
- ಚಟುವಟಿಕೆಯ ಸಂದರ್ಭದಲ್ಲಿ ಶಿಸ್ತು ಕಾಪಾಡಿ.
- ನಿಮ್ಮ ಶಾಲೆ ಅಥವಾ ಮನೆಯ ಸಮೀಪ ಲಭ್ಯವಿರುವ ಮರಗಳ ಪಟ್ಟಿಯನ್ನು ಮಾಡಿ.

**ವಿಧಾನ**

- ಚಟುವಟಿಕೆಯ ಬಗ್ಗೆ ವಿದ್ಯಾರ್ಥಿಗಳಿಗೆ ಮುಂಚಿತವಾಗಿ ತಿಳಿಸುವುದು.
- ಚಟುವಟಿಕೆಯ ಮಹತ್ವವನ್ನು ವಿವರಿಸುವುದು.
- ಯೋಜಿಸಿದಂತೆ ಚಟುವಟಿಕೆಯನ್ನು ನಿರ್ವಹಿಸುವುದು.
- ಪ್ರಶ್ನೆಗಳನ್ನು ಕೇಳಲು ವಿದ್ಯಾರ್ಥಿಗಳನ್ನು ಪ್ರೇರೇಪಿಸುವುದು.
- ಚಟುವಟಿಕೆಗಾಗಿ ಸೇರಲು ಆಯ್ಕೆಮಾಡಿಕೊಂಡ ಮರವನ್ನು ಗುರುತಿಸುವಂತೆ ವಿದ್ಯಾರ್ಥಿಗಳಿಗೆ ತಿಳಿಸುವುದು.

- ಗುರುತಿಸಲಾದ ಮರ ಮತ್ತು ನಮ್ಮ ಜೀವನದಲ್ಲಿ ಅದರ ಬಳಕೆಯ ಬಗ್ಗೆ ಸಂಕ್ಷಿಪ್ತ ಚರ್ಚೆಯನ್ನು ನಡೆಸುವುದು.
- ಮರಕ್ಕೆ ಸಂಬಂಧಿಸಿದ ಕಥೆಗಳನ್ನು ಹೇಳಲು ವಿದ್ಯಾರ್ಥಿಗಳಿಗೆ ಹೇಳುವುದು.
- ಮರವನ್ನು ಗುಂಪಿನಲ್ಲಿ ತಬ್ಬಿಕೊಳ್ಳಲು ಮತ್ತು ಮರದೊಂದಿಗೆ ಏಕತೆಯ ಭಾವನೆಯನ್ನು ಅನುಭವಿಸಲು ವಿದ್ಯಾರ್ಥಿಗಳಿಗೆ ಹೇಳುವುದು.
- ಆಲದ ಮರ (ಬರ್ಗದ್), ಅರಳಿ, ಬೇವು, ಮಾವು ಮುಂತಾದ ವಿವಿಧ ಮರಗಳ ಮಹತ್ವದ ಬಗ್ಗೆ ಮಾತನಾಡುವುದು.
- ಹೆಚ್ಚು ಮರ ಗಿಡಗಳನ್ನು ನೆಡುವುದು ಮತ್ತು ಅವುಗಳ ಸಂರಕ್ಷಣೆ ಕುರಿತಾದ ವಿಚಾರಗಳನ್ನು ಚರ್ಚಿಸುವುದು.
- ಚಟುವಟಿಕೆಯ ಸಮಯದಲ್ಲಿ ಅವರ ಅವಲೋಕನಗಳು ಮತ್ತು ಕಲಿಕೆಗಳ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು.
- ವರದಿಯನ್ನು ತಯಾರಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.

## ಮೌಲ್ಯಮಾಪನ

ಪ್ರತಿಯೊಂದು ಚಟುವಟಿಕೆಯನ್ನು ಈ ಕೆಳಗಿನ ಮಾನದಂಡಗಳ ಮೇಲೆ ಮೌಲ್ಯಮಾಪನ ಮಾಡಬೇಕಾಗುತ್ತದೆ

- ಸೃಜನಶೀಲತೆ
- ಪ್ರಸ್ತುತಿ
- ತೊಡಗಿಸಿಕೊಳ್ಳುವಿಕೆ
- ಬರವಣಿಗೆಯ ಕೌಶಲಗಳು

## ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು.

ವೀಕ್ಷಣೆ, ವಿಶ್ಲೇಷಣೆ, ವ್ಯಾಖ್ಯಾನ, ವರದಿಗಳನ್ನು ಬರೆಯುವ ಕೌಶಲಗಳನ್ನು ಅಭಿವೃದ್ಧಿಪಡಿಸುವ ಮೂಲಕ, ಅವರು ತಮ್ಮ ಆಸಕ್ತಿಗೆ ಅನುಗುಣವಾಗಿ ಭವಿಷ್ಯದಲ್ಲಿ ಈ ಕೆಳಗಿನ ವೃತ್ತಿಗಳನ್ನು ಆಯ್ಕೆಮಾಡಬಹುದು ಎಂದು ಮಕ್ಕಳಿಗೆ ವಿವರಿಸಬಹುದು.

- ಪರಿಸರವಾದಿ
- ಕಥೆಗಾರ
- ಅರಣ್ಯಾಧಿಕಾರಿ
- ತೋಟಗಾರಿಕಾ ತಜ್ಞ
- NGO ಕಾರ್ಯಕರ್ತ
- ಅರಣ್ಯ ರಕ್ಷಕ

**ಚಟುವಟಿಕೆ 7**

| ಸೋಲಾರ್ ಎನರ್ಜಿ ಪಾರ್ಕ್‌ಗೆ ಭೇಟಿ | |
|---|---|
| ಚಟುವಟಿಕೆಯ ವಿಧ | ಹೊರಾಂಗಣ |
| ಬೇಕಾಗುವ ಅವಧಿ | 3 ಗಂಟೆಗಳು |
| ಅಭಿವೃದ್ಧಿಪಡಿಸ ಬೇಕಾದ ಕೌಶಲಗಳು | ವೀಕ್ಷಣಾ ಕೌಶಲಗಳು, ಆಲೋಚನಾ ಕೌಶಲಗಳು, ಅರಿವಿನ ಕೌಶಲಗಳು, ದೈನಂದಿನ ಜೀವನದಲ್ಲಿ ವಿಜ್ಞಾನದ ಅಳವಡಿಕೆ, ನವೀಕರಿಸಬಹುದಾದ ಸಂಪನ್ಮೂಲಗಳ ಅರಿವು, ಸಂವಹನ ಕೌಶಲಗಳು, ಇತ್ಯಾದಿ. |



**ಕಲಿಕಾ ಫಲಗಳು**

- ಸೌರಶಕ್ತಿಯ ವಿವಿಧ ಸಾಧನಗಳನ್ನು ಗುರುತಿಸುವರು.
- ಸೌರ ಉಪಕರಣಗಳ ಕೆಲಸದ ಬಗ್ಗೆ ಚರ್ಚಿಸುವರು.
- ಹೊಸ ಮತ್ತು ನವೀಕರಿಸಬಹುದಾದ ಶಕ್ತಿ ಮೂಲಗಳ ಬಗ್ಗೆ ಇನ್ನಷ್ಟು ತಿಳಿಯುವರು.

**ಅಗತ್ಯ ಸಾಮಗ್ರಿಗಳು**

- ನೋಟ್ ಬುಕ್ ಮತ್ತು ಪೆನ್
- ಸುರಕ್ಷತಾ ಕ್ಯಾಪ್
- ಆರಾಮದಾಯಕ ಪಾದರಕ್ಷೆಗಳು

**ಶಿಕ್ಷಕರಿಗೆ ಸೂಚನೆ**

- ಚಟುವಟಿಕೆಯ ಯೋಜನೆಯನ್ನು ಅಭಿವೃದ್ಧಿಪಡಿಸುವುದು.
- ಅನುದಾನ, ಕಚ್ಚಾ ಸಾಮಗ್ರಿ, ಸಾರಿಗೆ ಇತ್ಯಾದಿ ಚಟುವಟಿಕೆಗಳಿಗೆ ಅಗತ್ಯ ವ್ಯವಸ್ಥೆಗಳನ್ನು ಮಾಡುವುದು.
- ಚಟುವಟಿಕೆಯ ಉದ್ದೇಶ ಮತ್ತು ತಯಾರಿಕೆಯ ವಿಧಾನವನ್ನು ಪೋಷಕರಿಗೆ ತಿಳಿಸುವುದು.
- ಉದ್ದೇಶ ಮತ್ತು ಚಟುವಟಿಕೆ ತಯಾರಿಕೆಯ ವಿಧಾನವನ್ನು ವಿದ್ಯಾರ್ಥಿಗಳಿಗೆ ಸಂಕ್ಷಿಪ್ತವಾಗಿ ತಿಳಿಸುವುದು.
- ಚರ್ಚಿಸುವಾಗ ಟಿಪ್ಪಣಿಗಳನ್ನು ಬರೆದುಕೊಳ್ಳಲು ಮತ್ತು ವರದಿಯನ್ನು ಬರೆಯಲು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವುದು.
- ಚಟುವಟಿಕೆಯ ವರದಿಯನ್ನು ಪ್ರಾಂಶುಪಾಲರು/ಮುಖ್ಯೋಪಾಧ್ಯಾಯರಿಗೆ ಸಲ್ಲಿಸುವುದು.

**ವಿದ್ಯಾರ್ಥಿಗಳಿಗೆ ಸೂಚನೆ**

- ಶಿಕ್ಷಕರು ನೀಡಿದ ಸಂಕ್ಷಿಪ್ತ ಸೂಚನೆಗಳ ಪ್ರಕಾರ ಸಿದ್ಧತೆಗಳನ್ನು ಮಾಡಿ.
- ಶಿಕ್ಷಕರ, ಮಾರ್ಗದರ್ಶಿಗಳ ಅಥವಾ ಬೋಧಕರ ಸೂಚನೆಗಳನ್ನು ಅನುಸರಿಸಿ.
- ಚಟುವಟಿಕೆಯ ಸಂದರ್ಭದಲ್ಲಿ ಶಿಸ್ತು ಕಾಪಾಡಿ.
- ಭೇಟಿಯ ಸಂದರ್ಭದಲ್ಲಿ ಸೋಲಾರ್ ಪಾರ್ಕ್‌ನ ಕಾರ್ಯವೈಖರಿ ಬಗ್ಗೆ ಮಾರ್ಗದರ್ಶಕರಿಗೆ ಪ್ರಶ್ನೆಗಳನ್ನು ಕೇಳುವ ಮೂಲಕ ಹೆಚ್ಚಿನ ಮಾಹಿತಿ ಪಡೆದು ವರದಿ ಮಾಡಿ.
- ಸೋಲಾರ್ ಪಾರ್ಕ್‌ನಲ್ಲಿ ಬಳಸಲಾದ ವಿವಿಧ ರೀತಿಯ ಸೌರ ಶಕ್ತಿ ಉಪಕರಣಗಳನ್ನು ಗಮನಿಸಿ ಬರೆದಿಟ್ಟುಕೊಳ್ಳಿ.

**ವಿಧಾನ**

- ಚಟುವಟಿಕೆಯ ಬಗ್ಗೆ ವಿದ್ಯಾರ್ಥಿಗಳಿಗೆ ಮುಂಚಿತವಾಗಿ ತಿಳಿಸುವುದು.
- ಚಟುವಟಿಕೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ವಿವರಿಸುವುದು.

- ನಿಗದಿತ/ಗೊತ್ತುಪಡಿಸಿದ ಸ್ಥಳಕ್ಕೆ ಭೇಟಿ ನೀಡುವುದು.
- ಪ್ರಶ್ನೆಗಳನ್ನು ಕೇಳಲು ವಿದ್ಯಾರ್ಥಿಗಳನ್ನು ಪ್ರೇರೇಪಿಸುವುದು.
- ಸೌರ ಉಪಕರಣಗಳ ತಯಾರಿಕೆಗೆ ಬಳಸುತ್ತಿರುವ ವಿವಿಧ ಕಚ್ಚಾ ವಸ್ತುಗಳ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು.
- ಸೋಲಾರ್ ಪಾರ್ಕ್ ಮತ್ತು ವಿವಿಧ ಸೌರ ಉಪಕರಣಗಳ ಕಾರ್ಯ ಪ್ರಕ್ರಿಯೆಯ ಬಗ್ಗೆ ಚರ್ಚಿಸುವುದು.
- ಸೌರ ವಿದ್ಯುತ್ ಉತ್ಪಾದನಾ ಪ್ರಕ್ರಿಯೆಯ ಬಗ್ಗೆ ವಿದ್ಯಾರ್ಥಿಗಳಿಗೆ ವಿವರಿಸುವುದು.
- ಚಟುವಟಿಕೆಯ ಸಮಯದಲ್ಲಿ ಅವರ ಅವಲೋಕನಗಳು ಮತ್ತು ಕಲಿಕೆಗಳ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು.
- ವರದಿಯನ್ನು ತಯಾರಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.

## ಮೌಲ್ಯಮಾಪನ

ಪ್ರತಿಯೊಂದು ಚಟುವಟಿಕೆಯನ್ನು ಈ ಕೆಳಗಿನ ಮಾನದಂಡಗಳ ಮೇಲೆ ಮೌಲ್ಯಮಾಪನ ಮಾಡಬೇಕಾಗುತ್ತದೆ

- ವೀಕ್ಷಣಾ ಕೌಶಲಗಳು
- ಪ್ರಶ್ನಿಸುವ ಕೌಶಲಗಳು
- ಸಮಯಪ್ರಜ್ಞೆ
- ಗುಂಪು ಕಾರ್ಯ

## ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು

ವೀಕ್ಷಣೆ, ವಿಶ್ಲೇಷಣೆ, ವ್ಯಾಖ್ಯಾನ, ವರದಿಗಳನ್ನು ಬರೆಯುವ ಕೌಶಲಗಳನ್ನು ಅಭಿವೃದ್ಧಿಪಡಿಸುವ ಮೂಲಕ, ಅವರು ತಮ್ಮ ಆಸಕ್ತಿಗೆ ಅನುಗುಣವಾಗಿ ಭವಿಷ್ಯದಲ್ಲಿ ಈ ಕೆಳಗಿನ ವೃತ್ತಿಗಳನ್ನು ಆಯ್ಕೆಮಾಡಿಕೊಳ್ಳಬಹುದು ಎಂದು ಮಕ್ಕಳಿಗೆ ವಿವರಿಸಬಹುದು.

- ಸೌರ ಯಂತ್ರಗಳ ತಯಾರಕ
- ಸೌರೋಪಕರಣಗಳ ಮಾರಾಟ ಮತ್ತು ಸೇವೆ
- ಸೌರ ಉಪಕರಣ ಸೇವೆ ಒದಗಿಸುವವರು
- ಎಲೆಕ್ಟ್ರಿಷಿಯನ್ (ವಿದ್ಯುತ್ ಕಾರ್ಮಿಕ/ವಿದ್ಯುತ್ ಕೆಲಸಗಾರ)

**ಚಟುವಟಿಕೆ 8**

| ಜೈವಿಕ ಅನಿಲ ಘಟಕಕ್ಕೆ ಭೇಟಿ | |
|---|---|
| ಚಟುವಟಿಕೆಯ ವಿಧ | ಹೊರಾಂಗಣ |
| ಬೇಕಾಗುವ ಅವಧಿ | 3 ಗಂಟೆಗಳು |
| ಅಭಿವೃದ್ಧಿಪಡಿಸ ಬೇಕಾದ ಕೌಶಲಗಳು | ವೀಕ್ಷಣಾ ಕೌಶಲಗಳು, ಆಲೋಚನಾ ಕೌಶಲಗಳು, ಜ್ಞಾನಾತ್ಮಕ ಕೌಶಲಗಳು, ದೈನಂದಿನ ಜೀವನದಲ್ಲಿ ವಿಜ್ಞಾನದ ಅಳವಡಿಕೆ, ನವೀಕರಿಸಬಹುದಾದ ಶಕ್ತಿಯ ಸಂಪನ್ಮೂಲಗಳ ಅರಿವು ಮತ್ತು ಸಂವಹನ ಕೌಶಲಗಳು, ಇತ್ಯಾದಿ. |



**ಕಲಿಕಾ ಫಲಗಳು**

- ಜೈವಿಕ ಅನಿಲ ಸ್ಥಾವರದ ವಿವಿಧ ಉಪಕರಣಗಳು ಮತ್ತು ಘಟಕಗಳನ್ನು ಗುರುತಿಸುವುದು
- ಜೈವಿಕ ಅನಿಲ ಸ್ಥಾವರದ ಕೆಲಸವನ್ನು ವಿವರಿಸುವುದು
- ಜೈವಿಕ ಅನಿಲದ ಉಪಯೋಗಗಳ ಬಗ್ಗೆ ವಿವರಿಸುವುದು

**ಅಗತ್ಯವಿರುವ ಸಾಮಗ್ರಿಗಳು**

- ನೋಟ್ ಪುಸ್ತಕ ಮತ್ತು ಪೆನ್ನು
- ಕೈಗವಸುಗಳು
- ಸುರಕ್ಷತಾ ಕನ್ನಡಕ
- ಆರಾಮದಾಯಕ ಪಾದರಕ್ಷೆಗಳು

**ಶಿಕ್ಷಕರಿಗೆ ಸೂಚನೆಗಳು**

- ಭೇಟಿ ನೀಡಬೇಕಾದ ಸ್ಥಳವನ್ನು ಆಯ್ಕೆ ಮಾಡುವುದು.
- ಚಟುವಟಿಕೆಯ ಯೋಜನೆಯನ್ನು ಅಭಿವೃದ್ಧಿಪಡಿಸುವುದು.
- ಅಧಿಕಾರಿಗಳಿಂದ ಅನುಮತಿ ಪಡೆದು ಭೇಟಿಯ ದಿನಾಂಕವನ್ನು ನಿಗದಿಪಡಿಸುವುದು.
- ಚಟುವಟಿಕೆಯ ತಯಾರಿಕಾ ವಿಧಾನ ಮತ್ತು ಉದ್ದೇಶವನ್ನು ವಿದ್ಯಾರ್ಥಿಗೆ ಸಂಕ್ಷಿಪ್ತವಾಗಿ ತಿಳಿಸುವುದು.
- ಚಟುವಟಿಕೆಗಳಿಗೆ ಅಗತ್ಯವಿರುವ ಅನುದಾನ, ಕಚ್ಚಾ ಸಾಮಗ್ರಿ, ಸಾರಿಗೆ ವ್ಯವಸ್ಥೆ, ಇತ್ಯಾದಿ ವ್ಯವಸ್ಥೆಗಳನ್ನು ಮಾಡುವುದು.
- ಚಟುವಟಿಕೆ ತಯಾರಿಕೆಯ ವಿಧಾನ ಮತ್ತು ಉದ್ದೇಶವನ್ನು ಪೋಷಕರಿಗೆ ತಿಳಿಸುವುದು.
- ಚಟುವಟಿಕೆಯ ವರದಿಯನ್ನು ಪ್ರಾಂಶುಪಾಲರು/ ಮುಖ್ಯೋಪಾಧ್ಯಾಯರಿಗೆ ಸಲ್ಲಿಸುವುದು.

**ವಿದ್ಯಾರ್ಥಿಗಳಿಗೆ ಸೂಚನೆಗಳು**

- ಶಿಕ್ಷಕರು, ಮಾರ್ಗದರ್ಶಕರು ಅಥವಾ ಬೋಧಕರ ಸೂಚನೆಗಳನ್ನು ಅನುಸರಿಸಿ.
- ಚಟುವಟಿಕಾ ಸಮಯದಲ್ಲಿ ಶಿಸ್ತು ಕಾಪಾಡಿ.
- ಭೇಟಿಯ ಸಮಯದಲ್ಲಿ ಅಧಿಕಾರಿಗಳು/ ಮಾರ್ಗದರ್ಶಕರು/ ಬೋಧಕರಿಂದ ಪ್ರಶ್ನೆಗಳನ್ನು ಕೇಳಿ ಮತ್ತು ಸಂಗ್ರಹಿಸಿದ ಮಾಹಿತಿಯನ್ನು ದಾಖಲಿಸಿಕೊಳ್ಳಿ.

- ಜೈವಿಕ ಅನಿಲ ಸ್ಥಾವರದಲ್ಲಿ ಬಳಸುವ ವಿವಿಧ ಘಟಕಗಳ ಮಾಹಿತಿಯನ್ನು ಬರೆದಿಟ್ಟುಕೊಳ್ಳಿ.
- ಜೈವಿಕ ಅನಿಲ ಸ್ಥಾವರದ ಬಳಕೆ ಮತ್ತು ಕಾರ್ಯದ ಬಗ್ಗೆ ಕೆಲಸಗಾರರೊಂದಿಗೆ ಸಂವಹನ ನಡೆಸಿ.
- ಜೈವಿಕ ಅನಿಲದ ವಿವಿಧ ಉಪಯೋಗಗಳ ಕುರಿತು ಚರ್ಚಿಸಿ.
- ಜೈವಿಕ ಅನಿಲ ಸ್ಥಾವರದ ಪ್ರಾಮುಖ್ಯತೆ ಮತ್ತು ಬಳಕೆಯ ಬಗ್ಗೆ ಚರ್ಚಿಸಿ.

**ವಿಧಾನ**

- ವಿದ್ಯಾರ್ಥಿಗಳಿಗೆ ಚಟುವಟಿಕೆಯ ಬಗ್ಗೆ ಮುಂಚಿತವಾಗಿ ತಿಳಿಸುವುದು.
- ವಿದ್ಯಾರ್ಥಿಗಳಿಗೆ ಚಟುವಟಿಕೆಯ ಮಹತ್ವವನ್ನು ವಿವರಿಸುವುದು.
- ನಿಗದಿತ ಸ್ಥಳಕ್ಕೆ ಭೇಟಿ ನೀಡುವುದು.
- ವಿವಿಧ ಘಟಕಗಳ ತಂತ್ರಜ್ಞರೊಂದಿಗೆ ಸಂವಹನ ನಡೆಸುವುದು ಮತ್ತು ಅದರ ಕಾರ್ಯವೈಖರಿಯ ಬಗ್ಗೆ ತಿಳಿಯುವುದು.
- ಜೈವಿಕ ಅನಿಲ ತಯಾರಿಕೆಗೆ ಬಳಸುವ ವಿವಿಧ ಕಚ್ಚಾ ವಸ್ತುಗಳ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು.
- ಜೈವಿಕ ಅನಿಲ ಸ್ಥಾವರದ ಕಾರ್ಯವೈಖರಿಯ ಬಗ್ಗೆ ಚರ್ಚಿಸುವುದು.
- ಚಟುವಟಿಕೆ ಸಮಯದಲ್ಲಿ ವಿದ್ಯಾರ್ಥಿಗಳ ಅವಲೋಕನ ಮತ್ತು ಕಲಿಕೆಯಯಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು.
- ಚಟುವಟಿಕೆಯ ವರದಿ ತಯಾರಿಸುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.

**ಮೌಲ್ಯಮಾಪನ**

ಪ್ರತಿಯೊಂದು ಚಟುವಟಿಕೆಯನ್ನು ಈ ಕೆಳಗಿನ ಮಾನದಂಡಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡುವುದು.

- ಸೃಜನಶೀಲತೆ
- ಗುಂಪು ಕಾರ್ಯ
- ವೀಕ್ಷಣಾ ಕೌಶಲಗಳು
- ಸಂಘಟನಾ ಕೌಶಲಗಳು
- ಸಂವಹನ ಕೌಶಲಗಳು

**ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು**

ವೀಕ್ಷಣೆ, ವಿಶ್ಲೇಷಣೆ, ವ್ಯಾಖ್ಯಾನ, ವರದಿಗಳನ್ನು ಬರೆಯುವ ಕೌಶಲಗಳನ್ನು ಅಭಿವೃದ್ಧಿ ಪಡಿಸುವ ಮೂಲಕ, ಅವರು ತಮ್ಮ ಆಸಕ್ತಿಗೆ ಅನುಗುಣವಾಗಿ ಭವಿಷ್ಯದಲ್ಲಿ ಈ ಕೆಳಗಿನ ವೃತ್ತಿಗಳನ್ನು ಮುಂದುವರಿಸಬಹುದು ಎಂದು ಮಕ್ಕಳಿಗೆ ವಿವರಿಸುವುದು.

- ಜೈವಿಕ ಅನಿಲ ತಂತ್ರಜ್ಞ
- ಜೈವಿಕ ಅನಿಲ ಉದ್ಯಮಿ

**ಚಟುವಟಿಕೆ 9**

| ಸಾಕುಪ್ರಾಣಿಗಳ ಆರೈಕೆಯ ಕುರಿತು ಸಮೀಕ್ಷೆ ಮತ್ತು ವರದಿ ಬರವಣಿಗೆ | |
|---|---|
| ಚಟುವಟಿಕೆಯ ವಿಧ | ಹೊರಾಂಗಣ/ ಒಳಾಂಗಣ |
| ಬೇಕಾಗುವ ಅವಧಿ | 1 ಗಂಟೆಗಳು |
| ಅಭಿವೃದ್ಧಿಪಡಿಸ ಬೇಕಾದ ಕೌಶಲಗಳು | ವೀಕ್ಷಣಾ ಕೌಶಲ, ಸಂವಹನ ಕೌಶಲ, ಪ್ರಾಣಿಗಳ ಬಗ್ಗೆ ಜವಾಬ್ದಾರಿಯ ಭಾವನೆ |



**ಕಲಿಕಾ ಫಲಗಳು**

- ಸಮೀಕ್ಷೆ ಮತ್ತು ಸಮೀಕ್ಷೆಗಳಿಗೆ ಸಂಬಂಧಿಸಿದ ನಿಯಮಗಳನ್ನು ಗುರುತಿಸುವುದು ಮತ್ತು ಚರ್ಚಿಸುವುದು.
- ಸಮುದಾಯದೊಂದಿಗೆ ಸಂವಾದದ ಸಮಯದಲ್ಲಿ ಸಂದೇಹಕ್ಕೆ ಒಳಗಾಗುವುದು.
- ಸಮೀಕ್ಷೆಯ ವರದಿಯ ವಿವರ.
- ಸಮಾಜದಲ್ಲಿ ವಿವಿಧ ರೀತಿಯ ಸಾಕು ಪ್ರಾಣಿಗಳನ್ನು ದತ್ತು ಪಡೆದಿರುವ ಬಗ್ಗೆ ಚರ್ಚಿಸುವುದು.

**ಅಗತ್ಯವಿರುವ ಸಾಮಗ್ರಿಗಳು**

- ಸಮೀಕ್ಷೆಯ ರೂಪಗಳು ಅಥವಾ ಪ್ರಶ್ನಾವಳಿ
- ನೋಟ್ ಪುಸ್ತಕ ಮತ್ತು ಪೆನ್ನು
- ಆರಾಮದಾಯಕ ಪಾದರಕ್ಷೆಗಳು

**ಶಿಕ್ಷಕರಿಗೆ ಸೂಚನೆಗಳು**

- ಚಟುವಟಿಕೆಯ ಯೋಜನೆಯನ್ನು ಅಭಿವೃದ್ಧಿಪಡಿಸುವುದು.
- ವಿದ್ಯಾರ್ಥಿಗೆ ಚಟುವಟಿಕೆಯ ಉದ್ದೇಶ ಮತ್ತು ವರದಿ ತಯಾರಿಕೆಯ ವಿಧಾನವನ್ನು ಸಂಕ್ಷಿಪ್ತವಾಗಿ ತಿಳಿಸುವುದು.
- ಸಮಾಜದಲ್ಲಿ ಸಾಕು ಪ್ರಾಣಿಗಳ ಪಾತ್ರದ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು.
- ವಿದ್ಯಾರ್ಥಿಗಳು ನಡೆಸಬೇಕಾದ ಸಮೀಕ್ಷೆಯ ಕಾರ್ಯ ವಿಧಾನದ ಬಗ್ಗೆ ಚರ್ಚಿಸುವುದು. ಯಾವುದೇ ಅಧ್ಯಯನಕ್ಕಾಗಿ ದತ್ತಾಂಶ ಸಂಗ್ರಹಣೆಯಲ್ಲಿ ಸಮೀಕ್ಷೆಯು ಸಹಾಯ ಮಾಡುತ್ತದೆ ಎಂಬುದನ್ನು ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು.
- ಪ್ರತಿ ವಿದ್ಯಾರ್ಥಿಗೆ ಸಂಕ್ಷಿಪ್ತ ಸಮೀಕ್ಷೆಯ ವಿವರಗಳನ್ನು ನೀಡುವುದು.
- ವಿದ್ಯಾರ್ಥಿಗಳು ಗುಂಪಿನಲ್ಲಿ ಕುಳಿತು ಅವರ ಪ್ರತಿಕ್ರಿಯೆಗಳ ಬಗ್ಗೆ ಚರ್ಚಿಸುವಂತೆ ಮಾಡುವುದು ಮತ್ತು ಸರಿಯಾದ ಸ್ವರೂಪದ ಪ್ರಶ್ನೆಗಳನ್ನು ಪುನರವಲೋಕನ ಮಾಡುವುದು.
- ವಿದ್ಯಾರ್ಥಿಗಳು ಅಂತಿಮ ವರದಿಯನ್ನು ಬರೆಯಲು ಪ್ರೋತ್ಸಾಹಿಸುವುದು.
- ಚಟುವಟಿಕೆಯ ವರದಿಯನ್ನು ಪ್ರಾಂಶುಪಾಲರು/ ಮುಖ್ಯೋಪಾಧ್ಯಾಯರಿಗೆ ಸಲ್ಲಿಸುವುದು.

**ವಿದ್ಯಾರ್ಥಿಗಳಿಗೆ ಸೂಚನೆಗಳು**

- ಶಿಕ್ಷಕರು ಸೂಚನೆ ನೀಡಿದ ಪ್ರಕಾರ ಸಿದ್ಧತೆಗಳನ್ನು ಮಾಡಿಕೊಳ್ಳಿ.
- ಶಿಕ್ಷಕ, ಮಾರ್ಗದರ್ಶಿ ಅಥವಾ ಬೋಧಕರ ಸೂಚನೆಗಳನ್ನು ಅನುಸರಿಸಿ.
- ಶಿಸ್ತು ಕಾಪಾಡಿ.
- ಶಿಕ್ಷಕರು ಮತ್ತು ಸ್ನೇಹಿತರೊಂದಿಗೆ ಸಮೀಕ್ಷಾ ನಮೂನೆ ಮತ್ತು ಎಲ್ಲಾ ಅಂಶಗಳ ಬಗ್ಗೆ ಚರ್ಚಿಸಿ.
- ಸಮಾಜವು ದತ್ತು ಪಡೆದ ಸಾಕು ಪ್ರಾಣಿಗಳ ಕುರಿತು ಸಮುದಾಯದೊಂದಿಗೆ ಸಂವಹನ ನಡೆಸಿ.

## ವಿಧಾನ

- ಚಟುವಟಿಕೆಯ ಬಗ್ಗೆ ವಿದ್ಯಾರ್ಥಿಗಳಿಗೆ ಮುಂಚಿತವಾಗಿ ತಿಳಿಸುವುದು.
- ಚಟುವಟಿಕೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ವಿವರಿಸುವುದು.
- ಚಟುವಟಿಕೆಯನ್ನು ಯೋಜಿಸಿದಂತೆ ನಿರ್ವಹಿಸುವುದು.
- ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಕೇಳುವಂತೆ ಪ್ರೇರೇಪಿಸುವುದು.
- ಲಭ್ಯವಿರುವ ಎಲ್ಲಾ ಮಾಹಿತಿಯನ್ನು ಬಳಸಿಕೊಂಡು ಸಮೀಕ್ಷೆಯ ಪ್ರಶ್ನಾವಳಿಯನ್ನು ತಯಾರಿಸುವುದು.
- ಪ್ರಶ್ನಾವಳಿಯನ್ನು ಬಳಸಿಕೊಂಡು ಸಹಪಾಠಿಗಳು/ ನೆರೆಹೊರೆಯವರೊಂದಿಗೆ ಸಮೀಕ್ಷೆಯನ್ನು ಮಾಡುವುದು.
- ಚಟುವಟಿಕೆಯ ಸಮಯದಲ್ಲಿ ಅವರ ಅವಲೋಕನ ಮತ್ತು ಕಲಿಕೆಯ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು.
- ವಿದ್ಯಾರ್ಥಿಗಳು ಸಮೀಕ್ಷೆಯನ್ನು ಪೂರ್ಣಗೊಳಿಸಿದ ನಂತರ, ವರದಿಯನ್ನು ತಯಾರಿಸಲು ಪ್ರೋತ್ಸಾಹಿಸುವುದು.

## ಮೌಲ್ಯಮಾಪನ

ಪ್ರತಿಯೊಂದು ಚಟುವಟಿಕೆಯನ್ನು ಈ ಕೆಳಗಿನ ಮಾನದಂಡಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡುವುದು.

- ಯೋಜನೆ
- ಸಂಘಟನಾ ಕೌಶಲಗಳು
- ಭಾಗವಹಿಸುವಿಕೆ
- ವಿಶ್ಲೇಷಿಸುವ ಕೌಶಲಗಳು
- ವರದಿ ಮಾಡುವುದು
- ಸಮೀಕ್ಷಾ ಕೌಶಲಗಳು

## ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು

ವೀಕ್ಷಣೆ, ವಿಶ್ಲೇಷಣೆ, ವ್ಯಾಖ್ಯಾನ, ವರದಿಗಳನ್ನು ಬರೆಯುವ ಕೌಶಲಗಳನ್ನು ಅಭಿವೃದ್ಧಿಪಡಿಸುವ ಮೂಲಕ ಅವರು ತಮ್ಮ ಆಸಕ್ತಿಗೆ ಅನುಗುಣವಾಗಿ ಈ ಕೆಳಗಿನ ವೃತ್ತಿಗಳನ್ನು ಮುಂದುವರಿಸಬಹುದು ಎಂದು ಮಕ್ಕಳಿಗೆ ವಿವರಿಸುವುದು.

- ಪೆಟ್ ಗ್ರೂಮರ್ (ಸಾಕುಪ್ರಾಣಿಗಳ ಸೌಂದರ್ಯಪಾಲಕ)
- ವನ್ಯಜೀವಿ ಛಾಯಾಗ್ರಾಹಕ
- ಪಶು ವೈದ್ಯರು
- ಸಾಗರಶಾಸ್ತ್ರಜ್ಞರು
- ಜಲಚರ ತಜ್ಞರು
- ಪ್ರಾಣಿ ವಿಜ್ಞಾನಿಗಳು
- ಪ್ರಾಣಿ ತರಬೇತುದಾರರು
- ಮೃಗಾಲಯ ವ್ಯವಸ್ಥಾಪಕರು (ಝೂ ಮ್ಯಾನೇಜರ್)

**ಚಟುವಟಿಕೆ 10**

| ಕೃತಕ ಬುದ್ಧಿಮತ್ತೆ/ ದತ್ತಾಂಶ ವಿಜ್ಞಾನ/ ರೋಬೋಟಿಕ್ಸ್ ಕುರಿತು ತಜ್ಞರ ಉಪನ್ಯಾಸ | |
|---|---|
| ಚಟುವಟಿಕೆಯ ವಿಧ | ಒಳಾಂಗಣ |
| ಬೇಕಾಗುವ ಅವಧಿ | 3 ಗಂಟೆಗಳು |
| ಅಭಿವೃದ್ಧಿಪಡಿಸಬೇಕಾದ ಕೌಶಲಗಳು | ವೀಕ್ಷಣಾ ಕೌಶಲಗಳು, ವಿಶ್ಲೇಷಣಾತ್ಮಕ (ವಿಮರ್ಶಾತ್ಮಕ) ಕೌಶಲಗಳು, ಆಲೋಚನಾ ಕೌಶಲಗಳು, ಜ್ಞಾನಾತ್ಮಕ ಕೌಶಲಗಳು, ಪರಸ್ಪರ ಹೊಂದಾಣಿಕೆಯ ಕೌಶಲಗಳು, ಸಂವಹನ ಕೌಶಲಗಳು, ಸಮಸ್ಯೆ ಪರಿಹಾರ ಮತ್ತು ನಿರ್ಧಾರ ತೆಗೆದುಕೊಳ್ಳುವ ಕೌಶಲಗಳು. |



**ಕಲಿಕಾ ಫಲಗಳು**

- ಕೃತಕ ಬುದ್ಧಿಮತ್ತೆ/ ಮಾಹಿತಿ ತಂತ್ರಜ್ಞಾನ/ಯಂತ್ರಮಾನವ ವಿಜ್ಞಾನ (ರೊಬೊಟಿಕ್ಸ್) ದ ಬಗ್ಗೆ ತಿಳಿದುಕೊಳ್ಳುವುದು.
- ಕೃತಕ ಬುದ್ಧಿಮತ್ತೆ/ ಮಾಹಿತಿ ತಂತ್ರಜ್ಞಾನ/ಯಂತ್ರಮಾನವ ವಿಜ್ಞಾನ (ರೊಬೊಟಿಕ್ಸ್) ದ ವಿವಿಧ ಅಪ್ಲಿಕೇಶನ್ (APP) ಗಳ ಬಗ್ಗೆ ತಿಳಿದುಕೊಳ್ಳುವುದು.
- ಈ ಕ್ಷೇತ್ರದಲ್ಲಿ ಒಳಗೊಂಡಿರುವ ವಿವಿಧ ಅವಕಾಶಗಳ ಬಗ್ಗೆ ತಿಳಿದುಕೊಳ್ಳುವುದು.
- ವಿವಿಧ ರೀತಿಯ ರೋಬೋಟ್ ಗಳು ಮತ್ತು ಅವುಗಳ ಕೆಲಸವನ್ನು ಗುರುತಿಸಲು ಕಲಿತುಕೊಳ್ಳುವುದು.

**ಅಗತ್ಯವಿರುವ ಸಾಮಗ್ರಿಗಳು**

- ನೋಟ್ ಪುಸ್ತಕ ಮತ್ತು ಪೆನ್ನು
- ಕೃತಕ ಬುದ್ಧಿಮತ್ತೆ/ ಮಾಹಿತಿ ತಂತ್ರಜ್ಞಾನ/ಯಂತ್ರಮಾನವಶಾಸ್ತ್ರ (ರೊಬೊಟಿಕ್ಸ್)ದ ಕುರಿತು ಪ್ರಸ್ತುತಿ.
- ಅಂತರ್ಜಾಲ ಸಂಪರ್ಕ ಹೊಂದಿರುವ ಗಣಕಯಂತ್ರಗಳು.

**ಶಿಕ್ಷಕರಿಗೆ ಸೂಚನೆಗಳು**

- ಚಟುವಟಿಕೆಯ ಯೋಜನೆಯನ್ನು ಅಭಿವೃದ್ಧಿಪಡಿಸುವುದು.
- ಚಟುವಟಿಕೆಯ ತಯಾರಿಕಾ ವಿಧಾನ ಮತ್ತು ಉದ್ದೇಶದ ಬಗ್ಗೆ ವಿದ್ಯಾರ್ಥಿಗೆ ಸಂಕ್ಷಿಪ್ತವಾಗಿ ತಿಳಿಸುವುದು.
- ಕೃತಕ ಬುದ್ಧಿಮತ್ತೆ/ ಮಾಹಿತಿ ವಿಜ್ಞಾನ/ಯಂತ್ರಮಾನವಶಾಸ್ತ್ರ (ರೊಬೊಟಿಕ್ಸ್)ದ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಿಸುವುದು.
- ಕೃತಕ ಬುದ್ಧಿಮತ್ತೆಯ ವಿಕಾಸದ ಬಗ್ಗೆ ಚರ್ಚಿಸುವುದು.
- ದೈನಂದಿನ ಜೀವನದಲ್ಲಿ ಕೃತಕ ಬುದ್ಧಿಮತ್ತೆಯ ವಿವಿಧ ಅನ್ವಯಗಳ ಬಗ್ಗೆ ತೋರಿಸುವುದು/ ಚರ್ಚಿಸುವುದು.
- ಮಕ್ಕಳನ್ನು ಮುಕ್ತವಾಗಿ ತೊಡಗಿಸಿಕೊಳ್ಳಲು ಮಾರ್ಗದರ್ಶನ ನೀಡುವುದು.
- Ocean One, ATLAS, Robear, Sophia ಮುಂತಾದ ಮಾನವ ರೂಪದ ರೋಬಟ್ ಗಳ ಬಗ್ಗೆ ಸಣ್ಣ ಪ್ರಸ್ತುತಿಯನ್ನು ರಚಿಸಲು ಮಕ್ಕಳನ್ನು ಉತ್ತೇಜಿಸುವುದು.
- ಚಟುವಟಿಕೆಯ ವರದಿಯನ್ನು ಪ್ರಾಂಶುಪಾಲರು/ ಮುಖ್ಯೋಪಾಧ್ಯಾಯರಿಗೆ ಸಲ್ಲಿಸುವುದು.

**ವಿದ್ಯಾರ್ಥಿಗಳಿಗೆ ಸೂಚನೆಗಳು**

- ಶಿಕ್ಷಕ, ಮಾರ್ಗದರ್ಶಿ ಅಥವಾ ಬೋಧಕರ ಸೂಚನೆಗಳನ್ನು ಅನುಸರಿಸಿ.
- ಚಟುವಟಿಕೆಯ ಸಮಯದಲ್ಲಿ ಶಿಸ್ತು ಕಾಪಾಡಿ.

- ಚಟುವಟಿಕೆ ಸಮಯದಲ್ಲಿ ಅಧಿಕಾರಿಗಳು/ ಮಾರ್ಗದರ್ಶಿ/ ಬೋಧಕರಿಂದ ಪ್ರಶ್ನೆಗಳನ್ನು ಕೇಳಿ ಮತ್ತು ಸಂಗ್ರಹಿಸಿದ ಮಾಹಿತಿಯನ್ನು ದಾಖಲಿಸಿಕೊಳ್ಳಿ.
- ವಿಭಿನ್ನ ವೆಬ್ ಸೈಟ್ ಗಳನ್ನು ಹುಡುಕಿ, ಮಾನವ ರೂಪದ ರೋಬಟ್ ಗಳು, ವಿಭಿನ್ನ ಬುದ್ಧಿಮತ್ತೆ ಆಟಗಳ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಿ.

### ವಿಧಾನ

- ಚಟುವಟಿಕೆಯ ಬಗ್ಗೆ ವಿದ್ಯಾರ್ಥಿಗಳಿಗೆ ಮುಂಚಿತವಾಗಿ ತಿಳಿಸುವುದು.
- ಕೃತಕ ಬುದ್ಧಿಮತ್ತೆಯ ಬಗ್ಗೆ ವಿದ್ಯಾರ್ಥಿಗಳಿಗೆ ವಿವರಿಸುವುದು.
- AI, Machine learning, Deep learning, Augmented reality (AR), Virtual Reality (VR) and Mixed Reality (MR) ಮುಂತಾದ ವಿವಿಧ ಪದಗಳನ್ನು ವಿದ್ಯಾರ್ಥಿಗಳಿಗೆ ಅರ್ಥ ಮಾಡಿಕೊಳ್ಳಲು ಮತ್ತು ಕಲಿಯುವಂತೆ ಮಾಡುವುದು.
- ಬುದ್ಧಿಮತ್ತೆಯು ಯಂತ್ರಗಳಲ್ಲಿ ಹೇಗೆ ಪ್ರೇರಿತವಾಗಿದೆ ಎಂಬುದನ್ನು ವಿದ್ಯಾರ್ಥಿಗಳಿಗೆ ಅರ್ಥ ಮಾಡಿಕೊಳ್ಳುವಂತೆ ಮಾಡುವುದು (ನೈಸರ್ಗಿಕ ನ್ಯೂರಾನ್ ಗಳು ಮತ್ತು ಕೃತಕ ನ್ಯೂರಾನ್‌ಗಳಲ್ಲಿನ ವ್ಯತ್ಯಾಸ ಅಥವಾ ಹೋಲಿಕೆಗಳನ್ನು ವಿವರಿಸುವುದು)
- ವಿದ್ಯಾರ್ಥಿಗಳು ಟಿಪ್ಪಣಿ ಮತ್ತು ವರದಿಯನ್ನು ಬರೆಯಲು ಮಾರ್ಗದರ್ಶನ ನೀಡುವುದು.
- ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಕೇಳುವಂತೆ ಪ್ರೇರೇಪಿಸುವುದು.
- ಚಟುವಟಿಕೆಯ ಸಮಯದಲ್ಲಿ ವಿದ್ಯಾರ್ಥಿಗಳ ಅವಲೋಕನ ಮತ್ತು ಕಲಿಕೆಯ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು.
- ವಿದ್ಯಾರ್ಥಿಗಳು ವರದಿಯನ್ನು ತಯಾರಿಸುವಂತೆ ಪ್ರೋತ್ಸಾಹಿಸುವುದು.

### ಮೌಲ್ಯಮಾಪನ

ಪ್ರತಿಯೊಂದು ಚಟುವಟಿಕೆಯನ್ನು ಈ ಕೆಳಗಿನ ಮಾನದಂಡಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡುವುದು.

- ವೀಕ್ಷಣಾ ಕೌಶಲಗಳು
- ವಿಮರ್ಶಾತ್ಮಕ ಚಿಂತನೆ
- ಪ್ರಶ್ನಿಸುವ ಕೌಶಲಗಳು
- ಶಿಸ್ತು ಪಾಲನೆ

### ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು

ವೀಕ್ಷಣೆ, ವಿಶ್ಲೇಷಣೆ, ವ್ಯಾಖ್ಯಾನ, ವರದಿಗಳನ್ನು ಬರೆಯುವ ಈ ಕೌಶಲಗಳನ್ನು ಅಭಿವೃದ್ಧಿಪಡಿಸುವುದು, ಅವರು ತಮ್ಮ ಆಸಕ್ತಿಗೆ ಅನುಗುಣವಾಗಿ ಭವಿಷ್ಯದಲ್ಲಿ ಈ ಕೆಳಗಿನ ವೃತ್ತಿಗಳನ್ನು ಮುಂದುವರಿಸಬಹುದು ಎಂದು ಮಕ್ಕಳಿಗೆ ವಿವರಿಸುವುದು.

- ಗಣಕಯಂತ್ರ ಅಭಿಯಂತರರು
- ಯಂತ್ರಾಧಾರಿತ ಕಲಿಕಾ ಅಭಿಯಂತರರು
- ರೋಬೋಟಿಕ್ (ಯಂತ್ರಮಾನವಶಾಸ್ತ್ರ) ವಿಜ್ಞಾನಿಗಳು
- ಮಾಹಿತಿ ವಿಜ್ಞಾನಿಗಳು (ಡೇಟಾ ವಿಜ್ಞಾನಿ)/ ಸಂಶೋಧಕರು.

**ಚಟುವಟಿಕೆ 11**

| ಸೈಬರ್ ಭದ್ರತೆ ಕುರಿತು ತಜ್ಞರ ಚರ್ಚೆ | |
|---|---|
| ಚಟುವಟಿಕೆಯ ವಿಧ | ಒಳಾಂಗಣ |
| ಬೇಕಾಗುವ ಅವಧಿ | 4 ಗಂಟೆಗಳು |
| ಅಭಿವೃದ್ಧಿಪಡಿಸ ಬೇಕಾದ ಕೌಶಲಗಳು | ವಿಶ್ಲೇಷಣೆ, ಸಮುದಾಯ ಸುರಕ್ಷತೆ ಮತ್ತು ಆಸಕ್ತಿಗಳ ಬಗ್ಗೆ ಸಂವೇದನಾಶೀಲತೆಯ ಕೌಶಲ, ಜ್ಞಾನಾತ್ಮಕ ಕೌಶಲಗಳು, ಸಂವಹನ ಕೌಶಲಗಳು, ಪರಸ್ಪರ ಹೊಂದಾಣಿಕೆ ಕೌಶಲಗಳು, ವೀಕ್ಷಣಾ ಕೌಶಲಗಳು, ಡಿಜಿಟಲ್ ಜ್ಞಾನ, ತಂತ್ರಜ್ಞಾನಾತ್ಮಕ ಬುದ್ಧಿವಂತಿಕೆಯ ಕೌಶಲಗಳು ಮತ್ತು ಆಲೋಚನಾ ಕೌಶಲಗಳು. |



**ಕಲಿಕಾ ಫಲಗಳು**

- ಸೈಬರ್ ಅಪರಾಧದಲ್ಲಿ ಪ್ರಥಮ ಮಾಹಿತಿ ವರದಿ (ಎಫ್ ಐ ಆರ್) ದಾಖಲಿಸುವ ಪ್ರಕ್ರಿಯೆ ಬಗ್ಗೆ ವಿವರಿಸುವುದು.
- ಈ ಕ್ಷೇತ್ರದಲ್ಲಿರುವ ವಿವಿಧ ಅವಕಾಶಗಳ ಬಗ್ಗೆ ಅನ್ವೇಷಿಸುವುದು.
- ಸೈಬರ್ ಅಪರಾಧದ ಬಗ್ಗೆ ಚರ್ಚಿಸುವುದು.
- ನೈಜ ಪ್ರಪಂಚ ಮತ್ತು ಡಿಜಿಟಲ್ ಜಗತ್ತಿನಲ್ಲಿ ವಾಸಿಸುವ ಜನರ ನಡುವೆ ಸಂಪರ್ಕವನ್ನು ನಿರ್ಮಿಸುವುದು.

**ಅಗತ್ಯ ಸಾಮಗ್ರಿಗಳು**

- ನೋಟ್ ಪುಸ್ತಕ ಮತ್ತು ಪೆನ್ನು

**ಶಿಕ್ಷಕರಿಗೆ ಸೂಚನೆ**

- ಚಟುವಟಿಕೆಯ ಯೋಜನೆಯನ್ನು ಅಭಿವೃದ್ಧಿಪಡಿಸುವುದು.
- ವಿದ್ಯಾರ್ಥಿಗಳಿಗೆ ಚಟುವಟಿಕೆಯ ತಯಾರಿಕೆಯ ಉದ್ದೇಶ ಮತ್ತು ವಿಧಾನವನ್ನು ಸಂಕ್ಷಿಪ್ತವಾಗಿ ತಿಳಿಸುವುದು.
- ವಿದ್ಯಾರ್ಥಿಗಳು ಸೈಬರ್ ಪ್ರಪಂಚದ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಪ್ರೇರೇಪಿಸುವುದು.
- ವಿದ್ಯಾರ್ಥಿಗಳಿಗೆ ವಿವಿಧ ರೀತಿಯ ಸೈಬರ್ ಅಪರಾಧಗಳು/ ವಂಚನೆಗಳ ಬಗ್ಗೆ ತಿಳಿಸುವುದು.
- ಸೈಬರ್ ಅಪರಾಧಗಳನ್ನು ವಿವಿಧ ಮಾಧ್ಯಮಗಳ ಮೂಲಕ ವರದಿ ಮಾಡುವುದರ ಪ್ರಾಮುಖ್ಯತೆಯನ್ನು ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು.
- ವಿದ್ಯಾರ್ಥಿಗಳನ್ನು ಸಂವಾದದಲ್ಲಿ ತೊಡಗಿಕೊಳ್ಳುವುದು ಮತ್ತು ಪ್ರಶ್ನೆಗಳನ್ನು ಕೇಳುವಂತೆ ಪ್ರೇರೇಪಿಸುವುದು..
- ಚಟುವಟಿಕೆಯ ವರದಿಯನ್ನು ಪ್ರಾಂಶುಪಾಲರು/ ಮುಖ್ಯೋಪಾಧ್ಯಾಯರಿಗೆ ಸಲ್ಲಿಸುವುದು.

**ವಿದ್ಯಾರ್ಥಿಗಳಿಗೆ ಸೂಚನೆ**

- ತಜ್ಞರ ಉಪನ್ಯಾಸದಲ್ಲಿ ಆಸಕ್ತಿ ವಹಿಸಿ.
- ಉಪನ್ಯಾಸ ಸಮಯದಲ್ಲಿ ತಜ್ಞರಿಂದ ಪ್ರಶ್ನೆಗಳನ್ನು ಕೇಳಿ ಮತ್ತು ಅಗತ್ಯವಿರುವ ಎಲ್ಲಾ ಮಾಹಿತಿಯನ್ನು ಟಿಪ್ಪಣಿ ಮಾಡಿಕೊಳ್ಳಿ.
- ಉಪನ್ಯಾಸ ಸಮಯದಲ್ಲಿ ಶಿಸ್ತು ಕಾಪಾಡಿ.

**ವಿಧಾನ**

- ವಿದ್ಯಾರ್ಥಿಗಳಿಗೆ ಚಟುವಟಿಕೆಯ ಬಗ್ಗೆ ಮುಂಚಿತವಾಗಿ ತಿಳಿಸುವುದು.
- ವಿದ್ಯಾರ್ಥಿಗಳಿಗೆ ಚಟುವಟಿಕೆಯ ಮಹತ್ವವನ್ನು ವಿವರಿಸುವುದು.
- ವಿದ್ಯಾರ್ಥಿಗಳಿಗೆ ಸೈಬರ್ ಚಟುವಟಿಕೆಗಳನ್ನೊಳಗೊಂಡಂತೆ ಎಲ್ಲಾ ಪ್ರಕ್ರಿಯೆಗಳ ಬಗ್ಗೆ ವಿವರಿಸುವುದು.
- ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಕೇಳುವಂತೆ ಪ್ರೇರೇಪಿಸುವುದು.
- ವಿದ್ಯಾರ್ಥಿಗಳು ಸೈಬರ್ ಅಪರಾಧ ವಿಭಾಗದಲ್ಲಿ ಕೆಲಸ ಮಾಡುವ ವೃತ್ತಿಪರರು/ ಕೆಲಸಗಾರರು ಮತ್ತು ಸೈಬರ್ ಅಪರಾಧದ ವಿವಿಧ ಹಂತಗಳು/ ವರದಿ ಮಾಡುವ ವಿಧಾನಗಳ ಬಗ್ಗೆ ತಿಳಿದಿರುವವರೊಂದಿಗೆ ಸಂವಹನ ನಡೆಸುವಂತೆ ಮಾಡುವುದು.
- ವಿದ್ಯಾರ್ಥಿಗಳಿಗೆ ಸೈಬರ್ ಜಗತ್ತಿನಲ್ಲಿರುವ ಸೈಬರ್ ಅಪರಾಧಗಳು/ ಹ್ಯಾಕರ್ ಗಳ ನಡವಳಿಕೆ ಬಗ್ಗೆ ಅರ್ಥ ಮಾಡಿಸುವುದು.
- ಚಟುವಟಿಕೆಯ ಸಮಯದಲ್ಲಿ ಅವರ ಅವಲೋಕನ ಮತ್ತು ಕಲಿಕೆಯ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು.
- ವಿದ್ಯಾರ್ಥಿಗಳು ವರದಿ ತಯಾರಿಸುವಂತೆ ಪ್ರೋತ್ಸಾಹಿಸುವುದು.

**ಮೌಲ್ಯಮಾಪನ**

ಪ್ರತಿಯೊಂದು ಚಟುವಟಿಕೆಯನ್ನು ಈ ಕೆಳಗಿನ ಮಾನದಂಡಗಳ ಮೇಲೆ ಮೌಲ್ಯಮಾಪನ ಮಾಡುವುದು.

- ವೀಕ್ಷಣಾ ಕೌಶಲಗಳು
- ಪ್ರಶ್ನಿಸುವ ಕೌಶಲಗಳು
- ಗುಂಪು ಚಟುವಟಿಕೆ
- ಶಿಸ್ತು ಪಾಲನೆ

**ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು**

ವೀಕ್ಷಣೆ, ವಿಶ್ಲೇಷಣೆ, ವ್ಯಾಖ್ಯಾನ, ವರದಿಗಳನ್ನು ಬರೆಯುವ ಈ ಕೌಶಲಗಳನ್ನು ಅಭಿವೃದ್ಧಿಪಡಿಸುವುದು. ತಮ್ಮ ಆಸಕ್ತಿಗೆ ಅನುಗುಣವಾಗಿ ಭವಿಷ್ಯದಲ್ಲಿ ಈ ಕೆಳಗಿನ ವೃತ್ತಿಗಳನ್ನು ಮುಂದುವರಿಸಬಹುದು ಎಂದು ಮಕ್ಕಳಿಗೆ ವಿವರಿಸುವುದು.

- ಸೈಬರ್ ಬೆದರಿಕೆಗಳ ಜ್ಞಾನದ ವಿಶ್ಲೇಷಕ (Cyber Threat Intelligence Analyst)
- ಸೈಬರ್ ಅಪರಾಧಗಳ ವಿಶ್ಲೇಷಕ (Cyber Crime Analyst)
- ತಾಂತ್ರಿಕ ಸಹಾಯಕ (Technical Assistant)
- ವಂಚನೆ ಕಾರ್ಯಾಚರಣೆ ವಿಶ್ಲೇಷಕ (Fraud Operations Analyst)

**ಚಟುವಟಿಕೆ 12**

| **ಸಮೀಪದ ಡ್ರೋನ್ ತರಬೇತಿ ಕೇಂದ್ರಕ್ಕೆ ಭೇಟಿ ನೀಡುವುದು** | |
|---|---|
| ಚಟುವಟಿಕೆಯ ವಿಧ | ಹೊರಾಂಗಣ |
| ಬೇಕಾಗುವ ಅವಧಿ | 4 ಗಂಟೆಗಳು |
| ಅಭಿವೃದ್ಧಿಪಡಿಸ ಬೇಕಾದ ಕೌಶಲಗಳು | ತಾಂತ್ರಿಕ ಕೌಶಲಗಳು, ವೀಕ್ಷಣಾ ಕೌಶಲಗಳು, ಸಂವಹನ ಕೌಶಲಗಳು, ಇತ್ಯಾದಿ. |



**ಕಲಿಕಾ ಫಲಗಳು**

- ವಿವಿಧ ಪ್ರದೇಶಗಳಲ್ಲಿ ಡ್ರೋನ್ ಗಳ ಬಳಕೆಯನ್ನು ವಿವರಿಸುವರು.
- ಡ್ರೋನ್ ಮಾದರಿ ತಯಾರಿಕೆಯ ಪ್ರಾಯೋಗಿಕ ಅನುಭವವನ್ನು ಹೊಂದುವರು.

**ಅಗತ್ಯ ಸಾಮಗ್ರಿಗಳು**

- ನೋಟ್ ಪುಸ್ತಕ ಮತ್ತು ಪೆನ್ನು
- ಆರಾಮದಾಯಕ ಪಾದರಕ್ಷೆಗಳು

**ಶಿಕ್ಷಕರಿಗೆ ಸೂಚನೆಗಳು**

- ಕ್ಷೇತ್ರ ಭೇಟಿಯ ಭಾಗವಾಗಿ ಅಟಲ್ ಟಿಂಕರಿಂಗ್ ಲ್ಯಾಬ್ ಅಥವಾ ಕೇಂದ್ರವನ್ನು ಆಯ್ಕೆ ಮಾಡುವುದು.
- ಚಟುವಟಿಕೆಯ ಯೋಜನೆಯನ್ನು ಅಭಿವೃದ್ಧಿಪಡಿಸುವುದು.
- ಚಟುವಟಿಕೆಗಾಗಿ ಪ್ರಯೋಗಾಲಯ ಅಥವಾ ಕೇಂದ್ರವನ್ನು ಸಂಪರ್ಕಿಸುವುದು.
- ವಿದ್ಯಾರ್ಥಿಗೆ ಚಟುವಟಿಕೆಯ ಉದ್ದೇಶ ಮತ್ತು ತಯಾರಿಕೆಯ ವಿಧಾನವನ್ನು ಸಂಕ್ಷಿಪ್ತವಾಗಿ ತಿಳಿಸುವುದು.
- ಪೋಷಕರಿಗೆ ಚಟುವಟಿಕೆಯ ಉದ್ದೇಶ ಮತ್ತು ತಯಾರಿಕೆಯ ವಿಧಾನವನ್ನು ತಿಳಿಸುವುದು.
- ಚಟುವಟಿಕೆಯ ವರದಿಯನ್ನು ಪ್ರಾಂಶುಪಾಲರು/ ಮುಖ್ಯೋಪಾಧ್ಯಾಯರಿಗೆ ಸಲ್ಲಿಸುವುದು.

**ವಿದ್ಯಾರ್ಥಿಗಳಿಗೆ ಸೂಚನೆಗಳು**

- ಶಿಕ್ಷಕರು ನೀಡಿದ ಸಂಕ್ಷಿಪ್ತ ಮಾಹಿತಿ ಪ್ರಕಾರ ತಯಾರಿ ಮಾಡಿಕೊಳ್ಳಿ.
- ಶಿಕ್ಷಕರು ಮತ್ತು ಮಾರ್ಗದರ್ಶಕರ ಸೂಚನೆಗಳನ್ನು ಅನುಸರಿಸಿ.
- ಚಟುವಟಿಕೆಯ ಸಮಯದಲ್ಲಿ ಶಿಸ್ತು ಕಾಪಾಡಿ.
- ಡ್ರೋನ್ ಗಳು ಮತ್ತು ಸಂಬಂಧಿತ ತಂತ್ರಜ್ಞಾನದ ಬಗ್ಗೆ ಅಧ್ಯಯನ ಮಾಡಿ.
- ಭೇಟಿಯ ಸಂದರ್ಭದಲ್ಲಿ ಪ್ರಶ್ನಿಸುವ ಮೂಲಕ ಅಧಿಕಾರಿಗಳಿಂದ ಮಾಹಿತಿ ಪಡೆದು ದಾಖಲಿಸಿಕೊಳ್ಳಿ.

**ವಿಧಾನ**

- ವಿದ್ಯಾರ್ಥಿಗಳಿಗೆ ಚಟುವಟಿಕೆಯ ಬಗ್ಗೆ ಮುಂಚಿತವಾಗಿ ತಿಳಿಸುವುದು.
- ಡ್ರೋನ್ ಕೇಂದ್ರದ ಅಧಿಕಾರಿಗಳನ್ನು ಭೇಟಿ ಮಾಡಿ, ಭೇಟಿ ಕುರಿತು ಚರ್ಚಿಸುವುದು.
- ವಿದ್ಯಾರ್ಥಿಗಳಿಗೆ ಚಟುವಟಿಕೆಯ ಮಹತ್ವವನ್ನು ವಿವರಿಸುವುದು.
- ಗುರುತಿಸಿಕೊಂಡಿರುವ ಡ್ರೋನ್ ಕೇಂದ್ರ/ ಪ್ರಯೋಗಾಲಯಕ್ಕೆ ಭೇಟಿ ನೀಡುವುದು.
- ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಕೇಳುವಂತೆ ಪ್ರೋತ್ಸಾಹಿಸುವುದು.
- ಡ್ರೋನ್ ಗಳು ಮತ್ತು ಸಂಬಂಧಿತ ತಂತ್ರಜ್ಞಾನದ ಕುರಿತು ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು.
- ವಿದ್ಯಾರ್ಥಿಗಳು ಡ್ರೋನ್ ಗಳ ಮಾದರಿಗಳನ್ನು ಪ್ರಾಯೋಗಿಕವಾಗಿ ತಯಾರಿಸಲು ಪ್ರೋತ್ಸಾಹಿಸುವುದು.
- ಚಟುವಟಿಕೆಯ ಸಮಯದಲ್ಲಿ ವಿದ್ಯಾರ್ಥಿಗಳೊಂದಿಗೆ ವೀಕ್ಷಣೆ ಮತ್ತು ಕಲಿಕೆಯ ಬಗ್ಗೆ ಚರ್ಚಿಸುವುದು.
- ವಿದ್ಯಾರ್ಥಿಗಳು ವರದಿ ತಯಾರಿಸುವಂತೆ ಪ್ರೋತ್ಸಾಹಿಸುವುದು.

**ಮೌಲ್ಯಮಾಪನ**

ಪ್ರತಿಯೊಂದು ಚಟುವಟಿಕೆಯನ್ನು ಈ ಕೆಳಗಿನ ಮಾನದಂಡಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡುವುದು.

- ಆಸಕ್ತಿ
- ಪ್ರಶ್ನಿಸುವ ಕೌಶಲಗಳು
- ಭಾಗವಹಿಸುವಿಕೆ
- ಗುಂಪು ಚಟುವಟಿಕೆ
- ಪರಸ್ಪರ ಕೌಶಲಗಳು
- ವರದಿ ತಯಾರಿಸುವುದು

### ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು

ವೀಕ್ಷಣೆ, ವಿಶ್ಲೇಷಣೆ, ವ್ಯಾಖ್ಯಾನ, ವರದಿಗಳನ್ನು ಬರೆಯುವ ಇಂತಹ ಅಭಿವೃದ್ಧಿ ಕೌಶಲಗಳು ವಿದ್ಯಾರ್ಥಿಗಳು ಭವಿಷ್ಯದಲ್ಲಿ ತಮ್ಮ ಆಸಕ್ತಿಗೆ ಅನುಗುಣವಾಗಿ ಈ ಕೆಳಗಿನ ವೃತ್ತಿಗಳನ್ನು ಆಯ್ಕೆಮಾಡಿಕೊಳ್ಳುವಂತೆ ಮಾರ್ಗದರ್ಶನ ನೀಡುವುದು.

- ಡ್ರೋನ್ ನಿರ್ವಾಹಕರು (Drone operator)
- ಡ್ರೋನ್ ತಂತ್ರಜ್ಞರು (Drone Technician)
- ಕಿಸಾನ್ ಡ್ರೋನ್ ನಿರ್ವಾಹಕರು (Kisan Drone Operator)
- ಡ್ರೋನ್ ಛಾಯಾಗ್ರಾಹಕರು (Drone Photographer)

### ಚಟುವಟಿಕೆ 13

| ಸ್ಥಳೀಯ ಕಸ ಸಂಗ್ರಹಣೆ ಸ್ಥಳಕ್ಕೆ ಭೇಟಿ ನೀಡುವುದು | |
|---|---|
| ಚಟುವಟಿಕೆಯ ವಿಧ | ಹೊರಾಂಗಣ |
| ಬೇಕಾಗುವ ಅವಧಿ | 4 ಗಂಟೆಗಳು |
| ಅಭಿವೃದ್ಧಿಪಡಿಸ ಬೇಕಾದ ಕೌಶಲಗಳು | ವೀಕ್ಷಣಾ ಕೌಶಲಗಳು, ಪರಿಸರ ಜಾಗೃತಿ, ಮಾಡಿ ಕಲಿ, ಕೌಶಲಗಳು, ಸಂವಹನ ಕೌಶಲಗಳು, ಇತ್ಯಾದಿ. |



### ಕಲಿಕಾ ಫಲಗಳು

- ವಿವಿಧ ರೀತಿಯ ತ್ಯಾಜ್ಯ ವಸ್ತುಗಳನ್ನು ಗುರುತಿಸುವರು.
- ಮರುಬಳಕೆಗಾಗಿ ತ್ಯಾಜ್ಯ ವಿಂಗಡಣೆಯ ಪ್ರಯೋಜನಗಳನ್ನು ಚರ್ಚಿಸುವರು.
- ತ್ಯಾಜ್ಯವನ್ನು ಪ್ರತ್ಯೇಕಿಸುವುದು, ಮರುಸಂಸ್ಕರಣೆ ಮತ್ತು ಪುನರ್ಬಳಕೆ ಮಾಡುವ ಪ್ರಕ್ರಿಯೆಯ ಬಗ್ಗೆ ತಿಳಿಯುವರು.
- ಮಿತ ಬಳಕೆ, ಮರುಬಳಕೆ ಮತ್ತು ಮರುಸಂಸ್ಕರಣೆಯನ್ನು ಪ್ರಾಯೋಗಿಕವಾಗಿ ಅನುಸರಿಸುವರು, (3 R's- Reduce, Reuse and Recycle)
- ಪರಿಸರ ಸುಸ್ಥಿರತೆಗಾಗಿ ತ್ಯಾಜ್ಯ ನಿರ್ವಹಣೆಯ ಕೊಡುಗೆಯನ್ನು ಅರ್ಥ ಮಾಡಿಕೊಳ್ಳುವರು.

### ಅಗತ್ಯ ಸಾಮಗ್ರಿಗಳು

- ನೋಟ್ ಪುಸ್ತಕ ಮತ್ತು ಪೆನ್ನು
- ಆರಾಮದಾಯಕ ಪಾದರಕ್ಷೆಗಳು
- ಸುರಕ್ಷತಾ ಮುಖವಾಡ ಮತ್ತು ಕೈಗವಸುಗಳು
- ಪ್ರಾಯೋಗಿಕ ಚಟುವಟಿಕೆಗಾಗಿ ಸಾಮಾಗ್ರಿಗಳು (ಅಗತ್ಯವಿದ್ದರೆ)

### ಶಿಕ್ಷಕರಿಗೆ ಸೂಚನೆಗಳು

- ಭೇಟಿ ನೀಡಬೇಕಾದ ಕೇಂದ್ರವನ್ನು ಆಯ್ಕೆ ಮಾಡುವುದು.
- ಚಟುವಟಿಕೆ ನಿರ್ವಹಣೆಗೆ ಕೇಂದ್ರವನ್ನು ಸಂಪರ್ಕಿಸುವುದು ಮತ್ತು ಯೋಜನೆಯನ್ನು ಅಭಿವೃದ್ಧಿಪಡಿಸುವುದು.
- ಚಟುವಟಿಕೆಗೆ ಅಗತ್ಯ ತಯಾರಿಯ ವಿಧಾನ ಮತ್ತು ಉದ್ದೇಶವನ್ನು ಪೋಷಕರು ಮತ್ತು ಪಾಲಕರಿಗೆ ತಿಳಿಸುವುದು.
- ಚಟುವಟಿಕೆಗೆ ಅಗತ್ಯ ತಯಾರಿಯ ವಿಧಾನ ಮತ್ತು ಉದ್ದೇಶವನ್ನು ವಿದ್ಯಾರ್ಥಿಗೆ ಸಂಕ್ಷಿಪ್ತವಾಗಿ ತಿಳಿಸುವುದು.
- ಚಟುವಟಿಕೆಯ ವರದಿಯನ್ನು ಪ್ರಾಂಶುಪಾಲರು/ ಮುಖ್ಯೋಪಾಧ್ಯಾಯರಿಗೆ ಸಲ್ಲಿಸುವುದು.

**ವಿದ್ಯಾರ್ಥಿಗಳಿಗೆ ಸೂಚನೆಗಳು**

- ಶಿಕ್ಷಕರು ನೀಡಿದ ಸಂಕ್ಷಿಪ್ತ ಮಾಹಿತಿ ಪ್ರಕಾರ ತಯಾರಿ ಮಾಡಿಕೊಳ್ಳಿ.
- ಶಿಕ್ಷಕರು ಮತ್ತು ಮಾರ್ಗದರ್ಶಕರ ಸೂಚನೆಗಳನ್ನು ಅನುಸರಿಸಿ.
- ಚಟುವಟಿಕೆಯ ಸಂದರ್ಭದಲ್ಲಿ ಶಿಸ್ತು ಕಾಪಾಡಿ.
- ತ್ಯಾಜ್ಯ ವಿಂಗಡಣೆ ಮತ್ತು ಅದರ ಪ್ರಯೋಜನಗಳ ಪರಿಕಲ್ಪನೆ ಬಗ್ಗೆ ತಿಳಿದುಕೊಳ್ಳಿ.
- ಭೇಟಿಯ ಸಮಯದಲ್ಲಿ ಅಧಿಕಾರಿಗಳನ್ನು ಪ್ರಶ್ನೆ ಕೇಳುವುದರ ಮೂಲಕ ಮಾಹಿತಿಯನ್ನು ದಾಖಲಿಸಿ.

**ವಿಧಾನ**




- ವಿದ್ಯಾರ್ಥಿಗಳಿಗೆ ಚಟುವಟಿಕೆಯ ಬಗ್ಗೆ ಮುಂಚಿತವಾಗಿ ತಿಳಿಸುವುದು.
- ಭೇಟಿಯ ಕೇಂದ್ರವನ್ನು ಸಂಪರ್ಕಿಸುವುದು ಮತ್ತು ಭೇಟಿಯ ಬಗ್ಗೆ ಚರ್ಚಿಸುವುದು.
- ತ್ಯಾಜ್ಯ ನಿರ್ವಹಣೆಯ ಮೂಲಭೂತ ಅಂಶಗಳು ಮತ್ತು ಸರಿಯಾದ ತ್ಯಾಜ್ಯದ ಮಹತ್ವದ ಬಗ್ಗೆ ವಿವರಿಸುವುದು.
- ವಿದ್ಯಾರ್ಥಿಗಳಿಗೆ ತ್ಯಾಜ್ಯ ವಿಂಗಡಣೆಯ ಮಹತ್ವವನ್ನು ವಿವರಿಸುವುದು.
- ಆಯ್ಕೆ ಮಾಡಿಕೊಂಡ ತ್ಯಾಜ್ಯ ಸಂಗ್ರಹಣೆ ಮತ್ತು ಸಂಸ್ಕರಣಾ ಕೇಂದ್ರಕ್ಕೆ ಭೇಟಿ ನೀಡುವುದು.
- ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಕೇಳುವಂತೆ ಪ್ರೋತ್ಸಾಹಿಸುವುದು.
- ವಿದ್ಯಾರ್ಥಿಗಳು ತ್ಯಾಜ್ಯ ವಿಂಗಡಣೆ ಮಾಡುವ ಪ್ರದೇಶಕ್ಕೆ ಭೇಟಿ ನೀಡುವ ಮೂಲಕ ತ್ಯಾಜ್ಯವನ್ನು ಪ್ರತ್ಯೇಕಗೊಳಿಸುವ ಕಾರ್ಯವಿಧಾನ ಮತ್ತು ಕಾರ್ಯ ವೈಖರಿಯ ಬಗ್ಗೆ ಚರ್ಚಿಸುವುದು.
- ವಿದ್ಯಾರ್ಥಿಗಳು ತಾವು ಸಂಗ್ರಹಿಸಿದ ತ್ಯಾಜ್ಯವನ್ನು, ಮರುಬಳಕೆ ಮಾಡಲಾಗುವ, ಮರುಬಳಕೆ ಮಾಡಲಾಗದ ಮತ್ತು ಗೊಬ್ಬರವಾಗಬಹುದಾದ ತ್ಯಾಜ್ಯ, ಹೀಗೆ ಮೂರು ಬಗೆಯಲ್ಲಿ ಪ್ರತ್ಯೇಕಿಸುವಂತೆ ಪ್ರೋತ್ಸಾಹಿಸುವುದು.
- ವಿದ್ಯಾರ್ಥಿಗಳು ತ್ಯಾಜ್ಯ ನಿರ್ವಹಣೆಯ ಪ್ರಾಮುಖ್ಯತೆ ಮತ್ತು ಸಮುದಾಯದಲ್ಲಿ ಸುಸ್ಥಿರ ಅಭ್ಯಾಸಗಳನ್ನು ಉತ್ತೇಜಿಸುವಲ್ಲಿ ಅವರ ಪಾತ್ರದ ಕುರಿತು ಭಿತ್ತಿಪತ್ರಗಳು ಅಥವಾ ಪ್ರಸ್ತುತಿಗಳನ್ನು ರಚಿಸುವ ಯೋಜನೆಯನ್ನು ನಿಯೋಜಿಸುವುದು.
- ಚಟುವಟಿಕೆಯ ಸಮಯದಲ್ಲಿ ಅವರ ಅವಲೋಕನ ಮತ್ತು ಕಲಿಕೆಯ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು.
- ವಿದ್ಯಾರ್ಥಿಗಳು ವರದಿ ತಯಾರಿಸುವಂತೆ ಪ್ರೋತ್ಸಾಹಿಸುವುದು.

**ಮೌಲ್ಯಮಾಪನ**

ಪ್ರತಿಯೊಂದು ಚಟುವಟಿಕೆಯನ್ನು ಈ ಕೆಳಗಿನ ಮಾನದಂಡಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡುವುದು.

- ಕುತೂಹಲ
- ಪ್ರಶ್ನಿಸುವ ಕೌಶಲಗಳು
- ಭಾಗವಹಿಸುವಿಕೆ
- ಗುಂಪು ಚಟುವಟಿಕೆ
- ಪರಸ್ಪರ ಹೊಂದಾಣಿಕೆಯ ಕೌಶಲಗಳು
- ವರದಿ ತಯಾರಿಸುವುದು

**ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು**

ವೀಕ್ಷಣೆ, ವಿಶ್ಲೇಷಣೆ, ವ್ಯಾಖ್ಯಾನ, ವರದಿಗಳನ್ನು ಬರೆಯುವ ಇಂತಹ ಅಭಿವೃದ್ಧಿ ಕೌಶಲಗಳು ವಿದ್ಯಾರ್ಥಿಗಳು ಭವಿಷ್ಯದಲ್ಲಿ ತಮ್ಮ ಆಸಕ್ತಿಗೆ ಅನುಗುಣವಾಗಿ ಈ ಕೆಳಗಿನ ವೃತ್ತಿಗಳನ್ನು ಆಯ್ಕೆಮಾಡಿಕೊಳ್ಳುವಂತೆ ಮಾರ್ಗದರ್ಶನ ನೀಡುವುದು.

- ತ್ಯಾಜ್ಯ ನಿರ್ವಹಣಾ ತಜ್ಞರು
- ಪರಿಸರ ಅಭಿಯಂತರರು
- ಮರುಬಳಕೆ ಸಂಯೋಜಕರು

# ಭಾಗ-ಬಿ
# ಸಾರ್ವಜನಿಕ ಕಛೇರಿಗಳು, ಸ್ಥಳೀಯ ಕೈಗಾರಿಕೆಗಳು ಮತ್ತು ವ್ಯವಹಾರಗಳು

**ಚಟುವಟಿಕೆ: 14**

| ಒಂದು ಹಳ್ಳಿಗೆ ಭೇಟಿ | |
|---|---|
| ಚಟುವಟಿಕೆಯ ವಿಧ | ಹೊರಾಂಗಣ |
| ಬೇಕಾಗುವ ಅವಧಿ | 4 ಗಂಟೆಗಳು |
| ಅಭಿವೃದ್ಧಿಪಡಿಸ ಬೇಕಾದ ಕೌಶಲಗಳು | ಸಮುದಾಯದ ಅರಿವು, ಸಾಮಾಜಿಕ ಕೌಶಲಗಳು, ವೀಕ್ಷಣಾ ಕೌಶಲಗಳು, ಸಂವಹನ ಕೌಶಲಗಳು, ಸಂಸ್ಕೃತಿಯಾತೀತ ಕೌಶಲಗಳು ಇತ್ಯಾದಿ. |



**ಕಲಿಕಾ ಫಲಗಳು**

- ಹಳ್ಳಿಯ ಜೀವನ ಸನ್ನಿವೇಶದ ಬಗ್ಗೆ ಜಾಗೃತಿ ಮೂಡಿಸುವುದು.
- ವಿವಿಧ ರೀತಿಯ ಮನೆಗಳು, ರಸ್ತೆಗಳು, ವ್ಯವಸಾಯ ಪ್ರದೇಶಗಳು ಇತ್ಯಾದಿಗಳನ್ನು ಗುರುತಿಸುವುದು ಮತ್ತು ಚರ್ಚಿಸುವುದು.
- ಜಮೀನಿನಲ್ಲಿ ಬೆಳೆಯುವ ವಿವಿಧ ತರಕಾರಿಗಳು, ಬೆಳೆಗಳು ಮತ್ತು ಹಣ್ಣುಗಳನ್ನು ವಿವರಿಸುವುದು.
- ಹಳ್ಳಿಗಳಲ್ಲಿ ವಿವಿಧ ರೀತಿಯ ಉಡುಗೆ ಶೈಲಿಗಳನ್ನು ಗುರುತಿಸುವುದು.

**ಅವಶ್ಯಕ ಸಾಮಾಗ್ರಿಗಳು**

- ನೋಟ್ ಬುಕ್ ಮತ್ತು ಪೆನ್ನು
- ಟೋಪಿ (CAP)
- ಆರಾಮದಾಯಕ ಪಾದರಕ್ಷೆಗಳು

**ಶಿಕ್ಷಕರಿಗೆ ಸೂಚನೆಗಳು:**

- ಭೇಟಿ ನೀಡಬೇಕಾದ ಗ್ರಾಮವನ್ನು ಆಯ್ಕೆ ಮಾಡುವುದು.
- ಚಟುವಟಿಕೆಯ ಯೋಜನೆಯನ್ನು ಅಭಿವೃದ್ಧಿಪಡಿಸುವುದು.
- ಗ್ರಾಮದ ಪಂಚಾಯಿತಿ ಕಛೇರಿ /ಶಾಲಾ ಶಿಕ್ಷಕರನ್ನು ಸಂಪರ್ಕಿಸಿ ಮತ್ತು ಭೇಟಿಯನ್ನು ನಿಗದಿಪಡಿಸುವುದು.
- ಭೇಟಿಯ ಉದ್ದೇಶದ ಬಗ್ಗೆ ವಿದ್ಯಾರ್ಥಿಗಳಿಗೆ ಸಂಕ್ಷಿಪ್ತವಾಗಿ ತಿಳಿಸುವುದು.
- ಚಟುವಟಿಕೆಯ ಉದ್ದೇಶ ಮತ್ತು ತಯಾರಿಕೆಯ ವಿಧಾನವನ್ನು ಪೋಷಕರಿಗೆ ತಿಳಿಸುವುದು.
- ಅನುದಾನ ಕಚ್ಚಾಸಾಮಗ್ರಿಗಳು ಸಾರಿಗೆ ಸಂಪರ್ಕ ಇತ್ಯಾದಿಗಳನ್ನು ಚಟುವಟಿಕೆ ಅಗತ್ಯ ವ್ಯವಸ್ಥೆಗಳನ್ನು ಮಾಡುವುದು.
- ಚಟುವಟಿಕೆಯ ವರದಿಯನ್ನು ಪ್ರಾಂಶುಪಾಲರು ಮುಖ್ಯೋಪಾಧ್ಯಾಯರಿಗೆ ಸಲ್ಲಿಸುವುದು.

**ವಿದ್ಯಾರ್ಥಿಗಳಿಗೆ ಸೂಚನೆ**

- ಶಿಕ್ಷಕರ ,ಮಾರ್ಗದರ್ಶಕರ ಅಥವಾ ಬೋಧಕರ ಸೂಚನೆಗಳನ್ನು ಅನುಸರಿಸಿ.
- ಚಟುವಟಿಕೆಯ ಸಂದರ್ಭದಲ್ಲಿ ಶಿಸ್ತು ಕಾಪಾಡಿ.
- ಹಳ್ಳಿಯ ಜನರನ್ನು ನಗುಮುಖದಿಂದ ಸ್ವಾಗತಿಸಿ.
- ಭೇಟಿಯ ಸಮಯದಲ್ಲಿ ಸ್ಥಳೀಯ ಶಿಕ್ಷಕರಿಗೆ ಹಾಗೂ ಹಳ್ಳಿಯ ಜನರಿಗೆ ಪ್ರಶ್ನೆಗಳನ್ನು ಕೇಳಿ ಮಾಹಿತಿಯನ್ನು ಸಂಗ್ರಹಿಸಿ.
- ಭೇಟಿಯ ಸಮಯದಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಅವಲೋಕಿಸಿ.

**ವಿಧಾನ**

- ಚಟುವಟಿಕೆಯ ಬಗ್ಗೆ ವಿದ್ಯಾರ್ಥಿಗಳಿಗೆ ಮುಂಚಿತವಾಗಿ ತಿಳಿಸುವುದು.
- ಚಟುವಟಿಕೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ವಿವರಿಸುವುದು.
- ನಿಗದಿತ ಗ್ರಾಮಕ್ಕೆ ಭೇಟಿ ನೀಡುವುದು.
- ಗ್ರಾಮದಲ್ಲಿ ನಿರ್ಮಿಸಲಾದ ಮನೆಗಳ ವಿಧಗಳನ್ನು ಗಮನಿಸಿ ಅಂತಹ ಮನೆಗಳ ನಿರ್ಮಾಣಕ್ಕೆ ಬಳಸಿರುವ ವಸ್ತುಗಳನ್ನು ಸಹ ಗಮನಿಸುವುದು.
- ಗ್ರಾಮದ ಯಾವುದಾದರೂ ಕೃಷಿ ಜಮೀನು ಹಾಗೂ ರೈತರನ್ನು ಭೇಟಿ ಮಾಡುವುದು.
- ರೈತರೊಂದಿಗೆ ಸಂವಾದ ನಡೆಸಿ ಈ ಕೆಳಗಿನಪ್ರಶ್ನೆಗಳನ್ನು ಕೇಳುವುದು.
    1. ನಿಮ್ಮ ಜಮೀನಿನಲ್ಲಿ ನೀವು ಯಾವ ಬೆಳೆಗಳನ್ನು ಬೆಳೆಯುವಿರಿ?
    2. ಯಾವ ಬೆಳೆಗಳನ್ನು ಭಿತ್ತನೆ ಮಾಡಬೇಕೆಂದು ನೀವು ಹೇಗೆ ನಿರ್ಧರಿಸುವಿರಿ?
    3. ಕೃಷಿಗಾಗಿ ನೀವು ಯಾವ ಉಪಕರಣಗಳನ್ನು ಹಾಗೂ ಯಂತ್ರಗಳನ್ನು ಬಳಸುವಿರಿ?
    4. ಕೃಷಿಯ ಅತ್ಯಂತ ಸವಾಲಿನ ಭಾಗ ಯಾವುದು?
    5. ನಿಮ್ಮ ಬೆಳೆಗಳನ್ನು ಕೀಟಗಳು ಹಾಗೂ ರೋಗಗಳಿಂದ ಹೇಗೆ ರಕ್ಷಿಸುವಿರಿ?
    6. ನಿಮ್ಮ ಬೆಳೆಗಳನ್ನು ನೀವು ಎಲ್ಲಿ ಮಾರುವಿರಿ?
    7. ನಿಮ್ಮ ಜಮೀನಿಗೆ ನೀರನ್ನು ಹೇಗೆ ಪಡೆಯುವಿರಿ?
    8. ವಿವಿಧ ಋತುಮಾನಗಳಲ್ಲಿ ನೀವು ಏನು ಮಾಡುವಿರಿ?
    9. ನಿಮ್ಮನ್ನು ಒಬ್ಬ ರೈತನಾಗಿ ಪಂಚಾಯಿತಿ ಹೇಗೆ ಬೆಂಬಲಿಸುತ್ತದೆ?
- ಚಟುವಟಿಕೆಯ ಸಮಯದಲ್ಲಿ ವಿದ್ಯಾರ್ಥಿಗಳೊಂದಿಗೆ ಅವರ ಅವಲೋಕನಗಳು ಮತ್ತು ಕಲಿಕೆಗಳ ಬಗ್ಗೆ ಚರ್ಚಿಸುವುದು.
- ವರದಿಯನ್ನು ತಯಾರಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.

**ಮೌಲ್ಯಮಾಪನ**

ಪ್ರತಿಯೊಂದು ಚಟುವಟಿಕೆಯನ್ನು ಈ ಕೆಳಗಿನ ಮಾನದಂಡಗಳ ಮೇಲೆ ಮೌಲ್ಯಮಾಪನ ಮಾಡಬೇಕಾಗುತ್ತದೆ.

- ಆಸಕ್ತಿ
- ಭಾಗವಹಿಸುವಿಕೆ
- ಗುಂಪು ಕಾರ್ಯ
- ಪರಸ್ಪರ ಹೊಂದಾಣಿಕೆ ಕೌಶಲಗಳು
- ವರದಿ ತಯಾರಿಕೆ
- ಕೌಶಲಗಳನ್ನು ಪ್ರಶ್ನಿಸುವುದು

**ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು**

ವೀಕ್ಷಣೆ, ವಿಶ್ಲೇಷಣೆ, ವ್ಯಾಖ್ಯಾನ, ವರದಿಗಳನ್ನು ಬರೆಯುವ ಕೌಶಲಗಳನ್ನು ಅಭಿವೃದ್ಧಿ ಪಡಿಸುವ ಮೂಲಕ ಮಕ್ಕಳು ತಮ್ಮ ಆಸಕ್ತಿಗೆ ಅನುಗುಣವಾಗಿ ಭವಿಷ್ಯದಲ್ಲಿ ಈ ಕೆಳಗಿನ ವೃತ್ತಿಗಳನ್ನು ಅನುಸರಿಸಬಹುದು ಎಂದು ಅವರಿಗೆ ವಿವರಿಸಬಹುದು.

- ಪ್ರಗತಿಪರ ರೈತ
- ಕೃಷಿ ಸಲಹೆಗಾರ
- ಕೃಷಿ ವಿಜ್ಞಾನಿ
- ಕೃಷಿ ಮಾರಾಟ ಪ್ರತಿನಿಧಿ
- ವ್ಯಾಪಾರಿ
- ಕೃಷಿ ಸಂಶೋಧಕ

**ಚಟುವಟಿಕೆ: 15**

| ಪಂಚಾಯಿತಿ ಕಛೇರಿಗೆ ಭೇಟಿ | |
|---|---|
| ಚಟುವಟಿಕೆಯ ವಿಧ | ಹೊರಾಂಗಣ |
| ಬೇಕಾಗುವ ಅವಧಿ | 4 ಗಂಟೆಗಳು |
| ಅಭಿವೃದ್ಧಿಪಡಿಸ ಬೇಕಾದ ಕೌಶಲಗಳು | ಸಮುದಾಯ ಜಾಗೃತಿ, ಸಾಮಾಜಿಕ ಕೌಶಲಗಳು, ವೀಕ್ಷಣಾ ಕೌಶಲಗಳು, ಸಂವಹನ ಕೌಶಲಗಳು ಇತ್ಯಾದಿ. |



**ಕಲಿಕಾ ಫಲಗಳು**

- ಹಳ್ಳಿಯಲ್ಲಿ ಪಂಚಾಯಿತಿಯ ಪಾತ್ರವನ್ನು ತಿಳಿಯುವುದು ಹಾಗೂ ವಿವರಿಸುವುದು.
- ಪಂಚಾಯಿತಿ ಕಛೇರಿಯಲ್ಲಿ ವಿವಿಧ ಅಧಿಕಾರಿಗಳನ್ನು ಮತ್ತು ಅವರ ಜವಾಬ್ದಾರಿಗಳನ್ನು ಗುರುತಿಸುವುದು ಮತ್ತು ತಿಳಿಯುವುದು.

**ಅಗತ್ಯ ಸಾಮಾಗ್ರಿಗಳು**

- ನೋಟ್ ಬುಕ್ ಮತ್ತು ಪೆನ್ನು
- ಆರಾಮದಾಯಕ ಪಾದರಕ್ಷೆಗಳು

**ಶಿಕ್ಷಕರಿಗೆ ಸೂಚನೆಗಳು**

- ಚಟುವಟಿಕೆಯ ಯೋಜನೆಯನ್ನು ಅಭಿವೃದ್ಧಿಪಡಿಸುವುದು.
- ಭೇಟಿ ನೀಡಬೇಕಾದ ಪಂಚಾಯಿತಿ ಕಛೇರಿಯನ್ನು ಆಯ್ಕೆ ಮಾಡುವುದು .
- ಗ್ರಾಮದ ಪಂಚಾಯಿತಿ ಕಛೇರಿಯನ್ನು ಸಂಪರ್ಕಿಸಿ ಮತ್ತು ಭೇಟಿಯನ್ನು ನಿಗದಿಪಡಿಸುವುದು.
- ಭೇಟಿಯ ಉದ್ದೇಶದ ಬಗ್ಗೆ ವಿದ್ಯಾರ್ಥಿಗಳಿಗೆ ಸಂಕ್ಷಿಪ್ತವಾಗಿ ತಿಳಿಸುವುದು.
- ಅಗತ್ಯವಿರುವ ಅನುದಾನ ಕಚ್ಚಾ ಸಾಮಗ್ರಿ ಸಾರಿಗೆ ಸಂಪರ್ಕ ಇತ್ಯಾದಿಗಳನ್ನು ವ್ಯವಸ್ಥೆ ಮಾಡುವುದು.
- ಚಟುವಟಿಕೆಯ ವರದಿಯನ್ನು ಪ್ರಾಂಶುಪಾಲರು/ ಮುಖ್ಯೋಪಾಧ್ಯಾಯರಿಗೆ ಸಲ್ಲಿಸುವುದು.

**ವಿದ್ಯಾರ್ಥಿಗಳಿಗೆ ಸೂಚನೆಗಳು:**

- ಶಿಕ್ಷಕ ಮಾರ್ಗದರ್ಶಿ ಅಥವಾ ಬೋಧಕರ ಸೂಚನೆಗಳನ್ನು ಅನುಸರಿಸಿ.
- ಪಂಚಾಯಿತಿ ಕಛೇರಿಯಲ್ಲಿ ಮೌನ ಮತ್ತು ಶಿಸ್ತನ್ನು ಕಾಪಾಡಿಕೊಳ್ಳಿ.
- ಭೇಟಿಯ ಸಮಯದಲ್ಲಿ ಅಧಿಕಾರಿಗಳಿಗೆ ಪ್ರಶ್ನೆಗಳನ್ನು ಕೇಳಿ ಅವರಿಂದ ಮಾಹಿತಿಯನ್ನು ಸಂಗ್ರಹಿಸಿ.
- ಭೇಟಿಯ ಸಮಯದಲ್ಲಿ ಸಂಗ್ರಹಿಸಿದ ಅವಲೋಕನಗಳನ್ನು ಮತ್ತು ಮಾಹಿತಿಯನ್ನು ಗಮನಿಸಿ.

**ವಿಧಾನ:**

- ಚಟುವಟಿಕೆಯ ಬಗ್ಗೆ ವಿದ್ಯಾರ್ಥಿಗಳಿಗೆ ಮುಂಚಿತವಾಗಿ ತಿಳಿಸುವುದು.
- ವಿದ್ಯಾರ್ಥಿಗಳಿಗೆ ಚಟುವಟಿಕೆಯ ಮಹತ್ವವನ್ನು ವಿವರಿಸುವುದು.
- ಗ್ರಾಮದಲ್ಲಿ ನಿಗದಿತ ಪಂಚಾಯಿತಿ ಕಛೇರಿಗೆ ಭೇಟಿ ನೀಡುವುದು
- ಪಂಚಾಯಿತಿ ಕಛೇರಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಭೇಟಿ ಮಾಡುವುದು.
- ಪ್ರಶ್ನೆ ಕೇಳಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.
- ಅಧಿಕಾರಿಗಳೊಂದಿಗೆ ಸಂವಹನ ನಡೆಸಿ ಮತ್ತು ಪಂಚಾಯಿತಿ ವ್ಯವಸ್ಥೆಯ ಪಾತ್ರಗಳು ಮತ್ತು ಕರ್ತವ್ಯಗಳ ಬಗ್ಗೆ ಅರ್ಥ ಮಾಡಿಕೊಳ್ಳುವುದು.
- ಪಂಚಾಯಿತಿ ಸದಸ್ಯರಾಗಲು ಬೇಕಾದ ಕ್ರಮಗಳ ಬಗ್ಗೆ ವಿಚಾರಿಸುವುದು.

- ಪಂಚಾಯಿತಿಯ ಕಾರ್ಯ ಚಟುವಟಿಕೆಗಳ ಬಗ್ಗೆ ಟಿಪ್ಪಣಿಗಳನ್ನು ತೆಗೆದುಕೊಂಡು ವರದಿಯನ್ನು ತಯಾರಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.

**ಮೌಲ್ಯಮಾಪನ:**

ಪ್ರತಿಯೊಂದು ಚಟುವಟಿಕೆಯನ್ನು ಈ ಕೆಳಗಿನ ಮಾನದಂಡಗಳ ಮೇಲೆ ಮೌಲ್ಯಮಾಪನ ಮಾಡಬೇಕಾಗುತ್ತದೆ.

- ಆಸಕ್ತಿ
- ಭಾಗವಹಿಸುವಿಕೆ
- ಗುಂಪು ಕಾರ್ಯ
- ಪರಸ್ಪರ ಕೌಶಲಗಳು
- ವರದಿ ತಯಾರಿಕೆ
- ಪ್ರಶ್ನಿಸುವ ಕೌಶಲಗಳು

**ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು**

ವೀಕ್ಷಣೆ, ವಿಶ್ಲೇಷಣೆ, ವ್ಯಾಖ್ಯಾನ, ವರದಿಗಳನ್ನು ಬರೆಯುವ ಕೌಶಲಗಳನ್ನು ಅಭಿವೃದ್ಧಿ ಪಡಿಸುವ ಮೂಲಕ ವಿದ್ಯಾರ್ಥಿಗಳು ತಮ್ಮ ಆಸಕ್ತಿಗೆ ಅನುಗುಣವಾಗಿ ಭವಿಷ್ಯದಲ್ಲಿ ಈ ಕೆಳಗಿನ ವೃತ್ತಿಗಳನ್ನು ಅನುಸರಿಸಬಹುದು ಎಂದು ಅವರಿಗೆ ವಿವರಿಸಬಹುದು.

- ಗ್ರಾಮಾಭಿವೃದ್ಧಿ ಅಧಿಕಾರಿ
- ಬ್ಲಾಕ್ ಅಭಿವೃದ್ಧಿ ಅಧಿಕಾರಿ
- ಸಮಾಜ ಸೇವಕ
- NGO ಕಾರ್ಯಕರ್ತ
- ಪಂಚಾಯಿತಿ ಸದಸ್ಯ
- ಪಂಚಾಯಿತಿ ಕಾರ್ಯನಿರ್ವಾಹಕ
- ಸಂಶೋಧಕ

**ಚಟುವಟಿಕೆ: 16**

| ಆಸ್ಪತ್ರೆಗೆ ಭೇಟಿ | |
|---|---|
| ಚಟುವಟಿಕೆಯ ವಿಧ | ಹೊರಾಂಗಣ |
| ಬೇಕಾಗುವ ಅವಧಿ | 4 ಗಂಟೆಗಳು |
| ಅಭಿವೃದ್ಧಿಪಡಿಸ ಬೇಕಾದ ಕೌಶಲಗಳು | ಸಹಾನುಭೂತಿ, ವೀಕ್ಷಣಾ ಕೌಶಲಗಳು, ಸಂವಹನ ಕೌಶಲಗಳು ನೈರ್ಮಲ್ಯ ಅಭ್ಯಾಸಗಳು ಇತ್ಯಾದಿ |



**ಕಲಿಕಾ ಫಲಗಳು**

- ಆರೋಗ್ಯ ಸೇವೆಗಳ ಪ್ರಾಮುಖ್ಯತೆಯನ್ನು ಅರ್ಥ ಮಾಡಿಕೊಳ್ಳುವುದು.
- ಆರೋಗ್ಯತಜ್ಞರ ಪಾತ್ರ ಮತ್ತು ಜವಾಬ್ದಾರಿಗಳನ್ನು ಗುರುತಿಸುವುದು ಮತ್ತು ಅರ್ಥ ಮಾಡಿಕೊಳ್ಳುವುದು.
- ಆಸ್ಪತ್ರೆಯ ವಿವಿಧ ವಿಭಾಗಗಳನ್ನು ತಿಳಿಯುವುದು ಮತ್ತು ವಿವರಿಸುವುದು.

**ಅಗತ್ಯ ಸಾಮಾಗ್ರಿಗಳು**

- ನೋಟ್ ಬುಕ್ ಮತ್ತು ಪೆನ್ನು
- ಸರ್ಜಿಕಲ್ ಮಾಸ್ಕ್

**ಶಿಕ್ಷಕರಿಗೆ ಸೂಚನೆಗಳು:**

- ಚಟುವಟಿಕೆಯ ಯೋಜನೆಯನ್ನು ಅಭಿವೃದ್ಧಿಪಡಿಸುವುದು.
- ಭೇಟಿ ನೀಡಲು ಆಸ್ಪತ್ರೆ ಅಥವಾ ಔಷಧಾಲಯ ಅಥವಾ ಆರೋಗ್ಯ ಕೇಂದ್ರವನ್ನು ಆಯ್ಕೆ ಮಾಡುವುದು.
- ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಿ ಮತ್ತು ಭೇಟಿಯನ್ನು ನಿಗದಿಪಡಿಸುವುದು.
- ವಿದ್ಯಾರ್ಥಿಗಳಿಗೆ ಭೇಟಿಯ ಉದ್ದೇಶದ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸುವುದು.
- ಅಗತ್ಯವಿದ್ದಲ್ಲಿ ಸಾರಿಗೆ ಮತ್ತು ಊಟದ ವ್ಯವಸ್ಥೆಯನ್ನು ಮಾಡುವುದು.
- ದಿನದ ವೇಳಾಪಟ್ಟಿಯನ್ನು ತಯಾರಿಸಿ ಅದನ್ನು ಪೋಷಕರಿಗೆ ತಿಳಿಸುವುದು.
- ಭೇಟಿ ನೀಡಲು ಆರೋಗ್ಯ ಇಲಾಖೆಗಳ ಪಟ್ಟಿಯನ್ನು ತಯಾರಿಸುವುದು.
- ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳನ್ನು ಕುರಿತು ಇನ್ನಷ್ಟು ತಿಳಿದುಕೊಳ್ಳಲು ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಿಸುವುದು.
- ಆಸ್ಪತ್ರೆಯ ಶಿಷ್ಟಾಚಾರ ಮತ್ತು ಸುರಕ್ಷತಾ ನಿಯಮಗಳನ್ನು ಚರ್ಚಿಸುವುದು.
- ಆಸ್ಪತ್ರೆಯ ವಿವಿಧ ವಿಭಾಗಗಳ ಮೂಲಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವುದು.
- ಆರೋಗ್ಯ ತಜ್ಞರೊಂದಿಗೆ ಸಂವಹನಕ್ಕೆ ಅನುಕೂಲ ಮಾಡಿಕೊಡುವುದು.
- ಚಟುವಟಿಕೆಯ ವರದಿಯನ್ನು ಪ್ರಾಂಶುಪಾಲರು/ ಮುಖ್ಯೋಪಾಧ್ಯಾಯರಿಗೆ ಸಲ್ಲಿಸುವುದು.

**ವಿದ್ಯಾರ್ಥಿಗಳಿಗೆ ಸೂಚನೆಗಳು**

- ಶಿಕ್ಷಕ, ಮಾರ್ಗದರ್ಶಿ ಅಥವಾ ಬೋಧಕರ ಸೂಚನೆಗಳನ್ನು ಅನುಸರಿಸಿ.
- ಆಸ್ಪತ್ರೆ ಅಥವಾ ಔಷಧಾಲಯ ಅಥವಾ ಆರೋಗ್ಯ ಕೇಂದ್ರದಲ್ಲಿ ನಿಶ್ಯಬ್ಧತೆ ಮತ್ತು ಶಿಸ್ತನ್ನು ಕಾಪಾಡಿಕೊಳ್ಳಿ.
- ಭೇಟಿ ವೇಳೆ ಅಧಿಕಾರಿಗಳಿಂದ ಪ್ರಶ್ನೆಗಳನ್ನು ಕೇಳಿ ಮಾಹಿತಿ ಸಂಗ್ರಹಿಸಿ.
- ಭೇಟಿಯ ಸಮಯದಲ್ಲಿ ಸಂಗ್ರಹಿಸಿದ ಅವಲೋಕನಗಳನ್ನು ಮತ್ತು ಮಾಹಿತಿಯನ್ನು ಗಮನಿಸಿ.
- ಆಸ್ಪತ್ರೆ ಅಥವಾ ಔಷಧಾಲಯ ಅಥವಾ ಆರೋಗ್ಯ ಕೇಂದ್ರದಲ್ಲಿ ಲಭ್ಯವಿರುವ ಪೋಸ್ಟರ್ ಗಳು ಮತ್ತು ಫಲಕವನ್ನು ಓದಿ.

**ವಿಧಾನ:**

- ವಿದ್ಯಾರ್ಥಿಗಳಿಗೆ ಚಟುವಟಿಕೆಯ ಬಗ್ಗೆ ಮುಂಚಿತವಾಗಿ ತಿಳಿಸುವುದು.
- ವಿದ್ಯಾರ್ಥಿಗಳಿಗೆ ಚಟುವಟಿಕೆಯ ಮಹತ್ವವನ್ನು ವಿವರಿಸುವುದು.
- ನಿಗದಿತ ಆಸ್ಪತ್ರೆ ಅಥವಾ ಔಷಧಾಲಯ ಅಥವಾ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡುವುದು.
- ವೈದ್ಯರು ಮತ್ತು ಅಧಿಕಾರಿಗಳನ್ನು ಭೇಟಿ ಮಾಡಿ ಮತ್ತು ಅವರ ಪಾತ್ರಗಳು ಮತ್ತು ಜವಾಬ್ದಾರಿಗಳ ಬಗ್ಗೆ ತಿಳಿದುಕೊಳ್ಳುವುದು.
- ಅವರ ವೃತ್ತಿ ಮತ್ತು ದೈನಂದಿನ ಜವಾಬ್ದಾರಿಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುವುದು.
- ವೈದ್ಯರು– ರೋಗಿಗಳ ಸಂವಹನವನ್ನು ಗಮನಿಸುವುದು.
- ಆಸ್ಪತ್ರೆಯ ಸ್ವಾಗತಕಾರರ ಮೇಜು, ವೈದ್ಯರ ಕ್ಯಾಬಿನ್, ಶಸ್ತ್ರಚಿಕಿತ್ಸೆಯ ಕೊಠಡಿ, ಪೆಥಾಲಜಿ ಲ್ಯಾಬ್, ಭೋಜನಾಲಯ ಇತ್ಯಾದಿಗಳ ವಿವಿಧ ವಿಭಾಗಗಳಿಗೆ ಭೇಟಿ ನೀಡಿ ಮತ್ತು ಪ್ರತಿ ವಿಭಾಗದ ಪ್ರಾಮುಖ್ಯತೆ/ ಕಾರ್ಯನಿರ್ವಹಣೆಯನ್ನು ಅರ್ಥ ಮಾಡಿಕೊಳ್ಳುವುದು.
- ಆಸ್ಪತ್ರೆಯ ಸ್ವಾಗತಕಾರರನ್ನು ಭೇಟಿ ಮಾಡಿ ಮತ್ತು ವೈದ್ಯರೊಂದಿಗೆ ಸಮಾಲೋಚಿಸಲು ಹೊರ ರೋಗಿಗಳ ಚೀಟಿಗಳನ್ನು ಭರ್ತಿ ಮಾಡುವ ವಿಧಾನವನ್ನು ತಿಳಿದುಕೊಳ್ಳುವುದು.
- ನರ್ಸ್ ಗಳು, ವಾರ್ಡ್ ಬಾಯ್ ಗಳು, ಎಕ್ಸರೇ ತಂತ್ರಜ್ಞರು, ಇಸಿಜಿ ತಂತ್ರಜ್ಞರು, ಫಿಸಿಯೋಥೆರಪಿಸ್ಟ್ ಮುಂತಾದ ಆಸ್ಪತ್ರೆಯ ತಂತ್ರಜ್ಞರನ್ನು ಭೇಟಿ ಮಾಡಿ ಮತ್ತು ಅವರ ಪಾತ್ರ ಮತ್ತು ದೈನಂದಿನ ದಿನಚರಿಗಳ ಬಗ್ಗೆ ಚರ್ಚಿಸುವುದು.
- ವಿದ್ಯಾರ್ಥಿಗಳು ತಾವು ತಯಾರಿಸಿದ ಅಂಶಗಳನ್ನು ಗಮನಿಸಲು ಮತ್ತು ವರದಿಯನ್ನು ತಯಾರಿಸಲು ಪ್ರೋತ್ಸಾಹಿಸುವುದು.
- ವಿದ್ಯಾರ್ಥಿಗಳೊಂದಿಗೆ ಅವರ ಅವಲೋಕನಗಳು ಮತ್ತು ಚಟುವಟಿಕೆ ಸಮಯದಲ್ಲಾದ ಕಲಿಕೆಯನ್ನು ಚರ್ಚಿಸುವುದು.
- ವರದಿಯನ್ನು ತಯಾರಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು

**ಮೌಲ್ಯಮಾಪನ:**

ಪ್ರತಿಯೊಂದು ಚಟುವಟಿಕೆಯನ್ನು ಈ ಕೆಳಗಿನ ಮಾನದಂಡಗಳ ಮೇಲೆ ಮೌಲ್ಯಮಾಪನ ಮಾಡಬೇಕಾಗುತ್ತದೆ.

- ಆಸಕ್ತಿ
- ಭಾಗವಹಿಸುವಿಕೆ
- ಗುಂಪು ಕಾರ್ಯ
- ಪರಸ್ಪರ ಹೊಂದಾಣಿಕೆಯ ಕೌಶಲಗಳು
- ವರದಿ ತಯಾರಿ
- ಪ್ರಶ್ನಿಸುವ ಕೌಶಲಗಳು

**ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು**

ವೀಕ್ಷಣೆ, ವಿಶ್ಲೇಷಣೆ, ವ್ಯಾಖ್ಯಾನ, ವರದಿಗಳನ್ನು ಬರೆಯುವ ಕೌಶಲಗಳನ್ನು ಅಭಿವೃದ್ಧಿಪಡಿಸುವ ಮೂಲಕ, ಮಕ್ಕಳು ತಮ್ಮ ಆಸಕ್ತಿಗೆ ಅನುಗುಣವಾಗಿ ಭವಿಷ್ಯದಲ್ಲಿ ಈ ಕೆಳಗಿನ ವೃತ್ತಿಗಳನ್ನು ಅನುಸರಿಸಬಹುದು ಎಂದು ಅವರಿಗೆ ವಿವರಿಸಬಹುದು.

- ವೈದ್ಯರು
- 7ನರ್ಸ್/ದಾದಿಯರು
- ವೈದ್ಯಕೀಯ ತಂತ್ರಜ್ಞಾನ
- ವೈದ್ಯಕೀಯ ಆಡಳಿತಾಧಿಕಾರಿಗಳು
- ವೈದ್ಯಕೀಯ ಸಂಶೋಧಕ
- ಸಾರ್ವಜನಿಕ ಆರೋಗ್ಯ ಕಾರ್ಯಕರ್ತ
- ಪರಿಸರವಾದಿ

**ಚಟುವಟಿಕೆ: 17**

| ಅಂಚೆ ಕಚೇರಿಗೆ ಭೇಟಿ ನೀಡಿ | |
|---|---|
| ಚಟುವಟಿಕೆಯ ವಿಧ | ಹೊರಾಂಗಣ |
| ಬೇಕಾಗುವ ಅವಧಿ | 4 ಗಂಟೆಗಳು |
| ಅಭಿವೃದ್ಧಿಪಡಿಸ ಬೇಕಾದ ಕೌಶಲಗಳು | ವೀಕ್ಷಣಾ ಕೌಶಲಗಳು, ಸಾಮಾಜಿಕ ಅರಿವು, ಸಂವಹನ ಕೌಶಲಗಳು ಇತ್ಯಾದಿ |



**ಕಲಿಕಾ ಫಲಗಳು**

- ಅಂಚೆ ಕಚೇರಿಯ ಪಾತ್ರ ಮತ್ತು ಕೆಲಸವನ್ನು ಗುರುತಿಸುವುದು ಮತ್ತು ಚರ್ಚಿಸುವುದು.
- ಅಂಚೆ ಸೇವೆಗಳ ವಿವಿಧ ಕಾರ್ಯಾಚರಣೆಗಳನ್ನು ಅರ್ಥಮಾಡಿಕೊಳ್ಳುವುದು.

**ಅಗತ್ಯ ಸಾಮಾಗ್ರಿಗಳು**

- ನೋಟ್ ಬುಕ್ ಮತ್ತು ಪೆನ್ನು
- ಆರಾಮದಾಯಕ ಪಾದರಕ್ಷೆಗಳು

**ಶಿಕ್ಷಕರಿಗೆ ಸೂಚನೆಗಳು:**

- ಚಟುವಟಿಕೆ ಯೋಜನೆಯನ್ನು ಅಭಿವೃದ್ಧಿಪಡಿಸುವುದು.
- ಭೇಟಿ ನೀಡಬೇಕಾದ ಅಂಚೆ ಕಛೇರಿಯನ್ನು ಆಯ್ಕೆ ಮಾಡುವುದು.
- ಅಂಚೆ ಕಛೇರಿಯನ್ನು ಸಂಪರ್ಕಿಸಿ ಮತ್ತು ಭೇಟಿಯನ್ನು ನಿಗದಿಪಡಿಸುವುದು.
- ಚಟುವಟಿಕೆಗೆ ಬೇಕಾದ ಅನುದಾನ, ಕಚ್ಚಾಸಾಮಗ್ರಿ, ಸಾರಿಗೆ ಸಂಪರ್ಕ ಇತ್ಯಾದಿ ಅಗತ್ಯ ವ್ಯವಸ್ಥೆಗಳನ್ನು ಮಾಡುವುದು.
- ಭೇಟಿಯ ಉದ್ದೇಶದ ಬಗ್ಗೆ ವಿದ್ಯಾರ್ಥಿಗಳಿಗೆ ಸಂಕ್ಷಿಪ್ತವಾಗಿ ತಿಳಿಸುವುದು.
- ಚಟುವಟಿಕೆಯ ಉದ್ದೇಶ ಮತ್ತು ಸಿದ್ಧತೆಗಾಗಿ ಪೋಷಕರಿಗೆ ತಿಳಿಸುವುದು.
- ಅಂಚೆ ನೌಕರರಿಗೆ ಕೇಳಲು ಪ್ರಶ್ನೆಗಳ ಪಟ್ಟಿಯನ್ನು ತಯಾರಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.
- ಅಂಚೆ ಕಚೇರಿಯ ವಿವಿಧ ವಿಭಾಗಗಳ ಮೂಲಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವುದು. (ವಿಂಗಡಣೆಯ ಪ್ರದೇಶ, ಕೌಂಟರ್, ಇತ್ಯಾದಿ).
- ಅಂಚೆ ನೌಕರರೊಂದಿಗೆ ಸಂವಹನವನ್ನು ನಡೆಸಲು ಅನುಕೂಲ ಮಾಡಿಕೊಡುವುದು.
- ಚಟುವಟಿಕೆಯ ವರದಿಯನ್ನು ಪ್ರಾಂಶುಪಾಲರು/ ಮುಖ್ಯೋಪಾಧ್ಯಾಯರಿಗೆ ಸಲ್ಲಿಸುವುದು.

**ವಿದ್ಯಾರ್ಥಿಗಳಿಗೆ ಸೂಚನೆಗಳು:**

- ಶಿಕ್ಷಕ, ಮಾರ್ಗದರ್ಶಿ ಅಥವಾ ಬೋಧಕದ ಸೂಚನೆಗಳನ್ನು ಅನುಸರಿಸಿ.
- ಚಟುವಟಿಕೆಯ ಸಂದರ್ಭದಲ್ಲಿ ಶಿಸ್ತು ಕಾಪಾಡಿ..
- ಭೇಟಿ ವೇಳೆ ಅಧಿಕಾರಿಗಳಿಗೆ ಪ್ರಶ್ನೆಗಳನ್ನು ಕೇಳಿ ಮಾಹಿತಿ ಸಂಗ್ರಹಿಸಿ.
- ಅಂಚೆ ಕಚೇರಿ ಒದಗಿಸಿದ ಸೇವೆಗಳನ್ನು ಗಮನಿಸಿ (ಮೇಲ್ ಮಾಡುವುದು, ಕೊರಿಯರ್ ಕಳಿಸುವುದು ಇತ್ಯಾದಿ).
- ಭೇಟಿಯ ಸಮಯದಲ್ಲಿ ಸಂಗ್ರಹಿಸಿದ ಅವಲೋಕನಗಳನ್ನು ಮತ್ತು ಮಾಹಿತಿಯನ್ನು ಗಮನಿಸಿ.

**ವಿಧಾನ:**

- ವಿದ್ಯಾರ್ಥಿಗಳಿಗೆ ಚಟುವಟಿಕೆಯ ಬಗ್ಗೆ ಮುಂಚಿತವಾಗಿ ತಿಳಿಸುವುದು.
- ವಿದ್ಯಾರ್ಥಿಗಳಿಗೆ ಚಟುವಟಿಕೆಯ ಮಹತ್ವವನ್ನು ವಿವರಿಸುವುದು.
- ನಿಗಧಿತ ಅಂಚೆ ಕಚೇರಿಗೆ ಭೇಟಿ ನೀಡುವುದು.
- ಅಂಚೆ ಕಚೇರಿಯ ಅಧಿಕಾರಿಗಳನ್ನು ಭೇಟಿ ಮಾಡಿ ಮತ್ತು ಅಂಚೆ ಕಚೇರಿಯ ವಿವಿಧ ವಿಭಾಗಗಳು ಹಾಗೂ ಅವುಗಳ ಕಾರ್ಯಾಚರಣೆಗಳನ್ನು ವೀಕ್ಷಿಸುವುದು.
- ಪತ್ರಗಳನ್ನು ಮತ್ತು ವಸ್ತುಗಳನ್ನು ಹೇಗೆ ನಿರ್ವಹಿಸಲಾಗುತ್ತದೆ ಎಂಬುದನ್ನು ನೋಡಲು ವಿಂಗಡಿಸುವ ಪ್ರದೇಶದ ಭೇಟಿಯನ್ನು ಕೈಗೊಳ್ಳುವುದು.
- ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಕೇಳುವಂತೆ ಪ್ರೋತ್ಸಾಹಿಸುವುದು.
- ಅಂಚೆ ಕಚೇರಿಯ ಸಿಬ್ಬಂದಿಯೊಂದಿಗೆ ಸಂವಹನ ನಡೆಸಿ ಮತ್ತು ಅವರ ಪಾತ್ರಗಳು ಹಾಗೂ ಜವಾಬ್ದಾರಿಗಳ ಬಗ್ಗೆ ಅವರೊಂದಿಗೆ ಚರ್ಚಿಸುವುದು.
- ಕೌಂಟರ್ ಸೇವೆಗೆ ಭೇಟಿ ನೀಡಿ ಮತ್ತು ಗ್ರಾಹಕರ ಸಂವಹನಗಳನ್ನು ಎಚ್ಚರಿಕೆಯಿಂದ ಗಮನಿಸುವುದು.
- ಅಂಚೆ ನೌಕರರನ್ನು ಭೇಟಿ ಮಾಡಿ ಅವರ ಕರ್ತವ್ಯಗಳ ಬಗ್ಗೆ ಚರ್ಚಿಸುವುದು.
- ವಿವಿಧ ಅಂಚೆ ಸರಕು ಮತ್ತು ಸೇವೆಗಳಿಗೆ ಸಂಬಂಧಿಸಿದಂತೆ ಅಂಚೆ ಕಛೇರಿಗಳಲ್ಲಿ ಪ್ರದರ್ಶಿಸಲಾದ ಚಾರ್ಟ್‌ಗಳು/ ಪೋಸ್ಟರ್‌ಗಳನ್ನು ಓದಿಕೊಳ್ಳುವುದು.
- ವಿದ್ಯಾರ್ಥಿಗಳೊಂದಿಗೆ ಅವರ ಅವಲೋಕನಗಳು ಮತ್ತು ಚಟುವಟಿಕೆ ಸಮಯದಲ್ಲಾದ ಕಲಿಕೆಯ ಬಗ್ಗೆ ಚರ್ಚಿಸುವುದು.
- ವಿದ್ಯಾರ್ಥಿಗಳನ್ನು ವರದಿ ತಯಾರಿಸಲು ಪ್ರೋತ್ಸಾಹಿಸುವುದು.

**ಮೌಲ್ಯಮಾಪನ:**

ಪ್ರತಿಯೊಂದು ಚಟುವಟಿಕೆಯನ್ನು ಈ ಕೆಳಗಿನ ಮಾನದಂಡಗಳ ಮೇಲೆ ಮೌಲ್ಯಮಾಪನ ಮಾಡಬೇಕಾಗುತ್ತದೆ.

- ಆಸಕ್ತಿ
- ಭಾಗವಹಿಸುವಿಕೆ
- ಗುಂಪು ಕಾರ್ಯ
- ಪರಸ್ಪರ ಹೊಂದಾಣಿಕೆಯ ಕೌಶಲಗಳು
- ವರದಿ ತಯಾರಿ
- ಪ್ರಶ್ನಿಸುವ ಕೌಶಲಗಳು

**ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು**

ವೀಕ್ಷಣೆ, ವಿಶ್ಲೇಷಣೆ, ವ್ಯಾಖ್ಯಾನ, ವರದಿ ಬರೆಯುವ ಕೌಶಲಗಳನ್ನು ಅಭಿವೃದ್ಧಿ ಪಡಿಸುವ ಮೂಲಕ ಮಕ್ಕಳು ತಮ್ಮ ಆಸಕ್ತಿಗೆ ಅನುಗುಣವಾಗಿ ಭವಿಷ್ಯದಲ್ಲಿ ಈ ಕೆಳಗಿನ ವೃತ್ತಿಗಳನ್ನು ಅನುಸರಿಸಬಹುದು ಎಂದು ಅವರಿಗೆ ವಿವರಿಸಬಹುದು.

- ಪೋಸ್ಟ್ ಮಾಸ್ಟರ್
- ಪೋಸ್ಟ್ ಮ್ಯಾನ್
- ಗ್ರಾಹಕ ಸೇವಾ ಕಾರ್ಯನಿರ್ವಾಹಕ
- ಸಾಮಗ್ರಿ ಸರಬರಾಜು ಸಂಯೋಜಕರು
- ಅಂಚೆ ಕೆಲಸಗಾರ

**ಚಟುವಟಿಕೆ: 18**

| ದತ್ತಿ ಸಂಸ್ಥೆಗೆ ಭೇಟಿ ನೀಡಿ | |
|---|---|
| ಚಟುವಟಿಕೆಯ ವಿಧ | ಹೊರಾಂಗಣ |
| ಬೇಕಾಗುವ ಅವಧಿ | 3 ಗಂಟೆಗಳು |
| ಅಭಿವೃದ್ಧಿಪಡಿಸ ಬೇಕಾದ ಕೌಶಲಗಳು | ಅವಲೋಕನಾತ್ಮಕ ಕೌಶಲಗಳು, ಸಮುದಾಯ ಮತ್ತು ಅದರ ಸಮಸ್ಯೆಗಳ ಬಗ್ಗೆ ಜವಾಬ್ದಾರಿಯ ಭಾವನೆ, ಪರಸ್ಪರ ಹೊಂದಾಣಿಕೆಯ ಕೌಶಲಗಳು, ಸಂವಹನ ಕೌಶಲಗಳು, ಮಾನವೀಯ ಮೌಲ್ಯಗಳಿಗೆ ಗೌರವ. |



**ಕಲಿಕಾ ಫಲಗಳು**

- ದತ್ತಿ ಸಂಸ್ಥೆಗಳ ಪಾತ್ರಗಳು ಮತ್ತು ಜವಾಬ್ದಾರಿಗಳನ್ನು ವಿವರಿಸುವುದು.
- ಸಮಾಜ ಸೇವೆಯ ಮಹತ್ವವನ್ನು ವಿವರಿಸುವುದು .
- ದತ್ತಿ ಸಂಸ್ಥೆಗಳು ನಡೆಸುವ ಚಟುವಟಿಕೆಗಳನ್ನು ಗುರುತಿಸುವುದು.

**ಅಗತ್ಯ ಸಾಮಾಗ್ರಿಗಳು**

- ನೋಟ್ ಬುಕ್ ಮತ್ತು ಪೆನ್ನು
- ಉಡುಗೊರೆಗಳು

**ಶಿಕ್ಷಕರಿಗೆ ಸೂಚನೆಗಳು :**

- ಭೇಟಿ ನೀಡಬೇಕಾದ ಸ್ಥಳವನ್ನು ಆಯ್ಕೆ ಮಾಡುವುದು.
- ಚಟುವಟಿಕೆಯ ಯೋಜನೆಯನ್ನು ಅಭಿವೃದ್ಧಿಪಡಿಸುವುದು.
- ಶಿಕ್ಷಕರು ಅನಾಥಾಶ್ರಮ ಅಥವಾ ವೃದ್ಧಾಶ್ರಮದಂತಹ ದತ್ತಿ ಸಂಸ್ಥೆಯ ಸ್ಥಳವನ್ನು ಗುರುತಿಸಿ, ಅವರ ಅನುಮತಿಯನ್ನು ಪಡೆದು ದಿನಾಂಕವನ್ನು ನಿಗದಿಪಡಿಸುವುದು.
- ಚಟುವಟಿಕೆಯ ಉದ್ದೇಶ ಮತ್ತು ಸಿದ್ಧತೆಯ ಬಗ್ಗೆ ವಿದ್ಯಾರ್ಥಿಗಳಿಗೆ ಸಂಕ್ಷಿಪ್ತವಾಗಿ ತಿಳಿಸುವುದು.
- ಚಟುವಟಿಕೆಗೆ ಅನುದಾನ, ಕಚ್ಚಾಸಾಮಗ್ರಿಗಳು, ಸಾರಿಗೆ ಸಂಪರ್ಕ ಇತ್ಯಾದಿ ಅಗತ್ಯ ವ್ಯವಸ್ಥೆಗಳನ್ನು ಮಾಡುವುದು.
- ಚಟುವಟಿಕೆಯ ಉದ್ದೇಶ ಮತ್ತು ತಯಾರಿ ಬಗ್ಗೆ ಪೋಷಕರಿಗೆ ತಿಳಿಸುವುದು.
- ಚಟುವಟಿಕೆಯ ವರದಿಯನ್ನು ಪ್ರಾಂಶುಪಾಲರು/ ಮುಖ್ಯೋಪಾಧ್ಯಾಯರಿಗೆ ಸಲ್ಲಿಸುವುದು.

**ವಿದ್ಯಾರ್ಥಿಗಳಿಗೆ ಸೂಚನೆಗಳು :**

- ಶಿಕ್ಷಕರು ನೀಡಿದ ಸಂಕ್ಷಿಪ್ತ ವಿವರದ ಪ್ರಕಾರ ಸಿದ್ಧತೆಗಳನ್ನು ಮಾಡಿ.
- ಶಿಕ್ಷಕ, ಮಾರ್ಗದರ್ಶಿ ಅಥವಾ ಬೋಧಕರ ಸೂಚನೆಗಳನ್ನು ಅನುಸರಿಸಿ.
- ಚಟುವಟಿಕೆಯ ಸಂದರ್ಭದಲ್ಲಿ ಶಿಸ್ತು ಕಾಪಾಡಿ.
- ದತ್ತಿ ಸಂಸ್ಥೆ, ಅನಾಥಾಶ್ರಮ/ ವೃದ್ಧಾಶ್ರಮದಲ್ಲಿರುವ ಜನರನ್ನು ನಗುಮುಖದೊಂದಿಗೆ ಸ್ವಾಗತಿಸಿ.
- ಜನರೊಂದಿಗೆ ಸಂವಹನ ನಡೆಸಿ.

**ವಿಧಾನ:**

- ವಿದ್ಯಾರ್ಥಿಗಳಿಗೆ ಚಟುವಟಿಕೆಯ ಬಗ್ಗೆ ಮುಂಚಿತವಾಗಿ ತಿಳಿಸುವುದು.
- ವಿದ್ಯಾರ್ಥಿಗಳಿಗೆ ಚಟುವಟಿಕೆಯ ಮಹತ್ವವನ್ನು ತಿಳಿಸುವುದು.
- ನಿಗದಿತ ಸ್ಥಳಕ್ಕೆ ಭೇಟಿ ನೀಡುವುದು.
- ಪ್ರಶ್ನೆಗಳನ್ನು ಕೇಳಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.
- ಅವರ ಉಡುಗೊರೆಗಳನ್ನು ಹಂಚಿಕೊಳ್ಳಿ ಮತ್ತು ಯಾವುದಾದರೂ ನೃತ್ಯ ಅಥವಾ ಹಾಡನ್ನು ಪ್ರದರ್ಶಿಸುವುದು.
- ವಿದ್ಯಾರ್ಥಿಗಳ ಅವಲೋಕನಗಳ ಮತ್ತು ಕಲಿಕೆಗಳ ಬಗ್ಗೆ ಚಟುವಟಿಕೆಯ ಸಮಯದಲ್ಲಿ ಅವರೊಂದಿಗೆ ಚರ್ಚಿಸುವುದು.
- ವರದಿಯನ್ನು ತಯಾರಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.



**ಮೌಲ್ಯಮಾಪನ**

ಪ್ರತಿಯೊಂದು ಚಟುವಟಿಕೆಯನ್ನು ಈ ಕೆಳಗಿನ ನಿಯಾತಾಂಕಗಳ ಮೇಲೆ ಮೌಲ್ಯಮಾಪನ ಮಾಡಬೇಕಾಗುತ್ತದೆ .

- ನಾಯಕತ್ವದ ಗುಣ
- ಹಿರಿಯರಿಗೆ ಗೌರವ
- ಶಿಸ್ತು
- ಆಲಿಸುವ ಕೌಶಲಗಳು
- ಪ್ರಶ್ನಿಸುವ ಕೌಶಲಗಳು

**ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು**

- ವೀಕ್ಷಣಾ, ವಿಶ್ಲೇಷಣೆ, ವ್ಯಾಖ್ಯಾನ, ವರದಿಗಳನ್ನು ಬರೆಯುವ ಈ ಕೌಶಲಗಳನ್ನು ಅಭಿವೃದ್ಧಿ ಪಡಿಸುವ ಮೂಲಕ ಅವರು ತಮ್ಮ ಆಸಕ್ತಿಗೆ ಅನುಗುಣವಾಗಿ ಭವಿಷ್ಯದಲ್ಲಿ ಈ ಕೆಳಗಿನ ವೃತ್ತಿಗಳನ್ನು ಅನುಸರಿಸಬಹುದು ಎಂದು ಮಕ್ಕಳಿಗೆ ವಿವರಿಸಬಹುದು.
- ವೃದ್ಧಾಶ್ರಮದ ಸ್ವಯಂಸೇವಕ
- ವೃದ್ಧಾಶ್ರಮದ ಆರೋಗ್ಯ ಕಾರ್ಯಕರ್ತ

**ಚಟುವಟಿಕೆ: 19**

| ರೈಲ್ವೆ ನಿಲ್ದಾಣಕ್ಕೆ ಭೇಟಿ ನೀಡಿ | |
|---|---|
| ಚಟುವಟಿಕೆಯ ವಿಧ | ಹೊರಾಂಗಣ |
| ಬೇಕಾಗುವ ಅವಧಿ | 3 ಗಂಟೆಗಳು |
| ಅಭಿವೃದ್ಧಿಪಡಿಸ ಬೇಕಾದ ಕೌಶಲಗಳು | ವೀಕ್ಷಣಾ ಕೌಶಲಗಳು, ಸಾಮಾಜಿಕ ಅರಿವು, ಸಂವಹನ ಕೌಶಲಗಳು ಇತ್ಯಾದಿ. |



**ಕಲಿಕಾ ಫಲಗಳು**

- ಟಿಕೆಟ್ ಕೌಂಟರ್ಗಳು, ಫ್ಲಾಟ್ ಫಾರಂ ಗಳು, ಕಂಟ್ರೋಲ್ ರೂಂ ಮುಂತಾದ ರೈಲು ನಿಲ್ದಾಣದ ವಿವಿಧ ಭಾಗಗಳನ್ನು ಗುರುತಿಸುವುದು.
- ರೈಲ್ವೆ ಪ್ಲಾಟ್ ಫಾರ್ಮ್ ನಲ್ಲಿ ರೈಲ್ವೆ ವೇಳಾಪಟ್ಟಿ ಪ್ರದರ್ಶನವನ್ನು ಓದಲು ಸಾಧ್ಯವಾಗುವುದು
- ರೈಲಿಗೆ ಸಂಬಂಧಿಸಿದ ಪ್ರಕಟಣೆಗಳನ್ನು ಅರ್ಥ ಮಾಡಿಕೊಳ್ಳುವುದು.
- ಆನ್‌ಲೈನ್ ಮತ್ತು ಆಫ್‌ಲೈನ್ ಟಿಕೆಟ್ ಬುಕಿಂಗ್ ಪ್ರಕ್ರಿಯೆಯನ್ನು ತಿಳಿಯುವುದು.
- ಸ್ಟೇಷನ್ ಮಾಸ್ಟರ್, ಕಂಟ್ರೋಲರ್, ಟಿಕೆಟ್ ಕಲೆಕ್ಟರ್ ಗಳು ಮುಂತಾದ ನಿಲ್ದಾಣದ ಸಿಬ್ಬಂದಿಯ ಪಾತ್ರಗಳನ್ನು ಅರ್ಥ ಮಾಡಿಕೊಳ್ಳುವುದು.

**ಅಗತ್ಯ ಸಾಮಾಗ್ರಿಗಳು**

- ನೋಟ್ ಬುಕ್ ಮತ್ತು ಪೆನ್ನು .
- ಆರಾಮದಾಯಕ ಪಾದ ರಕ್ಷೆಗಳು.

**ಶಿಕ್ಷಕರಿಗೆ ಸೂಚನೆಗಳು**

- ಭೇಟಿ ನೀಡಲು ರೈಲ್ವೆ ನಿಲ್ದಾಣವನ್ನು ಆಯ್ಕೆ ಮಾಡುವುದು.
- ರೈಲ್ವೆ ಅಧಿಕಾರಿಗಳನ್ನು ಸಂಪರ್ಕಿಸಿ ಮತ್ತು ಭೇಟಿಯನ್ನು ನಿಗಧಿಪಡಿಸುವುದು.
- ಚಟುವಟಿಕೆಯ ಯೋಜನೆಯನ್ನು ಅಭಿವೃದ್ಧಿಪಡಿಸುವುದು.
- ಭೇಟಿಯ ಉದ್ದೇಶದ ಬಗ್ಗೆ ವಿದ್ಯಾರ್ಥಿಗಳಿಗೆ ಸಂಕ್ಷಿಪ್ತವಾಗಿ ತಿಳಿಸುವುದು.
- ಚಟುವಟಿಕೆಗಳಿಗೆ ಅನುದಾನ, ಕಚ್ಚಾಸಾಮಗ್ರಿ, ಸಾರಿಗೆ ಸಂಪರ್ಕ ಇತ್ಯಾದಿ ಅಗತ್ಯ ವ್ಯವಸ್ಥೆಗಳನ್ನು ಮಾಡುವುದು.
- ಚಟುವಟಿಕೆಯ ಉದ್ದೇಶ ಮತ್ತು ಸಿದ್ಧತೆಯನ್ನು ಪೋಷಕರಿಗೆ ತಿಳಿಸುವುದು.
- ರೈಲ್ವೆ ನಿಲ್ದಾಣದಲ್ಲಿ ಅನ್ವೇಷಿಸಬೇಕಾದ ವಿಭಾಗಗಳ ಪಟ್ಟಿಯನ್ನು ತಯಾರಿಸುವುದು.
- ಟಿಕೆಟ್ ಕೌಂಟರ್, ವಿಶ್ರಾಂತಿ ಕೊಠಡಿ, ಫ್ಲಾಟ್ ಫಾರ್ಮ್, ಕಂಟ್ರೋಲ್ ರೂಮ್ ಮುಂತಾದ ರೈಲು ನಿಲ್ದಾಣದ ವಿವಿಧ ವಿಭಾಗಗಳ ಮೂಲಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವುದು.
- ರೈಲ್ವೆ ಸಿಬ್ಬಂದಿಯೊಂದಿಗೆ ಸಂವಹನಕ್ಕೆ ಅನುಕೂಲ ಮಾಡಿಕೊಡುವುದು.
- ಚಟುವಟಿಕೆ ವರದಿಯನ್ನು ಪ್ರಾಂಶುಪಾಲರು/ ಮುಖ್ಯೋಪಾಧ್ಯಾಯರಿಗೆ ಸಲ್ಲಿಸುವುದು.

**ವಿದ್ಯಾರ್ಥಿಗಳಿಗೆ ಸೂಚನೆಗಳು :**

- ಶಿಕ್ಷಕ, ಮಾರ್ಗದರ್ಶಿ ಅಥವಾ ಬೋಧಕರ ಸೂಚನೆಗಳನ್ನು ಅನುಸರಿಸಿ.
- ಚಟುವಟಿಕೆಯ ಸಂದರ್ಭದಲ್ಲಿ ಶಿಸ್ತು ಕಾಪಾಡಿ.
- ಅಧಿಕಾರಿಗಳು/ ಮಾರ್ಗದರ್ಶಿ/ ಬೋಧಕರಿಂದ ಪ್ರಶ್ನೆಗಳನ್ನು ಕೇಳಿ ಮತ್ತು ಭೇಟಿಯ ಸಮಯದಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಗಮನಿಸಿ.

**ವಿಧಾನ**

- ವಿದ್ಯಾರ್ಥಿಗಳಿಗೆ ಚಟುವಟಿಕೆಯ ಬಗ್ಗೆ ಮುಂಚಿತವಾಗಿ ತಿಳಿಸುವುದು.
- ವಿದ್ಯಾರ್ಥಿಗಳಿಗೆ ಚಟುವಟಿಕೆಯ ಮಹತ್ವವನ್ನು ವಿವರಿಸುವುದು.
- ನಿಗದಿತ ರೈಲು ನಿಲ್ದಾಣಕ್ಕೆ ಭೇಟಿ ನೀಡುವುದು.
- ರೈಲ್ವೆ ನಿಲ್ದಾಣದ ಅಧಿಕಾರಿಗಳನ್ನು ಭೇಟಿ ಮಾಡಿ ಮತ್ತು ಸಂವಾದ ನಡೆಸಿ ಮತ್ತು ಅವರ ಪಾತ್ರಗಳು ಮತ್ತು ಜವಾಬ್ದಾರಿಗಳನ್ನು ಚರ್ಚಿಸುವುದು.
- ಪ್ರಶ್ನೆಗಳನ್ನು ಕೇಳಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.
- ರೈಲು ನಿಲ್ದಾಣದ ವಿವಿಧ ವಿಭಾಗಗಳು ಮತ್ತು ಅವುಗಳ ಕಾರ್ಯಾಚರಣೆಗಳನ್ನು ಗಮನಿಸುವುದು.
- ರೈಲು ಆಗಮನ/ನಿರ್ಗಮನ ಮತ್ತು ಸಂವಹನಗಳನ್ನು ಹೇಗೆ ಮೇಲ್ವಿಚಾರಣೆ ಮಾಡಲಾಗುತ್ತದೆ ಎಂಬುದನ್ನು ನೋಡಲು ನಿಯಂತ್ರಣ ಕೊಠಡಿಗೆ ಪ್ರವಾಸ/ಭೇಟಿಯನ್ನು ಕೈಗೊಳ್ಳುವುದು.
- ಟಿಕೆಟ್ ಕೌಂಟರ್ ಗಳಿಗೆ ಭೇಟಿ ನೀಡಿ ಮತ್ತು ಗ್ರಾಹಕರ ಸಂವಹನಗಳನ್ನು ವೀಕ್ಷಿಸಿ.
- ರೈಲ್ವೆ ಪ್ಲಾಟ್ ಫಾರ್ಮ್ ನಲ್ಲಿ ರೈಲುಗಳ ವೇಳಾಪಟ್ಟಿ ಹಾಗೂ ಅವುಗಳ ಆಗಮನ ಮತ್ತು ನಿರ್ಗಮನವನ್ನು ಗಮನಿಸುವುದು.
- ಫ್ಲ್ಯಾಟ್ ಫಾರ್ಮ್ ನಲ್ಲಿರುವ ಅಂಗಡಿಗಳನ್ನು ಗಮನಿಸುವುದು.
- ರೈಲ್ವೆ ಸಿಬ್ಬಂದಿಯೊಂದಿಗೆ ಅವರ ದೈನಂದಿನ ವೇಳಾಪಟ್ಟಿ ಮತ್ತು ರೈಲ್ವೆ ನಿಲ್ದಾಣದಲ್ಲಿ ಕೆಲಸ ಮಾಡಲು ಮುಖ್ಯವಾದ ಕೌಶಲದ ಬಗ್ಗೆ ಸಂವಹನ ನಡೆಸುವುದು.
- ರೈಲ್ವೆ ಪೊಲೀಸರೊಂದಿಗೆ ಸಂವಹನ ನಡೆಸಿ ಅವರ ಕರ್ತವ್ಯಗಳ ಬಗ್ಗೆ ಚರ್ಚಿಸುವುದು.
- ಚಟುವಟಿಕೆ ಸಮಯದಲ್ಲಿ ವಿದ್ಯಾರ್ಥಿಗಳ ಅವಲೋಕನಗಳು ಮತ್ತು ಕಲಿಕೆಗಳ ಬಗ್ಗೆ ಅವರೊಂದಿಗೆ ಚರ್ಚಿಸುವುದು.
- ವರದಿಯನ್ನು ತಯಾರಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.

**ಮೌಲ್ಯಮಾಪನ:**

ಪ್ರತಿಯೊಂದು ಚಟುವಟಿಕೆಯನ್ನು ಈ ಕೆಳಗಿನ ಮಾನದಂಡಗಳ ಮೇಲೆ ಮೌಲ್ಯಮಾಪನ ಮಾಡಬೇಕಾಗುತ್ತದೆ

- ಆಸಕ್ತಿ
- ಭಾಗವಹಿಸುವಿಕೆ
- ಗುಂಪು ಕಾರ್ಯ
- ಪರಸ್ಪರ ಹೊಂದಾಣಿಕೆಯ ಕೌಶಲಗಳು
- ವರದಿ ತಯಾರಿ
- ಪ್ರಶ್ನಿಸುವ ಕೌಶಲಗಳು

**ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು**

ವೀಕ್ಷಣೆ, ವಿಶ್ಲೇಷಣೆ, ವ್ಯಾಖ್ಯಾನ, ವರದಿಗಳನ್ನು ಬರೆಯುವ ಕೌಶಲಗಳನ್ನು ಅಭಿವೃದ್ಧಿ ಪಡಿಸುವ ಮೂಲಕ ಅವರು ತಮ್ಮ ಆಸಕ್ತಿಗೆ ಅನುಗುಣವಾಗಿ ಭವಿಷ್ಯದಲ್ಲಿ ಈ ಕೆಳಗಿನ ವೃತ್ತಿಗಳನ್ನು ಅನುಸರಿಸಬಹುದು ಎಂದು ಮಕ್ಕಳಿಗೆ ವಿವರಿಸುವುದು.

- ಸ್ಟೇಷನ್ ಮಾಸ್ಟರ್
- ಟಿಕೆಟ್ ಕಲೆಕ್ಟರ್
- ಗ್ರಾಹಕ ಸೇವಾ ಕಾರ್ಯನಿರ್ವಾಹಕ
- ನಿಯಂತ್ರಕ
- ರೈಲ್ವೆ ಪೊಲೀಸ್ ಪಡೆ
- ರೈಲ್ವೆ ಇಂಜಿನಿಯರ್
- ರೈಲ್ವೆ ತಂತ್ರಜ್ಞ

**ಚಟುವಟಿಕೆ 20**

| ರಕ್ಷಣಾ / ಪೋಲಿಸ್ ತರಬೇತಿ ಕೇಂದ್ರಕ್ಕೆ ಭೇಟಿ | |
|---|---|
| ಚಟುವಟಿಕೆಯ ವಿಧ | ಹೊರಾಂಗಣ |
| ಬೇಕಾಗುವ ಅವಧಿ | 4 ಗಂಟೆಗಳು |
| ಅಭಿವೃದ್ಧಿಪಡಿಸ ಬೇಕಾದ ಕೌಶಲಗಳು | ಆದೇಶ ಮತ್ತು ನಿಯಮಗಳಿಗೆ ಗೌರವ, ಅವಲೋಕನ ಕೌಶಲಗಳು, ವಿಮರ್ಶಾತ್ಮಕ ಚಿಂತನೆ, ಸಂವಹನ ಕೌಶಲಗಳು, ಸ್ವಯಂ ಸೇವಾ ಮನೋಭಾವ, ನಾಯಕತ್ವ, ಹೊಂದಾಣಿಕೆ ಇತ್ಯಾದಿ. |



**ಕಲಿಕಾ ಫಲಗಳು**

- ರಾಷ್ಟ್ರ ಸೇವೆಯಲ್ಲಿ ರಕ್ಷಣಾ ಇಲಾಖೆ (ಮಿಲಿಟರಿ) ಅಥವಾ ಪೊಲೀಸರ ಪಾತ್ರವನ್ನು ವಿವರಿಸುವುದು.
- ಪೋಲಿಸ್ ಅಥವಾ ರಕ್ಷಣಾ ಇಲಾಖೆ (ಮಿಲಿಟರಿ) ಸೇವೆಗಳಲ್ಲಿ ತರಬೇತಿಯ ಪ್ರಾಮುಖ್ಯತೆಯನ್ನು ತಿಳಿಯುವುದು
- ರಕ್ಷಣಾ ಇಲಾಖೆ ಅಥವಾ ಪೊಲೀಸ್ ಸೇವೆಗಳಲ್ಲಿ ತರಬೇತಿ ಕಾರ್ಯ ವಿಧಾನಗಳನ್ನು ತಿಳಿಯುವುದು.

**ಅಗತ್ಯ ಸಾಮಗ್ರಿಗಳು**

- ನೋಟ್ ಬುಕ್ ಮತ್ತು ಪೆನ್ನು.
- ಟೋಪಿ (ಕ್ಯಾಪ್)
- ಆರಾಮದಾಯಕ ಪಾದರಕ್ಷೆಗಳು.

**ಶಿಕ್ಷಕರಿಗೆ ಸೂಚನೆಗಳು**

- ಭೇಟಿ ನೀಡಲು ಪೊಲೀಸ್ ಅಥವಾ ರಕ್ಷಣಾ ಇಲಾಖೆ ತರಬೇತಿ ಕೇಂದ್ರವನ್ನು ಆಯ್ಕೆ ಮಾಡಿಕೊಳ್ಳುವುದು.
- ತರಬೇತಿ ಕೇಂದ್ರದ ಮುಖ್ಯಸ್ಥರನ್ನು ಸಂಪರ್ಕಿಸಿ ಮತ್ತು ಭೇಟಿಯ ಸಮಯವನ್ನು ನಿಗದಿ ಪಡಿಸುವುದು .
- ಚಟುವಟಿಕೆಯ ಯೋಜನೆಯನ್ನು ಅಭಿವೃದ್ಧಿಪಡಿಸುವುದು.
- ಭೇಟಿಯ ಉದ್ದೇಶದ ಬಗ್ಗೆ ವಿದ್ಯಾರ್ಥಿಗಳಿಗೆ ಸಂಕ್ಷಿಪ್ತವಾಗಿ ವಿವರಿಸುವುದು.
- ಚಟುವಟಿಕೆಗೆ ಅಗತ್ಯವಿರುವ ಅನುದಾನ, ಕಚ್ಚಾ ಸಾಮಗ್ರಿ, ಸಾರಿಗೆ ಸಂಪರ್ಕ ಇತ್ಯಾದಿ ವ್ಯವಸ್ಥೆಗಳನ್ನು ಮಾಡುವುದು
- ಚಟುವಟಿಕೆಯ ಉದ್ದೇಶ ಮತ್ತು ಸಿದ್ಧತೆಗಾಗಿ ಪೋಷಕರಿಗೆ ತಿಳಿಸುವುದು.
- ಚಟುವಟಿಕೆಯ ವರದಿಯನ್ನು ಪ್ರಾಂಶುಪಾಲರಿಗೆ / ಮುಖ್ಯೋಪಾಧ್ಯಾಯರಿಗೆ ಸಲ್ಲಿಸುವುದು.

**ವಿದ್ಯಾರ್ಥಿಗಳಿಗೆ ಸೂಚನೆಗಳು**

- ಶಿಕ್ಷಕರು, ಮಾರ್ಗದರ್ಶಕರು ಅಥವಾ ನಿರ್ದೇಶಕರ ಸೂಚನೆಗಳನ್ನು ಪಾಲಿಸುವುದು.
- ಚಟುವಟಿಕೆಯ ಸಂದರ್ಭದಲ್ಲಿ ಶಿಸ್ತು ಕಾಪಾಡಿ.
- ರಕ್ಷಣಾ ಅಥವಾ ಪೊಲೀಸ್ ಸಿಬ್ಬಂದಿಯ ತರಬೇತಿ ಕ್ರಮಗಳು ಮತ್ತು ದಿನಚರಿಗಳ ಬಗ್ಗೆ ಪ್ರಶ್ನೆಗಳನ್ನು ಕೇಳುವುದು
- ಭೇಟಿ ಕೇಂದ್ರದಲ್ಲಿ ನಡೆಯುವ ತರಬೇತಿ ಅಭ್ಯಾಸಗಳನ್ನು ಗಮನಿಸುವುದು.
- ಅಧಿಕಾರಿಗಳಿಂದ ಪ್ರಶ್ನೆಗಳನ್ನು ಕೇಳಿ, ಭೇಟಿ ವೇಳೆ ಮಾಹಿತಿ ಸಂಗ್ರಹಿಸುವುದು
- ಎಲ್ಲಾ ಗಮನಾರ್ಹ ಮಾಹಿತಿಯನ್ನು ದಾಖಲಿಸುವುದು.

**ವಿಧಾನ**

- ವಿದ್ಯಾರ್ಥಿಗಳಿಗೆ ಚಟುವಟಿಕೆ ಬಗ್ಗೆ ಮುಂಚಿತವಾಗಿ ಮಾಹಿತಿ ನೀಡುವುದು.
- ಚಟುವಟಿಕೆಯ ಮಹತ್ವವನ್ನು ವಿವರಿಸುವುದು.
- ನಿರ್ದಿಷ್ಟ ಪಡಿಸಿದ ತರಬೇತಿ ಕೇಂದ್ರಕ್ಕೆ ಭೇಟಿ ನೀಡುವುದು.
- ಅಧಿಕಾರಿಗಳ ಜೊತೆ ಅವರ ಕಾರ್ಯಚಟುವಟಿಕೆ ಹಾಗೂ ಹೊಣೆಗಾರಿಕೆಗಳ ಬಗ್ಗೆ ಚರ್ಚಿಸುವುದು.
- ವಿದ್ಯಾರ್ಥಿಗಳಿಗೆ ಪ್ರಶ್ನೆಗಳನ್ನು ಕೇಳಲು ಉತ್ತೇಜಿಸುವುದು.
- ಪೊಲೀಸ್ ಅಥವಾ ರಕ್ಷಣಾ ಕ್ಷೇತ್ರದಲ್ಲಿ ಕಾರ್ಯ ನಿರ್ವಹಣೆಗೆ ಬೇಕಾದ ಅರ್ಹತೆಗಳು ಮತ್ತು ಪ್ರಕ್ರಿಯೆ ಬಗ್ಗೆ ಚರ್ಚಿಸುವುದು.
- ತರಬೇತಿ ಸ್ಥಳಗಳಿಗೆ ಭೇಟಿ ನೀಡುವುದು. (ಮೈದಾನ, ತರಗತಿಗಳು, ಕೌಶಲ ಪ್ರಯೋಗಗಳು, ಕ್ಯಾಂಟೀನ್, ಇತ್ಯಾದಿ)
- ಶಿಸ್ತಿನಿಂದ ವರ್ತಿಸಿ ಮತ್ತು ಅಧಿಕಾರಿಗಳನ್ನು ಗೌರವಿಸುವಂತೆ ತಿಳಿಸುವುದು.
- ವಿವಿಧ ತರಬೇತಿ ಚಟುವಟಿಕೆಗಳನ್ನು ಗಮನಿಸುವುದು.
- ಚಟುವಟಿಕೆ ಕುರಿತು ವಿದ್ಯಾರ್ಥಿಗಳ ಜೊತೆ ಚರ್ಚಿಸಿ ಮತ್ತು ವರದಿ ತಯಾರಿಸಲು ಪ್ರೇರೇಪಿಸುವುದು.

**ಮೌಲ್ಯಮಾಪನ**

- ಪ್ರತಿಯೊಂದು ಚಟುವಟಿಕೆಗಳನ್ನು ಈ ಕೆಳಗಿನ ಮಾನದಂಡಗಳ ಮೇಲೆ ಮೌಲ್ಯಮಾಪನ ಮಾಡಬೇಕಾಗುತ್ತದೆ.
- ಆಸಕ್ತಿ
- ಭಾಗವಹಿಸುವಿಕೆ
- ಗುಂಪು ಕಾರ್ಯ
- ಪರಸ್ಪರ ಹೊಂದಾಣಿಕೆಯ ಕೌಶಲ
- ವರದಿ ತಯಾರಿಕೆ
- ಪ್ರಶ್ನೋತ್ತರ ಕೌಶಲ

**ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು**

ವೀಕ್ಷಣೆ, ವಿಶ್ಲೇಷಣೆ, ಅರ್ಥೈಸುವುದು, ವರದಿ ಬರೆಯುವ ಕೌಶಲಗಳನ್ನು ಅಭಿವೃದ್ಧಿಪಡಿಸುವ ಮೂಲಕ ಮಕ್ಕಳಿಗೆ ಭವಿಷ್ಯದಲ್ಲಿ ತಮ್ಮ ಆಸಕ್ತಿಯ ಆಧಾರದ ಮೇಲೆ ಈ ಕೆಳಗಿನ ವೃತ್ತಿಗಳನ್ನು ಅನುಸರಿಸಬಹುದು ಎಂದು ಮಕ್ಕಳಿಗೆ ವಿವರಿಸಿವುದು

- ಪೊಲೀಸ್ ಅಧಿಕಾರಿ
- ಸೇನಾ ಅಧಿಕಾರಿ
- ನೌಕಾ ಅಧಿಕಾರಿ
- ವಾಯುಪಡೆ ಅಧಿಕಾರಿ
- ಭದ್ರತಾ ರಕ್ಷಕ
- ಬಾಡಿಗಾರ್ಡ್/ಬೌನ್ಸರ್
- ಮಾರ್ಷಲ್ ಆರ್ಟ್ ತರಬೇತುದಾರ

**ಚಟುವಟಿಕೆ: 21**

| ಬ್ಯಾಂಕ್‌ಗೆ ಭೇಟಿ | |
|---|---|
| ಚಟುವಟಿಕೆಯ ವಿಧ | ಹೊರಾಂಗಣ |
| ಬೇಕಾಗುವ ಅವಧಿ | 4 ಗಂಟೆಗಳು |
| ಅಭಿವೃದ್ಧಿಪಡಿಸ ಬೇಕಾದ ಕೌಶಲಗಳು | ಆರ್ಥಿಕ ಸಾಕ್ಷರತೆ, ವೀಕ್ಷಣಾ ಕೌಶಲಗಳು, ತಾರ್ಕಿಕ ಕೌಶಲಗಳು, ಸಂವಹನ ಕೌಶಲಗಳು ಇತ್ಯಾದಿ. |



**ಕಲಿಕಾ ಫಲಗಳು:**

- ಬ್ಯಾಂಕ್ ಮತ್ತು ಬ್ಯಾಂಕಿಂಗ್ ಕಾರ್ಯಾಚರಣೆಯ ಪಾತ್ರವನ್ನು ತಿಳಿಯುವುದು .
- ಕರೆನ್ಸಿ ನೋಟ್‌ಗಳ ವಿಭಿನ್ನ ಪ್ರಕಾರಗಳು ಮತ್ತು ಅವುಗಳ ಸುರಕ್ಷತಾ ಲಕ್ಷಣಗಳನ್ನು ಗುರುತಿಸುವುದು.
- ವಿವಿಧ ಬ್ಯಾಂಕ್ ಖಾತೆಗಳ ವಿಧಗಳನ್ನು ಗುರುತಿಸುವುದು.
- ಉಳಿತಾಯ ಖಾತೆಯನ್ನು ತೆರೆಯುವುದು ಮತ್ತು ನಿರ್ವಹಿಸುವುದು ಹೇಗೆ ಎಂಬುದನ್ನು ತಿಳಿಯುವುದು.
- ಮೊಬೈಲ್ ಬ್ಯಾಂಕಿಂಗ್ ಆಪ್ (ಆನ್‌ಲೈನ್ ಬ್ಯಾಂಕಿಂಗ್ ಸೇವೆಗಳು) ಅರ್ಥಮಾಡಿಕೊಳ್ಳುವುದು ಮತ್ತು ಬಳಸುವುದು.

**ಅಗತ್ಯವಿರುವ ಸಾಮಾಗ್ರಿಗಳು**

- ನೋಟ್‌ಬುಕ್ ಮತ್ತು ಪೆನ್
- ಆರಾಮದಾಯಕ ಪಾದರಕ್ಷೆಗಳು

**ಶಿಕ್ಷಕರಿಗೆ ಸೂಚನೆಗಳು**

- ಭೇಟಿಕೊಡುವ ಬ್ಯಾಂಕ್‌ನ್ನು ಆಯ್ಕೆ ಮಾಡುವುದು.
- ಬ್ಯಾಂಕ್ ಅಧಿಕಾರಿಗಳೊಂದಿಗೆ ಸಂಪರ್ಕಿಸಿ ಮತ್ತು ಭೇಟಿ ಸಮಯವನ್ನು ಯೋಜಿಸುವುದು.
- ಚಟುವಟಿಕೆಯ ಯೋಜನೆಯನ್ನು ರೂಪಿಸುವುದು
- ಭೇಟಿ ಉದ್ದೇಶದ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸುವುದು.
- ಚಟುವಟಿಕೆಗೆ ಅಗತ್ಯವಿರುವ ಅನುದಾನ, ಕಚ್ಚಾ ಸಾಮಗ್ರಿ, ಸಾರಿಗೆ ಸಂಪರ್ಕ ಇತ್ಯಾದಿ ವ್ಯವಸ್ಥೆಗಳನ್ನು ಮಾಡುವುದು
- ಚಟುವಟಿಕೆಯ ಉದ್ದೇಶ ಮತ್ತು ತಯಾರಿಗಾಗಿ ಪೋಷಕರಿಗೆ ಮಾಹಿತಿ ನೀಡುವುದು.
- ಬ್ಯಾಂಕ್‌ನಲ್ಲಿ ಪರಿಶೀಲಿಸಬೇಕಾದ ಅಂಶಗಳ ಪಟ್ಟಿಯನ್ನು, ಮಾಹಿತಿ ಕೇಂದ್ರ, ಗ್ರಾಹಕ ಸೇವೆ, ನಗದು ವ್ಯವಹಾರ ಇತ್ಯಾದಿ ಪಟ್ಟಿ ತಯಾರಿಸಿಕೊಳ್ಳುವುದು.
- ವಿದ್ಯಾರ್ಥಿಗಳು ಬ್ಯಾಂಕ್ ಅಧಿಕಾರಿಗಳೊಂದಿಗೆ ಸಂವಹನ ನಡೆಸುವಂತೆ ಸಹಾಯ ಮಾಡುವುದು.
- ಚಟುವಟಿಕೆಯ ವರದಿಯನ್ನು ಪ್ರಾಂಶುಪಾಲರಿಗೆ/ ಮುಖ್ಯೋಪಾಧ್ಯಾಯರಿಗೆ ಸಲ್ಲಿಸುವುದು.

**ವಿದ್ಯಾರ್ಥಿಗಳಿಗೆ ಸೂಚನೆಗಳು**

- ಶಿಕ್ಷಕರ, ಮಾರ್ಗದರ್ಶಕರ ಸೂಚನೆಗಳನ್ನು ಅನುಸರಿಸಿ.
- ಚಟುವಟಿಕೆಯ ಸಂದರ್ಭದಲ್ಲಿ ಶಿಸ್ತು ಕಾಪಾಡಿ.
- ಭೇಟಿಯ ಸಮಯದಲ್ಲಿ ಅಧಿಕಾರಿಗಳಿಂದ ಪ್ರಶ್ನೆಗಳನ್ನು ಕೇಳಿ ಮತ್ತು ಮಾಹಿತಿಯನ್ನು ಸಂಗ್ರಹಿಸಿ.
- ಭೇಟಿಯ ಸಮಯದಲ್ಲಿ ಗಮನಿಸಿದ ಅಂಶಗಳು ಮತ್ತು ಮಾಹಿತಿಗಳನ್ನು ದಾಖಲಿಸಿಕೊಳ್ಳಿ.

**ವಿಧಾನ**

- ವಿದ್ಯಾರ್ಥಿಗಳಿಗೆ ಚಟುವಟಿಕೆಯ ಬಗ್ಗೆ ಮುಂಚೆಯೇ ತಿಳಿಸುವುದು
- ಚಟುವಟಿಕೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ವಿವರಿಸಿ.
- ಹತ್ತಿರದ ಬ್ಯಾಂಕಿಗೆ ಭೇಟಿ ನೀಡುವುದು.
- ಬ್ಯಾಂಕ್ ಅಧಿಕಾರಿಗಳನ್ನು ಭೇಟಿ ಮಾಡಿ, ಅವರ ಪಾತ್ರ ಮತ್ತು ಜವಾಬ್ದಾರಿಗಳನ್ನು ಚರ್ಚಿಸುವುದು
- ವಿದ್ಯಾರ್ಥಿಗಳನ್ನು ಪ್ರಶ್ನೆಗಳನ್ನು ಕೇಳಲು ಪ್ರೋತ್ಸಾಹಿಸುವುದು
- ಬ್ಯಾಂಕ್ ಖಾತೆಗಳ ವಿವಿಧ ಪ್ರಕಾರಗಳು ಮತ್ತು ಬ್ಯಾಂಕ್‌ನಲ್ಲಿ ಬಳಸುವ ನಮೂನೆಗಳ ಕುರಿತು ತಿಳಿದುಕೊಳ್ಳಿ. ಹಾಗೆಯೇ, ಬ್ಯಾಂಕ್ ಗ್ರಾಹಕರಿಗೆ ಒದಗಿಸುವ ಸೇವೆಗಳ ಕುರಿತು ತಿಳಿದುಕೊಳ್ಳುವುದು.
- ಬ್ಯಾಂಕ್‌ನ ವಿಭಿನ್ನ ವಿಭಾಗಗಳನ್ನು, ಗ್ರಾಹಕರೊಂದಿಗೆ ವ್ಯವಹರಿಸುವ ಸ್ಥಳ, ಶಾಖಾ ವ್ಯವಸ್ಥಾಪಕರ ಕಚೇರಿ, ಹಣಕಾಸು ಕೌಂಟರ್, ಲಾಕರ್ ವಿಭಾಗ ಇತ್ಯಾದಿಗಳನ್ನು ಗಮನಿಸುವುದು
- ನಗದು ಕೌಂಟರ್ ಸ್ಥಳಕ್ಕೆ ಭೇಟಿ ನೀಡಿ, ನಗದು ಸಂದಾಯ ಮತ್ತು ಹಿಂಪಡೆಯುವಿಕೆ ಹೇಗೆ ನಿರ್ವಹಿಸಲಾಗುತ್ತದೆ ಎಂಬುದನ್ನು ನೋಡುವುದು
- ಬ್ಯಾಂಕ್ ಅಧಿಕಾರಿಗಳಿಂದ, ಬ್ಯಾಂಕ್‌ನಲ್ಲಿ ಉಳಿತಾಯ ಖಾತೆ ತೆರೆಯುವ ಕ್ರಮಗಳ ಬಗ್ಗೆ ಕೇಳಿ ಮತ್ತು ಎಲ್ಲಾ ಅಂಶಗಳನ್ನು ಬರೆದುಕೊಳ್ಳುವುದು
- ಹಣದ ಮತ್ತು ಅದರ ಭದ್ರತಾ ವೈಶಿಷ್ಟ್ಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ವಿವರಿಸುವುದು
- ಮೊಬೈಲ್ ಬ್ಯಾಂಕಿಂಗ್ ಅಪ್ಲಿಕೇಶನ್ ಮತ್ತು ಆನ್‌ಲೈನ್ ಬ್ಯಾಂಕಿಂಗ್ ಸೇವೆಗಳ ಕಾರ್ಯವಿಧಾನದ ಬಗ್ಗೆ ಬ್ಯಾಂಕ್ ಅಧಿಕಾರಿಗಳೊಂದಿಗೆ ಚರ್ಚಿಸುವುದು
- ಚಟುವಟಿಕೆಯ ಸಮಯದಲ್ಲಿ ವಿದ್ಯಾರ್ಥಿಗಳು ಅವಲೋಕಿಸಿದ ಮತ್ತು ಕಲಿತ ಅಂಶಗಳ ಬಗ್ಗೆ ಚರ್ಚಿಸುವುದು.
- ವಿದ್ಯಾರ್ಥಿಗಳನ್ನು ವರದಿ ತಯಾರಿಸಲು ಪ್ರೋತ್ಸಾಹಿಸುವುದು

**ಮೌಲ್ಯಮಾಪನ**

ಪ್ರತಿಯೊಂದು ಚಟುವಟಿಕೆಗಳನ್ನು ಈ ಕೆಳಗಿನ ಮಾನದಂಡಗಳ ಮೇಲೆ ಮೌಲ್ಯಮಾಪನ ಮಾಡಬೇಕಾಗುತ್ತದೆ .

- ಆಸಕ್ತಿ
- ಪಾಲ್ಗೊಳ್ಳುವಿಕೆ
- ಗುಂಪು ಕಾರ್ಯ
- ವ್ಯಕ್ತಿನಿಷ್ಠ ಕೌಶಲ್ಯಗಳು
- ವರದಿ ತಯಾರಿಕೆ

**ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು**

ವಿದ್ಯಾರ್ಥಿ ಗಳಿಗೆ ಅವಲೋಕನ, ವಿಶ್ಲೇಷಣೆ , ವರದಿಗಳನ್ನು ಬರೆಯುವ ಕೌಶಲ್ಯಗಳನ್ನು ಅಭಿವೃದ್ಧಿ ಮಾಡುವುದರ ಮೂಲಕ ಅವರು ಭವಿಷ್ಯದಲ್ಲಿ ತಮ್ಮ ಆಸಕ್ತಿಗೆ ಅನುಗುಣವಾಗಿ ಈ ಕೆಳಗಿನ ವೃತ್ತಿಗಳನ್ನು ಅನುಸರಿಸಬಹುದು ಎಂದು ಮಕ್ಕಳಿಗೆ ವಿವರಿಸುವುದು

- ಹಣಕಾಸು ಸಲಹೆಗಾರ
- ಶಾಖಾ ವ್ಯವಸ್ಥಾಪಕ
- ತರಬೇತಿ ಅಧಿಕಾರಿ
- ಬ್ಯಾಂಕ್ ಕ್ಲರ್ಕ್
- ಗ್ರಾಹಕ ಸೇವಾ ಕಾರ್ಯನಿರ್ವಾಹಕ

**ಚಟುವಟಿಕೆ: 22**

| ಕೈಗಾರಿಕೆಗೆ ಭೇಟಿ | |
|---|---|
| ಚಟುವಟಿಕೆಯ ವಿಧ | ಹೊರಾಂಗಣ |
| ಬೇಕಾಗುವ ಅವಧಿ | 4 ಗಂಟೆಗಳು |
| ಅಭಿವೃದ್ಧಿಪಡಿಸ ಬೇಕಾದ ಕೌಶಲಗಳು | ಅವಲೋಕನ ಕೌಶಲಗಳು, ತಾಂತ್ರಿಕ ಜ್ಞಾನ, ಸುರಕ್ಷತಾ ಕೌಶಲಗಳು ಇತ್ಯಾದಿ. |



### ಕಲಿಕಾ ಫಲಗಳು

- ನಿರ್ದಿಷ್ಟ ಕೈಗಾರಿಕೆಯ ತಯಾರಿಕಾ ಅಥವಾ ಉತ್ಪಾದನಾ ಪ್ರಕ್ರಿಯೆಗಳ ಬಗ್ಗೆ ತಿಳಿದುಕೊಳ್ಳುವುದು.
- ಕಾರ್ಖಾನೆಯಲ್ಲಿ ಅಳವಡಿಸಿಕೊಂಡ ಸುರಕ್ಷತಾ ವೈಶಿಷ್ಟ್ಯಗಳನ್ನು ವಿವರಿಸುವುದು
- ಕೈಗಾರಿಕೆಯ ಪಾತ್ರ ಮತ್ತು ಮಹತ್ವವನ್ನು ವಿವರಿಸುವುದು

### ಅಗತ್ಯ ಸಾಮಾಗ್ರಿಗಳು

- ನೋಟ್ ಬುಕ್ ಮತ್ತು ಪೆನ್
- ಆರಾಮದಾಯಕ ಪಾದರಕ್ಷೆ

### ಶಿಕ್ಷಕರಿಗೆ ಸೂಚನೆಗಳು

- ಭೇಟಿಕೊಡಬೇಕಾದ ಸ್ಥಳವನ್ನು ಆಯ್ಕೆ ಮಾಡುವುದು
- ಚಟುವಟಿಕೆಗೆ ಯೋಜನೆ ರೂಪಿಸಿ ಮತ್ತು ಅಗತ್ಯವಿರುವ ಅನುಮತಿಗಳನ್ನು ಪಡೆಯುವುದು
- ಚಟುವಟಿಕೆಯ ಉದ್ದೇಶ ಮತ್ತು ಸಿದ್ಧತೆಯ ಬಗ್ಗೆ ವಿದ್ಯಾರ್ಥಿಗಳಿಗೆ ವಿವರಿಸುವುದು
- ಚಟುವಟಿಕೆಗೆ ಅಗತ್ಯವಿರುವ ಅನುದಾನ, ಕಚ್ಚಾ ಸಾಮಗ್ರಿ, ಸಾರಿಗೆ ಸಂಪರ್ಕ ಇತ್ಯಾದಿ ವ್ಯವಸ್ಥೆಗಳನ್ನು ಮಾಡುವುದು.
- ಚಟುವಟಿಕೆಯ ಉದ್ದೇಶ ಮತ್ತು ಸಿದ್ಧತೆಯ ಬಗ್ಗೆ ಪೋಷಕರಿಗೆ ಮಾಹಿತಿ ನೀಡುವುದು.
- ಕೈಗಾರಿಕೆಯ ಮಹತ್ವದ ಬಗ್ಗೆ ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಿಸುವುದು.
- ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಕೇಳಲು ಉತ್ತೇಜಿಸುವುದು.
- ಕೈಗಾರಿಕೆಯಲ್ಲಿ ನಡೆಯುವ ವಿವಿಧ ಚಟುವಟಿಕೆಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಿಸುವುದು.
- ಚಟುವಟಿಕೆಯ ವರದಿಯನ್ನು ಪ್ರಾಂಶುಪಾಲರು/ಮುಖ್ಯೋಪಾಧ್ಯಾಯರಿಗೆ ಸಲ್ಲಿಸುವುದು.

### ವಿದ್ಯಾರ್ಥಿಗಳಿಗೆ ಸೂಚನೆಗಳು

- ಶಿಕ್ಷಕರು, ಮಾರ್ಗದರ್ಶಕರು ಅಥವಾ ನಿರ್ದೇಶಕರ ಸೂಚನೆಗಳನ್ನು ಅನುಸರಿಸಿ.
- ಚಟುವಟಿಕೆಯ ಸಂದರ್ಭದಲ್ಲಿ ಶಿಸ್ತು ಕಾಪಾಡಿ.
- ಭೇಟಿ ವೇಳೆ ಅಧಿಕಾರಿಗಳು/ಮಾರ್ಗದರ್ಶಕರು/ನಿರ್ದೇಶಕರಿಗೆ ಪ್ರಶ್ನೆಗಳನ್ನು ಕೇಳಿ ಮತ್ತು ಸಂಗ್ರಹಿತ ಮಾಹಿತಿಯನ್ನು ದಾಖಲಿಸಿ.
- ಕೈಗಾರಿಕೆಯಲ್ಲಿ ಉತ್ಪಾದನೆಗೊಂಡ ವಿವಿಧ ಉತ್ಪನ್ನಗಳ ಬಗ್ಗೆ ನಿಮ್ಮ ಅವಲೋಕನಗಳನ್ನು ದಾಖಲಿಸಿ.

**ವಿಧಾನ**



- ಚಟುವಟಿಕೆಯ ಬಗ್ಗೆ ವಿದ್ಯಾರ್ಥಿಗಳಿಗೆ ಮುಂಚಿತವಾಗಿ ಮಾಹಿತಿ ನೀಡುವುದು.
- ಚಟುವಟಿಕೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ವಿವರಿಸುವುದು.
- ನಿಗದಿಪಡಿಸಿದ ಕೈಗಾರಿಕೆಗೆ ಭೇಟಿ ನೀಡುವುದು.
- ಕೈಗಾರಿಕೆಯಲ್ಲಿ ತಾಂತ್ರಿಕ ತಜ್ಞರು ಮತ್ತು ಇತರ ಉದ್ಯೋಗಿಗಳೊಂದಿಗೆ ವಿದ್ಯಾರ್ಥಿಗಳು ಸಂವಹನ ನಡೆಸಲು ಅನುವು ಮಾಡಿಕೊಡುವುದು.
- ವಿದ್ಯಾರ್ಥಿಗಳನ್ನು ಪ್ರಶ್ನೆಗಳನ್ನು ಕೇಳಲು ಉತ್ತೇಜಿಸುವುದು.
- ತಾಂತ್ರಿಕ ತಜ್ಞರನ್ನು ಅಭಿನಂದಿಸಿ ಮತ್ತು ಸೌಜನ್ಯದಿಂದ ಸಂವಹನ ನಡೆಸುವುದು.
- ಕೈಗಾರಿಕೆಯಲ್ಲಿ ಅವರು ನಿರ್ವಹಿಸುತ್ತಿರುವ ಕೆಲಸಗಳ ಬಗ್ಗೆ ತಜ್ಞರೊಂದಿಗೆ ಪ್ರಶ್ನೆ ಮಾಡಿ ತಿಳಿದುಕೊಳ್ಳುವುದು.
- ತಾಂತ್ರಿಕ ತಜ್ಞರನ್ನು ತೊಂದರೆಗೊಳಿಸದೇ ಪ್ರಕ್ರಿಯೆಯನ್ನು ಗಮನಿಸುವುದು
- ಚಟುವಟಿಕೆಯ ಸಮಯದಲ್ಲಿ ವಿದ್ಯಾರ್ಥಿಗಳು ಗಮನಿಸಿದ ಅಂಶಗಳು ಮತ್ತು ಕಲಿಕೆಯ ಬಗ್ಗೆ ಚರ್ಚಿಸುವುದು.
- ವಿದ್ಯಾರ್ಥಿಗಳನ್ನು ವರದಿ ತಯಾರಿಸಲು ಪ್ರೋತ್ಸಾಹಿಸುವುದು.

**ಮೌಲ್ಯಮಾಪನ**

ಪ್ರತಿಯೊಂದು ಚಟುವಟಿಕೆಗಳನ್ನು ಈ ಕೆಳಗಿನ ಮಾನದಂಡಗಳ ಮೇಲೆ ಮೌಲ್ಯಮಾಪನ ಮಾಡಬೇಕಾಗುತ್ತದೆ

- ಅವಲೋಕನ ಕೌಶಲಗಳು
- ಪ್ರಶ್ನಿಸುವ ಕೌಶಲಗಳು
- ಭೇಟಿಯ ಸಮಯದಲ್ಲಿ ತೋರಿಸಿದ ಆಸಕ್ತಿ
- ಗುಂಪುಕಾರ್ಯ

**ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು**

ಮಕ್ಕಳು ಈ ಅವಲೋಕನ, ವಿಶ್ಲೇಷಣೆ, ವಿವರಣೆ ಮತ್ತು ವರದಿ ಬರವಣಿಗೆಯ ಕೌಶಲಗಳನ್ನು ಅಭಿವೃದ್ಧಿಪಡಿಸುವ ಮೂಲಕ ಭವಿಷ್ಯದಲ್ಲಿ ತಮ್ಮ ಆಸಕ್ತಿಯ ಪ್ರಕಾರ ಈ ಕೆಳಗಿನ ವೃತ್ತಿಗಳನ್ನು ಆಯ್ಕೆ ಮಾಡಬಹುದು:

- ತಾಂತ್ರಿಕ ತಜ್ಞ
- ಯಂತ್ರ ನಿರ್ವಾಹಕ
- ತಾಂತ್ರಿಕ ಅಧಿಕಾರಿ
- ನಿರ್ವಾಹಕ
- ಉದ್ಯಮಿ

**ಚಟುವಟಿಕೆ 23**

| ಹೈನುಗಾರಿಕೆ / ಹಾಲು ಸಂಸ್ಕರಣೆ ಕೇಂದ್ರಕ್ಕೆ ಭೇಟಿ | |
|---|---|
| ಚಟುವಟಿಕೆಯ ವಿಧ | ಹೊರಾಂಗಣ |
| ಬೇಕಾಗುವ ಅವಧಿ | 3–4 ಗಂಟೆಗಳು |
| ಅಭಿವೃದ್ಧಿಪಡಿಸ ಬೇಕಾದ ಕೌಶಲಗಳು | ವೀಕ್ಷಣಾ ಕೌಶಲಗಳು, ಚಿಂತನಾ ಕೌಶಲಗಳು, ಸಂವಹನ ಕೌಶಲಗಳು, ಪರಸ್ಪರ ಹೊಂದಾಣಿಕೆಯ ಕೌಶಲಗಳು |



**ಕಲಿಕಾ ಫಲಗಳು:**

- ಹೈನುಗಾರಿಕೆಯ ಕಾರ್ಯ ಮತ್ತು ಚಟುವಟಿಕೆಗಳ ಬಗ್ಗೆ ಚರ್ಚಿಸುವುದು
- ಹೈನುಗಾರಿಕೆಯಲ್ಲಿ ಜಾನುವಾರುಗಳ ನಡುವಿನ ವ್ಯತ್ಯಾಸವನ್ನು ಗುರುತಿಸುವುದು ಮತ್ತು ವಿವರಿಸುವುದು.
- ಹಾಲು ಸಂಸ್ಕರಣೆ ಕೇಂದ್ರದಲ್ಲಿ ಅನುಸರಿಸಲಾದ ಪ್ರಕ್ರಿಯೆಯನ್ನು ಗುರುತಿಸುವುದು ಮತ್ತು ಚರ್ಚಿಸುವುದು.
- ಹಾಲು ಸಂಸ್ಕರಣೆ ಕೇಂದ್ರದ ಮಹತ್ವವನ್ನು ಅರ್ಥಮಾಡಿಕೊಳ್ಳುವುದು.

**ಅಗತ್ಯವಿರುವ ಸಾಮಾಗ್ರಿಗಳು**

- ನೋಟು ಪುಸ್ತಕ ಮತ್ತು ಪೆನ್
- ಆರಾಮದಾಯಕ ಪಾದರಕ್ಷೆ

**ಶಿಕ್ಷಕರಿಗೆ ಸೂಚನೆಗಳು:**

- ಭೇಟಿ ನೀಡಲು ಸ್ಥಳವನ್ನು ಆಯ್ಕೆಮಾಡುವುದು
- ಚಟುವಟಿಕೆಯ ಉದ್ದೇಶ ಮತ್ತು ತಯಾರಿಗಾಗಿ ಯೋಜನೆ ರೂಪಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವುದು.
- ಚಟುವಟಿಕೆಗೆ ಅಗತ್ಯವಿರುವ ಅನುದಾನ,ಕಚ್ಚಾ ಸಾಮಗ್ರಿಗಳು, ಸಾರಿಗೆ ಸಂಪರ್ಕ ಇತ್ಯಾದಿ ವ್ಯವಸ್ಥೆಗಳನ್ನು ಮಾಡುವುದು.
- ವಿದ್ಯಾರ್ಥಿಗಳ ಪೋಷಕರಿಗೆ/ಪಾಲಕರಿಗೆ ಚಟುವಟಿಕೆಯ ಉದ್ದೇಶ ಮತ್ತು ತಯಾರಿಗಾಗಿ ಮಾಹಿತಿ ನೀಡುವುದು.
- ಚಟುವಟಿಕೆಯ ವರದಿಯನ್ನು ಪ್ರಾಂಶುಪಾಲರಿಗೆ/ಮುಖ್ಯೋಪಾಧ್ಯಾಯರಿಗೆ ಸಲ್ಲಿಸಬೇಕು.

**ವಿದ್ಯಾರ್ಥಿಗಳಿಗೆ ಸೂಚನೆಗಳು**

- ಶಿಕ್ಷಕ, ಮಾರ್ಗದರ್ಶಕ ಅಥವಾ ಬೋಧಕರ ಸೂಚನೆಗಳನ್ನು ಅನುಸರಿಸಬೇಕು.
- ಚಟುವಟಿಕೆಯ ಸಂದರ್ಭದಲ್ಲಿ ಶಿಸ್ತು ಕಾಪಾಡಿ.
- ಚಟುವಟಿಕೆಯಲ್ಲಿ ಭೇಟಿ ವೇಳೆ ಅಧಿಕಾರಿಗಳು/ಮಾರ್ಗದರ್ಶಕರು/ನಿರ್ದೇಶಕರಿಗೆ ಪ್ರಶ್ನೆಗಳನ್ನು ಕೇಳಿ ಮತ್ತು ಸಂಗ್ರಹಿತ ಮಾಹಿತಿಯನ್ನು ದಾಖಲಿಸಿ.
- ಹೈನುಗಾರಿಕೆಯಲ್ಲಿ ಇರುವ ವಿವಿಧ ರೀತಿಯ ಜಾನುವಾರುಗಳು ಮತ್ತು ಬಳಸುವ ಪರಿಕರಗಳ ಪಟ್ಟಿ ಮಾಡುವುದು.
- ಕಾರ್ಮಿಕರಿಂದ ಹೈನುಗಾರಿಕೆಯಲ್ಲಿ ಬಳಸುವ ವಸ್ತುಗಳು, ಉಪಕರಣಗಳು, ಪ್ರಾಣಿಗಳ ಬಗ್ಗೆ ತಿಳಿಯುವುದು
- ಹಾಲು ಸಂಸ್ಕರಣೆ ಘಟಕದಲ್ಲಿ ಬಳಸುವ ಉಪಕರಣಗಳು/ಯಂತ್ರಗಳನ್ನು ಗಮನಿಸಿ.

**ವಿಧಾನ**

- ವಿದ್ಯಾರ್ಥಿಗಳಿಗೆ ಈ ಚಟುವಟಿಕೆ ಬಗ್ಗೆ ಮುಂಚಿತವಾಗಿಯೇ ಮಾಹಿತಿ ನೀಡುವುದು.
- ಈ ಚಟುವಟಿಕೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ವಿವರಿಸುವುದು.
- ಹೈನುಗಾರಿಕೆ ಅಥವಾ ಹಾಲು ಸಂಸ್ಕರಣಾ ಘಟಕಕ್ಕೆ ಭೇಟಿ ನೀಡುವುದು.
- ಹೈನುಗಾರಿಕೆ ಅಥವಾ ಹಾಲು ಸಂಸ್ಕರಣಾ ಘಟಕದ ವಿವಿಧ ಚಟುವಟಿಕೆಯನ್ನು ಗುರುತಿಸುವುದು.
- ವಿದ್ಯಾರ್ಥಿಗಳನ್ನು ಪ್ರಶ್ನೆಗಳನ್ನು ಕೇಳಲು ಪ್ರೋತ್ಸಾಹಿಸುವುದು.
- ಲಭ್ಯವಿದ್ದಲ್ಲಿ ಹಾಲಿನ ಪಾಸ್ಚುರೈಸೇಶನ್, ಪ್ಯಾಕಿಂಗ್ ಮತ್ತು ವಿತರಣಾ ಪ್ರಕ್ರಿಯೆಯನ್ನು ವೀಕ್ಷಿಸುವುದು.
- ಜನರೊಂದಿಗೆ ಸಂವಹನ ಮಾಡಿ ಮತ್ತು ಉತ್ತಮವಾಗಿ ಅರ್ಥಮಾಡಿಕೊಳ್ಳಲು ಪ್ರಶ್ನೆಗಳನ್ನು ಕೇಳುವುದು.
- ವಿದ್ಯಾರ್ಥಿಗಳೊಂದಿಗೆ ಅವರು ಗಮನಿಸಿದ ಅಂಶಗಳು ಮತ್ತು ಕಲಿತ ವಿಷಯಗಳನ್ನು ಚರ್ಚಿಸುವುದು.
- ವರದಿ ತಯಾರಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.

**ಮೌಲ್ಯಮಾಪನ**

ಪ್ರತಿಯೊಂದು ಚಟುವಟಿಕೆಗಳನ್ನು ಈ ಕೆಳಗಿನ ಮಾನದಂಡಗಳ ಮೇಲೆ ಮೌಲ್ಯಮಾಪನ ಮಾಡಬೇಕಾಗುತ್ತದೆ

- ಆಸಕ್ತಿ
- ಭಾಗವಹಿಸುವಿಕೆ
- ಅಂತರವ್ಯಕ್ತಿಗತ ಕೌಶಲಗಳು
- ವರದಿ ತಯಾರಿ
- ಪ್ರಶ್ನೆ ಕೇಳುವ ಕೌಶಲಗಳು

**ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು:**

ವೀಕ್ಷಣೆ, ವಿಶ್ಲೇಷಣೆ, ಅರ್ಥೈಸುವುದು, ವರದಿ ಬರೆಯುವ ಕೌಶಲಗಳನ್ನು ಅಭಿವೃದ್ಧಿಪಡಿಸುವ ಮೂಲಕ ಮಕ್ಕಳಿಗೆ ಭವಿಷ್ಯದಲ್ಲಿ ತಮ್ಮ ಆಸಕ್ತಿಯ ಆಧಾರದ ಮೇಲೆ ಈ ಕೆಳಗಿನ ವೃತ್ತಿಗಳನ್ನು ಆಯ್ಕೆ ಮಾಡಿಕೊಳ್ಳಬಹುದು ಎಂದು ಮಕ್ಕಳಿಗೆ ವಿವರಿಸಿವುದು

- ಹೈನುಗಾರಿಕೆ ಮೇಲ್ವಿಚಾರಕ
- ಹೈನುಗಾರಿಕೆ ರಸಾಯನಶಾಸ್ತ್ರ ತಂತ್ರಜ್ಞ
- ಹೈನುಗಾರಿಕೆ ಎಂಜಿನಿಯರಿಂಗ್ ತಂತ್ರಜ್ಞ
- ಹಾಲುಗಾರ
- ಪೋಷಣ ತಜ್ಞ
- ಹೈನುಗಾರಿಕೆ ವ್ಯವಸ್ಥಾಪಕ
- ಹೈನುಗಾರಿಕೆ)ತಂತ್ರಜ್ಞ
- ಹಾಲು ಘಟಕದ ಎಂಜಿನಿಯರ್

**ಚಟುವಟಿಕೆ: 24**

| ಕಟ್ಟಡ ನಿರ್ಮಾಣ ತಾಣಕ್ಕೆ ಭೇಟಿ | |
|---|---|
| ಚಟುವಟಿಕೆಯ ವಿಧ | ಹೊರಾಂಗಣ |
| ಬೇಕಾಗುವ ಅವಧಿ | 2 ಗಂಟೆಗಳು |
| ಅಭಿವೃದ್ಧಿಪಡಿಸ ಬೇಕಾದ ಕೌಶಲಗಳು | ವೀಕ್ಷಣಾ ಕೌಶಲಗಳು , ಆಲೋಚನಾ ಕೌಶಲಗಳು, ಅರಿವಿನ ಕೌಶಲಗಳು, ಅಂತರ ವ್ಯಕ್ತಿಗತ ಕೌಶಲಗಳು |



**ಕಲಿಕಾ ಫಲಗಳು:**

- ಕಟ್ಟಡದ ವಿಭಿನ್ನ ಭಾಗಗಳನ್ನು ಗುರುತುಮಾಡಿ ಚರ್ಚಿಸುವುದು.
- ನಿರ್ಮಾಣ ತಾಣದಲ್ಲಿ ಬಳಸುವ ವಿವಿಧ ಸಾಧನಗಳು ಮತ್ತು ಉಪಕರಣಗಳ ಬಗ್ಗೆ ವಿವರಿಸುವುದು.
- ಕಟ್ಟಡದ ನಿರ್ಮಾಣದಲ್ಲಿ ಇರುವ ವಿವಿಧ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಿಸುವುದು.
- ನಿರ್ಮಾಣ ಕಾರ್ಯದಲ್ಲಿ ತೊಡಗಿಕೊಂಡಿರುವ ವಿವಿಧ ವೃತ್ತಿಗಳ ಬಗ್ಗೆ ಚರ್ಚಿಸುವುದು.

**ಅವಶ್ಯಕ ವಸ್ತುಗಳು**

- ನೋಟ್ ಬುಕ್ ಮತ್ತು ಪೆನ್
- ಸುರಕ್ಷತಾ ಟೋಪಿ
- ಆರಾಮದಾಯಕ ಪಾದರಕ್ಷೆಗಳು

**ಶಿಕ್ಷಕರಿಗೆ ಸೂಚನೆಗಳು:**

- ಭೇಟಿ ನೀಡಬೇಕಾದ ಸ್ಥಳವನ್ನು ಆಯ್ಕೆಮಾಡುವುದು.
- ಚಟುವಟಿಕೆಗಾಗಿ ಯೋಜನೆ ರೂಪಿಸುವುದು.
- ಚಟುವಟಿಕೆಯ ಉದ್ದೇಶ ಮತ್ತು ತಯಾರಿಗಾಗಿ ವಿದ್ಯಾರ್ಥಿಗಳಿಗೆ ಮಾಹಿತಿ ನೀಡುವುದು. ಚಟುವಟಿಕೆಗೆ ಅಗತ್ಯವಿರುವ ಅನುದಾನ,ಕಚ್ಚಾ ಸಾಮಗ್ರಿ, ಸಾರಿಗೆ ಸಂಪರ್ಕ ಇತ್ಯಾದಿ ವ್ಯವಸ್ಥೆಗಳನ್ನು ಮಾಡುವುದು
- ಚಟುವಟಿಕೆಯ ಉದ್ದೇಶ ಮತ್ತು ತಯಾರಿಗಾಗಿ ಪಾಲಕರಿಗೆ ಮಾಹಿತಿ ನೀಡುವುದು.
- ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿ ವಿವಿಧ ವೃತ್ತಿಗಳನ್ನು ಅರಿಯಲು ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಿಸುವುದು.
- ಚಟುವಟಿಕೆಯ ವರದಿಯನ್ನು ಪ್ರಾಂಶುಪಾಲರಿಗೆ/ಮುಖ್ಯೋಪಾಧ್ಯಾಯರಿಗೆ ಸಲ್ಲಿಸುವುದು.

**ವಿದ್ಯಾರ್ಥಿಗಳಿಗೆ ಸೂಚನೆಗಳು:**

- ಶಿಕ್ಷಕ, ಮಾರ್ಗದರ್ಶಕ ಅಥವಾ ಸೂಚಕರ ಸೂಚನೆಗಳನ್ನು ಪಾಲಿಸು.
- ಚಟುವಟಿಕೆಯ ಸಂದರ್ಭದಲ್ಲಿ ಶಿಸ್ತು ಕಾಪಾಡಿ.
- ಅಧಿಕಾರಿಗಳು/ಮಾರ್ಗದರ್ಶಕರು/ಸೂಚಕರಿಂದ ಪ್ರಶ್ನೆಗಳನ್ನು ಕೇಳಿ ಮತ್ತು ಭೇಟಿ ಸಮಯದಲ್ಲಿ ದೊರೆತ ಮಾಹಿತಿಯನ್ನು ದಾಖಲಿಸಿಕೊಳ್ಳಿ.
- ಕಟ್ಟಡ ನಿರ್ಮಾಣ ಚಟುವಟಿಕೆಯಲ್ಲಿ ಬಳಸುವ ವಿವಿಧ ವಸ್ತುಗಳನ್ನು ದಾಖಲಿಸುವುದು.
- ಕಟ್ಟಡ ನಿರ್ಮಾಣಕ್ಕೆ ಬಳಸುವ ಪರಿಕರಗಳ ಪಟ್ಟಿ ಮಾಡುವುದು.
- ಕಟ್ಟಡ ನಿರ್ಮಾಣ ಕೆಲಸದಲ್ಲಿ ಬಳಸುವ ವಸ್ತು ಮತ್ತು ಪರಿಕರಗಳ ಬಗ್ಗೆ ಕೆಲಸಗಾರರೊಂದಿಗೆ ಸಂವಹನ ನಡೆಸಿ.

**ವಿಧಾನ**

- ವಿದ್ಯಾರ್ಥಿಗಳಿಗೆ ಚಟುವಟಿಕೆಯ ಕುರಿತು ಮುಂಚೆಯೇ ಮಾಹಿತಿ ನೀಡುವುದು.
- ಚಟುವಟಿಕೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ವಿವರಿಸುವುದು.
- ನಿಗದಿತ ತಾಣಕ್ಕೆ ಭೇಟಿ ನೀಡುವುದು.
- ವಿದ್ಯಾರ್ಥಿಗಳನ್ನು ಕಾರ್ಮಿಕರೊಂದಿಗೆ ಸಂವಹನಕ್ಕೆ ಸಜ್ಜಾಗಿಸಿ, ನಿರ್ಮಾಣಕ್ಕೆ ಬಳಸುವ ವಿವಿಧ ಕಚ್ಚಾ ವಸ್ತುಗಳ ಬಗ್ಗೆ ತಿಳಿದುಕೊಳ್ಳಲು ಸಹಾಯ ಮಾಡುವುದು.
- ವಿದ್ಯಾರ್ಥಿಗಳನ್ನು ಪ್ರಶ್ನೆಗಳು ಕೇಳಲು ಪ್ರೋತ್ಸಾಹಿಸುವುದು.
- ನಿರ್ಮಾಣ ಪ್ರಕ್ರಿಯೆಯ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು.
- ಚಟುವಟಿಕೆಯಲ್ಲಿ ವಿದ್ಯಾರ್ಥಿಗಳು ಮಾಡಿದ ವೀಕ್ಷಣೆಗಳು ಮತ್ತು ಕಲಿತ ಮಾಹಿತಿಗಳ ಬಗ್ಗೆ ಚರ್ಚೆ ಮಾಡುವುದು.
- ವಿದ್ಯಾರ್ಥಿಗಳನ್ನು ವರದಿ ತಯಾರಿಸಲು ಪ್ರೋತ್ಸಾಹಿಸುವುದು.

**ಮೌಲ್ಯಮಾಪನ**

ಪ್ರತಿಯೊಂದು ಚಟುವಟಿಕೆಗಳನ್ನು ಈ ಕೆಳಗಿನ ಮಾನದಂಡಗಳ ಮೇಲೆ ಮೌಲ್ಯಮಾಪನ ಮಾಡಬೇಕಾಗುತ್ತದೆ

- ವೀಕ್ಷಣಾ ಕೌಶಲಗಳು
- ಪ್ರಶ್ನೆ ಮಾಡುವ ಕೌಶಲಗಳು
- ಭಾಷಾ ಸಾಮರ್ಥ್ಯ
- ಸಮಯಪಾಲನೆ
- ತಂಡ ಕಾರ್ಯ

**ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು.**

ವೀಕ್ಷಣೆ, ವಿಶ್ಲೇಷಣೆ, ಅರ್ಥೈಸುವುದು, ವರದಿ ಬರೆಯುವ ಕೌಶಲಗಳನ್ನು ಅಭಿವೃದ್ಧಿಪಡಿಸುವ ಮೂಲಕ ಮಕ್ಕಳಿಗೆ ಭವಿಷ್ಯದಲ್ಲಿ ತಮ್ಮ ಆಸಕ್ತಿಯ ಆಧಾರದ ಮೇಲೆ ಈ ಕೆಳಗಿನ ವೃತ್ತಿಗಳನ್ನು ಅನುಸರಿಸಬಹುದು ಎಂದು ಮಕ್ಕಳಿಗೆ ವಿವರಿಸಿವುದು

- ವಾಸ್ತುಶಿಲ್ಪಿ
- ಕಟ್ಟಡ ಸಾಮಗ್ರಿ ಪೂರೈಕೆದಾರ
- ನಿರ್ವಹಣೆ ಏಜೆಂಟ್
- ಒಳಾಂಗಣ ವಿನ್ಯಾಸಕಾರ
- ಮೇಸ್ತ್ರಿ
- ಕೊಳಾಯಿಗಾರ
- ಮೇಲ್ವಿಚಾರಕ

**ಚಟುವಟಿಕೆ: 25**

| ತರಕಾರಿ ಮಾರುಕಟ್ಟೆಗೆ ಭೇಟಿ ಮತ್ತು ಸಮೀಕ್ಷೆ | |
|---|---|
| ಚಟುವಟಿಕೆಯ ವಿಧ | ಹೊರಾಂಗಣ |
| ಬೇಕಾಗುವ ಅವಧಿ | 2 ಗಂಟೆಗಳು |
| ಅಭಿವೃದ್ಧಿಪಡಿಸ ಬೇಕಾದ ಕೌಶಲಗಳು | ಅವಲೋಕನ ಕೌಶಲ, ತಂಡದ ಕೆಲಸ, ಪರಸ್ಪರ ಹೊಂದಾಣಿಕೆಯ ಕೌಶಲಗಳು, ಮಾರ್ಕೆಟಿಂಗ್ ಕೌಶಲಗಳು, ಗುಣಮಟ್ಟದ ಅರಿವು ಇತ್ಯಾದಿ. |



**ಕಲಿಕಾ ಫಲಗಳು**

- ಸಮಾಜದಲ್ಲಿ ತರಕಾರಿ ಮಾರುಕಟ್ಟೆಯ ಮಹತ್ವವನ್ನು ಚರ್ಚಿಸುವುದು.
- ಮಾರುಕಟ್ಟೆಯಲ್ಲಿ ಲಭ್ಯವಿರುವ ತರಕಾರಿಗಳ ವಿಭಿನ್ನ ಪ್ರಕಾರಗಳನ್ನು ಗುರುತಿಸುವುದು.
- ತರಕಾರಿಗಳ ಮಾರಾಟ ಬೆಲೆ ಬಗ್ಗೆ ಚರ್ಚಿಸುವುದು.

**ಅವಶ್ಯಕ ಸಾಮಗ್ರಿಗಳು**

- ನೋಟ್ ಬುಕ್ ಮತ್ತು ಪೆನ್
- ಕೈಚೀಲ

**ಶಿಕ್ಷಕರಿಗಾಗಿ ಸೂಚನೆಗಳು:**

- ಭೇಟಿ ನೀಡುವ ಸ್ಥಳವನ್ನು ಆಯ್ಕೆಮಾಡುವುದು.
- ಚಟುವಟಿಕೆಗೆ ಯೋಜನೆ ರೂಪಿಸುವುದು.
- ಚಟುವಟಿಕೆಯ ಉದ್ದೇಶ ಮತ್ತು ಸಿದ್ಧತೆಯ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡುವುದು.
- ಚಟುವಟಿಕೆಗೆ ಅಗತ್ಯವಿರುವ ಅನುದಾನ,ಕಚ್ಚಾ ಸಾಮಗ್ರಿ, ಸಾರಿಗೆ ಸಂಪರ್ಕ ಇತ್ಯಾದಿ ವ್ಯವಸ್ಥೆಗಳನ್ನು ಮಾಡುವುದು
- ಚಟುವಟಿಕೆಯ ಉದ್ದೇಶ ಮತ್ತು ಸಿದ್ಧತೆಯ ಬಗ್ಗೆ ಪಾಲಕರಿಗೆ ತಿಳಿಸುವುದು.
- ಪ್ಲಾಸ್ಟಿಕ್ ಬ್ಯಾಗ್ ಬಳಸುವಿಕೆಯನ್ನು ಕಡಿಮೆ ಮಾಡಲು ವಿದ್ಯಾರ್ಥಿಗಳನ್ನು ಬಟ್ಟೆ ಅಥವಾ ಮರುಬಳಕೆ ಬ್ಯಾಗ್‌ಗಳನ್ನು ಬಳಸಲು ಪ್ರೇರೇಪಿಸುವುದು.
- ಚಟುವಟಿಕೆಯ ವರದಿಯನ್ನು ಪ್ರಾಂಶುಪಾಲರಿಗೆ /ಮುಖ್ಯೋಪಾಧ್ಯಾಯರಿಗೆ ಸಲ್ಲಿಸುವುದು.

**ವಿದ್ಯಾರ್ಥಿಗಳಿಗೆ ಸೂಚನೆಗಳು:**

- ಶಿಕ್ಷಕರ ಅಥವಾ ಮಾರ್ಗದರ್ಶಕರ ಸೂಚನೆಗಳನ್ನು ಅನುಸರಿಸಿ.
- ಶಿಕ್ಷಕರಿಂದ ನೀಡಲಾದ ಮಾರ್ಗದರ್ಶನದ ಪ್ರಕಾರ ಸಿದ್ಧತೆಗಳನ್ನು ಮಾಡಿ.
- ವ್ಯಾಪಾರಸ್ಥರು/ಮಾರಾಟಗಾರರಿಂದ ಪ್ರಶ್ನೆಗಳನ್ನು ಕೇಳಿ ಮತ್ತು ಸಂದರ್ಶನದ ಸಮಯದಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ದಾಖಲಿಸು.
- ತರಕಾರಿಗಳನ್ನು ಗುರುತಿಸಿ ಮತ್ತು ಅದರ ಬಗ್ಗೆ ಚರ್ಚಿಸಿ.
- ಮಾರುಕಟ್ಟೆ ಚಟುವಟಿಕೆಗಳನ್ನು ಗಮನಿಸಿ.
- ಮಾರುಕಟ್ಟೆಯಲ್ಲಿ ಪ್ರಚಲಿತ ತರಕಾರಿಗಳ ಬೆಲೆಗಳನ್ನು ದಾಖಲಿಸು.

**ವಿಧಾನ**

- ವಿದ್ಯಾರ್ಥಿಗಳಿಗೆ ಕಾರ್ಯಚಟುವಟಿಕೆಯ ಮಹತ್ವವನ್ನು ಮುಂಚೆಯೇ ತಿಳಿಸುವುದು.
- ಚಟುವಟಿಕೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ವಿವರಿಸುವುದು.
- ನಿಗದಿತ ಮಾರುಕಟ್ಟೆ ಸ್ಥಳಕ್ಕೆ ಭೇಟಿ ನೀಡುವುದು.
- ತರಕಾರಿ ಮತ್ತು ಹಣ್ಣುಗಳ ವಿವರಗಳು ಹಾಗೂ ಬೆಲೆಗಳನ್ನು ವಿತರಕರಿಂದ ತಿಳಿದುಕೊಳ್ಳಲು ವಿದ್ಯಾರ್ಥಿಗಳಿಗೆ ಸಲಹೆ ನೀಡುವುದು.
- ತರಕಾರಿ ಮಾರಾಟಗಾರರೊಂದಿಗೆ ಸಂವಹನ ಮಾಡಲು ಮತ್ತು ಬೆಲೆಯ ವಿವರವನ್ನು ಬರೆದಿಡಲು ಪ್ರೇರೇಪಿಸುವುದು.
- ವಿದ್ಯಾರ್ಥಿಗಳನ್ನು ವರದಿಯನ್ನು ತಯಾರಿಸಲು ಪ್ರೇರೇಪಿಸುವುದು.

**ಮೌಲ್ಯಮಾಪನ**

ಪ್ರತಿಯೊಂದು ಚಟುವಟಿಕೆಗಳನ್ನು ಈ ಕೆಳಗಿನ ಮಾನದಂಡಗಳ ಮೇಲೆ ಮೌಲ್ಯಮಾಪನ ಮಾಡಬೇಕಾಗುತ್ತದೆ

- ಗುಣಮಟ್ಟ
- ಪರಸ್ಪರಹೊಂದಾಣಿಕೆಯ ಕೌಶಲಗಳು
- ಭಾಗವಹಿಸುವಿಕೆ ಮತ್ತು ಆಸಕ್ತಿ
- ಪ್ರಶ್ನಿಸುವ ಕೌಶಲಗಳು

**ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು.**

ಮಕ್ಕಳು ಈ ಅವಲೋಕನ, ವಿಶ್ಲೇಷಣೆ, ವಿವರಣೆ ಮತ್ತು ವರದಿ ಬರವಣಿಗೆಯ ಕೌಶಲಗಳನ್ನು ಅಭಿವೃದ್ಧಿಪಡಿಸುವ ಮೂಲಕ, ಭವಿಷ್ಯದಲ್ಲಿ ತಮ್ಮ ಆಸಕ್ತಿಯ ಪ್ರಕಾರ ಈ ಕೆಳಗಿನ ವೃತ್ತಿಗಳನ್ನು ಆಯ್ಕೆ ಮಾಡಬಹುದು:

- ತರಕಾರಿ ಮತ್ತು ಹಣ್ಣುಗಳ ಮಾರಾಟಗಾರ / ಪೂರೈಕೆದಾರ
- ತರಕಾರಿ ಮತ್ತು ಹಣ್ಣುಗಳ ಸಂಗ್ರಹಣಾ ಕಾರ್ಯ ನಿರ್ವಾಹಕರು
- ಗುಣಮಟ್ಟ ಪರಿಶೀಲಕರು

# ಭಾಗ-ಸಿ
# ಕಲೆ, ಸಂಸ್ಕೃತಿ ಮತ್ತು ಇತಿಹಾಸ

**ಚಟುವಟಿಕೆ: 26**

| ಬೊಂಬೆಯಾಟ | |
|---|---|
| ಚಟುವಟಿಕೆಯ ವಿಧ | ಒಳಾಂಗಣ |
| ಬೇಕಾಗುವ ಅವಧಿ | 4 ಗಂಟೆಗಳು |
| ಅಭಿವೃದ್ಧಿಪಡಿಸ ಬೇಕಾದ ಕೌಶಲಗಳು | ವೀಕ್ಷಣಾ ಕೌಶಲಗಳು<br>ಸಂವಹನ ಕೌಶಲಗಳು<br>ಪರಸ್ಪರ ಹೊಂದಾಣಿಕೆಯ ಕೌಶಲಗಳು<br>ಸೃಜನಶೀಲತೆ ಮತ್ತು ನಾವಿನ್ಯತೆ<br>ಸೌಂದರ್ಯ ಪ್ರಜ್ಞೆ<br>ಕಲ್ಪನೆಯ ಕೌಶಲಗಳು<br>ಭಾರತದ ಸ್ಥಳೀಯ ಆಟಗಳ ಜ್ಞಾನ<br>ಗುಂಪುಕಾರ್ಯ, ಸಹಯೋಗ ಮತ್ತು ಸಂಭಾಷಣೆ ಬರೆವಣಿಗೆ ಇತ್ಯಾದಿ. |



**ಕಲಿಕಾ ಫಲಗಳು**

- ಶಿಕ್ಷಣದಲ್ಲಿ ಬೊಂಬೆ ಆಟದ ಪ್ರಾಮುಖ್ಯತೆಯನ್ನು ಚರ್ಚಿಸುವುದು
- ಬೊಂಬೆಯನ್ನು ನಿರ್ವಹಿಸುವ ಕಲೆಯನ್ನು ಅನ್ವಯಿಸುವುದು

**ಅಗತ್ಯವಿರುವ ಸಾಮಗ್ರಿಗಳು**

- ಬಣ್ಣದ ಕಾಗದಗಳು
- ಅಂಟು
- ಕತ್ತರಿ
- ಐಸ್ ಕ್ರೀಮ್ ಕಡ್ಡಿಗಳು
- ಸೆಲ್ಲೋ ಟೇಪ್
- ಸ್ಕೆಚ್ ಪೆನ್ ಗಳು
- ಪೇಪರ್ ಗಳು
- ದಾರ

**ಶಿಕ್ಷಕರಿಗೆ ಸೂಚನೆಗಳು**

- ಚಟುವಟಿಕೆಯ ಯೋಜನೆಯನ್ನು ಅಭಿವೃದ್ಧಿಪಡಿಸುವುದು.
- ಚಟುವಟಿಕೆಯ ಉದ್ದೇಶ ಮತ್ತು ಸಿದ್ಧತೆಯ ಕುರಿತು ವಿದ್ಯಾರ್ಥಿಗಳಿಗೆ ಸಂಕ್ಷಿಪ್ತವಾಗಿ ತಿಳಿಸುವುದು.
- ಪಪೆಟ್‌ಗಳ ತಯಾರಿಕೆಗೆ ಅಗತ್ಯವಿರುವ ವಸ್ತುಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮುಂಚಿತವಾಗಿ ತಿಳಿಸುವುದು.
- ವಿದ್ಯಾರ್ಥಿಗಳನ್ನು ತಂಡಗಳಾಗಿ ವಿಂಗಡಿಸುವುದು.
- ಪರಿಣಿತ ಶಿಕ್ಷಕ ಅಥವಾ ಬೊಂಬೆಯ ಪರಿಣಿತರನ್ನು ಆಹ್ವಾನಿಸಿ ಮತ್ತು ಬೊಂಬೆಗಳ ತಯಾರಿಕೆಯ ಬಗ್ಗೆ ಪ್ರಾತ್ಯಕ್ಷಿಕೆ ಕೊಡಿಸುವುದು.
- ಪಪೆಟ್ ಗಳನ್ನು ತಯಾರಿಸಲು ವಿದ್ಯಾರ್ಥಿಗಳಿಗೆ ಸಹಾಯ ಮಾಡಿಸುವುದು.
- ಚಟುವಟಿಕೆಯ ವರದಿಯನ್ನು ಮುಖ್ಯೋಪಾಧ್ಯಾಯರು ಅಥವಾ ಪ್ರಾಂಶುಪಾಲರಿಗೆ ಸಲ್ಲಿಸುವುದು.

**ವಿದ್ಯಾರ್ಥಿಗಳಿಗೆ ಸೂಚನೆಗಳು**

- ಶಿಕ್ಷಕರ/ ಮಾರ್ಗದರ್ಶಕರ ಸೂಚನೆಗಳನ್ನು ಅನುಸರಿಸಿ.
- ಶಿಸ್ತು ಕಾಪಾಡಿ.
- ಭೇಟಿಯ ಸಮಯದಲ್ಲಿ, ಪ್ರಶ್ನೆಗಳನ್ನು ಕೇಳಿ ಬೋಧಕರಿಂದ ಸಂಗ್ರಹಿಸಿದ ಮಾಹಿತಿಯನ್ನು ದಾಖಲಿಸಿಕೊಳ್ಳಿ.
- ಪಪೆಟ್ ಗಳನ್ನು ತಯಾರಿಸುವ ಹಂತಗಳನ್ನು ದಾಖಲಿಸಿಕೊಳ್ಳಿ
- ಪಪೆಟ್‌ನ ಸ್ಕ್ರಿಪ್ಟ್ ಮತ್ತು ಪಾತ್ರಗಳನ್ನು ಸಿದ್ಧಪಡಿಸಿಕೊಳ್ಳಿ.

**ವಿಧಾನ**

- ಚಟುವಟಿಕೆಯ ಬಗ್ಗೆ ವಿದ್ಯಾರ್ಥಿಗಳಿಗೆ ಮುಂಚಿತವಾಗಿ ಮಾಹಿತಿ ನೀಡುವುದು.
- ಚಟುವಟಿಕೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ವಿವರಿಸುವುದು.
- ವಿದ್ಯಾರ್ಥಿಗಳ ಗುಂಪುಗಳನ್ನು ಮಾಡುವುದು.
- ಪ್ರಶ್ನೆಗಳನ್ನು ಕೇಳಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.
- ವಿದ್ಯಾರ್ಥಿಗಳು ತಂಡದಲ್ಲಿ ಸ್ವತಃ ಕಥೆಗಳನ್ನು ರಚಿಸುವುದು.
- ಕಥೆಯ ಪ್ರತಿಯೊಂದು ಪಾತ್ರದ ಪಪೆಟ್ ಗಳನ್ನು ತಯಾರಿಸಿ, ಅವುಗಳ ಸಂಭಾಷಣೆಗಳನ್ನು ರಚಿಸಿ ಪ್ರದರ್ಶಿಸುವುದು.
- ಚಟುವಟಿಕೆಯ ಸಮಯದಲ್ಲಿ ಅವರ ಅವಲೋಕನ ಮತ್ತು ಕಲಿಕೆಯ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು.
- ವರದಿಯನ್ನು ತಯಾರಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.

**ಮೌಲ್ಯಮಾಪನ**

ಪ್ರತಿಯೊಂದು ಚಟುವಟಿಕೆಗಳನ್ನು ಈ ಕೆಳಗಿನ ಮಾನದಂಡಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡುವುದು.

- ಮಾತನಾಡುವುದು/ಕಥೆ ನಿರೂಪಣೆ.
- ಸಂವಹನ ಕೌಶಲಗಳು
- ಸೃಜನಾತ್ಮಕ ಚಿಂತನೆ
- ಸೃಜನಶೀಲತೆ
- ಗುಂಪು ಚಟುವಟಿಕೆ
- ಪ್ರಸ್ತುತಿ

**ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು**

ವೀಕ್ಷಣೆ ವಿಶ್ಲೇಷಣೆ ವ್ಯಾಖ್ಯಾನ ವರದಿಗಳನ್ನು ಬರೆಯುವ ಕೌಶಲಗಳನ್ನು ಅಭಿವೃದ್ಧಿಪಡಿಸುವ ಮೂಲಕ ಅವರ ತಮ್ಮ ಆಸಕ್ತಿಗನುಗುಣವಾಗಿ ಭವಿಷ್ಯದಲ್ಲಿ ಈ ಕೆಳಗಿನ ವೃತ್ತಿಗಳನ್ನು ಅನುಸರಿಸಬಹುದು ಎಂದು ಮಕ್ಕಳಿಗೆ ವಿವರಿಸುವುದು.

- ಬೊಂಬೆಯಾಟದ ಅಥವಾ ರಂಗಭೂಮಿ ಕಲಾವಿದ
- ಸೃಜನಾತ್ಮಕ ನಿರ್ದೇಶಕ
- ಸಂಪಾದಕ
- ಕಥೆ ಹೇಳುವವರು

**ಚಟುವಟಿಕೆ: 27**

| ತ್ಯಾಜ್ಯದಿಂದ ಕಲೆ –ಬೊಂಬೆ ತಯಾರಿಕೆ | |
|---|---|
| ಚಟುವಟಿಕೆಯ ವಿಧ | ಒಳಾಂಗಣ |
| ಬೇಕಾಗುವ ಅವಧಿ | 2 ಗಂಟೆಗಳು |
| ಅಭಿವೃದ್ಧಿಪಡಿಸ ಬೇಕಾದ ಕೌಶಲಗಳು | ಸೃಜನಶೀಲತೆ ಮತ್ತು ನಾವಿನ್ಯತೆ, ಕಲ್ಪನೆಯ ಕೌಶಲಗಳು, ಸೈಕೋ ಮೋಟರ್ (ಮನೋಚಾಲನಾತ್ಮಕ) ಕೌಶಲಗಳು ಮತ್ತು ಸೌಂದರ್ಯದ ಕೌಶಲಗಳು ಇತ್ಯಾದಿ. |



**ಕಲಿಕಾ ಫಲಗಳು**

- ಗೊಂಬೆಯನ್ನು ರಚಿಸುವ ವಿವಿಧ ವಿಧಾನಗಳನ್ನು ಚರ್ಚಿಸುವುದು.
- ಪರಿಸರವನ್ನು ಅನ್ವೇಷಿಸುವುದು ಮತ್ತು ತ್ಯಾಜ್ಯದ ಬಳಕೆಯ ಕುರಿತು ಚರ್ಚಿಸುವುದು.

**ಅಗತ್ಯವಿರುವ ಸಾಮಗ್ರಿಗಳು**

- ತೆಂಗಿನಕಾಯಿ ಚಿಪ್ಪು
- ಬಣ್ಣ, ಬ್ರಶ್
- ಫೆವಿಕಲ್
- ಚಾರ್ಟ್ ಪೇಪರ್

**ಶಿಕ್ಷಕರಿಗೆ ಸೂಚನೆಗಳು**

- ಚಟುವಟಿಕೆಯ ಯೋಜನೆಯನ್ನು ಅಭಿವೃದ್ಧಿಪಡಿಸುವುದು.
- ಚಟುವಟಿಕೆಯ ಉದ್ದೇಶ ಮತ್ತು ಸಿದ್ಧತೆಯ ಬಗ್ಗೆ ವಿದ್ಯಾರ್ಥಿಗಳಿಗೆ ಸಂಕ್ಷಿಪ್ತವಾಗಿ ತಿಳಿಸುವುದು.
- ವಿದ್ಯಾರ್ಥಿಗಳ ಗುಂಪುಗಳನ್ನು ಮಾಡುವುದು.
- ತ್ಯಾಜ್ಯದಿಂದ ಉತ್ತಮವಾದದ್ದನ್ನು ಮಾಡಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.
- ಚಟುವಟಿಕೆಯ ಉದ್ದೇಶ ಮತ್ತು ಸಿದ್ಧತೆಯ ಕುರಿತು ಪೋಷಕರಿಗೆ ತಿಳಿಸುವುದು.
- ಚಟುವಟಿಕೆಯ ವರದಿಯನ್ನು ಮುಖ್ಯೋಪಾಧ್ಯಾಯರಿಗೆ ಅಥವಾ ಪ್ರಾಂಶುಪಾಲರಿಗೆ ಸಲ್ಲಿಸುವುದು.

**ವಿದ್ಯಾರ್ಥಿಗಳಿಗೆ ಸೂಚನೆಗಳು**

- ಶಿಕ್ಷಕರು ಅಥವಾ ಬೋಧಕರ ಸೂಚನೆಗಳನ್ನು ಅನುಸರಿಸಿ.
- ಚಟುವಟಿಕೆಯ ಸಂದರ್ಭದಲ್ಲಿ ಶಿಸ್ತನ್ನು ಕಾಪಾಡುವುದು.
- ಶಿಕ್ಷಕರು ನೀಡಿದ ಸಂಕ್ಷಿಪ್ತ ವಿವರದ ಪ್ರಕಾರ ಸಿದ್ಧತೆಗಳನ್ನು ಮಾಡಿಕೊಳ್ಳಿ .
- ಕಚ್ಚಾ ವಸ್ತುಗಳನ್ನು ಸಂಗ್ರಹಿಸಿ.
- ವಿವಿಧ ಕಚ್ಚಾ ವಸ್ತುಗಳು ಮತ್ತು ಉಪಕರಣಗಳ ಬಳಕೆಯ ಬಗ್ಗೆ ಚರ್ಚಿಸಿ..
- ಕಾರ್ಯವಿಧಾನದ ಪ್ರಕಾರ ಗೊಂಬೆಯನ್ನು ತಯಾರಿಸಿ.

### ವಿಧಾನ

- ಚಟುವಟಿಕೆಯ ಬಗ್ಗೆ ವಿದ್ಯಾರ್ಥಿಗಳಿಗೆ ಮುಂಚಿತವಾಗಿ ತಿಳಿಸುವುದು.
- ಚಟುವಟಿಕೆ ಮಹತ್ವವನ್ನು ವಿದ್ಯಾರ್ಥಿಗಳಿಗೆ ವಿವರಿಸುವುದು.
- ಗುಂಪುಗಳಲ್ಲಿ ಕುಳಿತುಕೊಳ್ಳಲು ವಿದ್ಯಾರ್ಥಿಗಳಿಗೆ ತಿಳಿಸುವುದು.
- ತೆಂಗಿನ ಚಿಪ್ಪಿನಲ್ಲಿನ ಮೇಲ್ಭಾಗದ ಬೇಡದ ತೆಂಗಿನ ಕಾಯಿಯ ನಾರನ್ನು ಉಜ್ಜಿಕೊಳ್ಳುವುದು
- ಚಿಪ್ಪಿಗೆ ಬಿಳಿ ಬಣ್ಣದ ಆಕ್ರಿಲಿಕ್ ಪೇಯಿಂಟ್ ಹಚ್ಚುವುದು.
- ಬೆಕ್ಕಿನ ಕಣ್ಣು, ಮೂಗು ಮತ್ತು ಕಿವಿಗಳನ್ನು ಪ್ರತಿನಿಧಿಸಲು ಕಪ್ಪು ಚಾರ್ಟ್ ಅನ್ನು ವಿವಿಧ ಆಕಾರಗಳಲ್ಲಿ ಕತ್ತರಿಸುವುದು.
- ಚಟುವಟಿಕೆ ಸಮಯದಲ್ಲಿ ಅವರ ಅವಲೋಕನ ಮತ್ತು ಕಲಿಕೆಯ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು.
- ವರದಿಯನ್ನು ತಯಾರಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.

### ಮೌಲ್ಯಮಾಪನ

ಪ್ರತಿಯೊಂದು ಚಟುವಟಿಕೆಯನ್ನು ಈ ಕೆಳಗಿನ ಮಾನದಂಡಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡುವುದು.

- ತ್ಯಾಜ್ಯ ವಸ್ತುಗಳ ಬಳಕೆಯ ಬಗ್ಗೆ ಅರ್ಥ ಮಾಡಿಕೊಳ್ಳುವುದು ಮತ್ತು ಅನ್ವೇಷಿಸುವುದು
- ಸೃಜನಶೀಲತೆ
- ಗುಂಪು ಚಟುವಟಿಕೆ
- ಸ್ವಚ್ಛತೆ
- ಕತ್ತರಿಸುವ ಕೌಶಲಗಳು
- ಕರಕುಶಲತೆ
- ಪ್ರಸ್ತುತಿ

### ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು

ವೀಕ್ಷಣೆ, ವಿಶ್ಲೇಷಣೆ, ವ್ಯಾಖ್ಯಾನ ವರದಿಗಳನ್ನು ಬರೆಯುವ ಕೌಶಲಗಳನ್ನು ಅಭಿವೃದ್ಧಿ ಪಡಿಸುವ ಮೂಲಕ ಅವರು ತಮ್ಮ ಆಸಕ್ತಿಗೆ ಅನುಗುಣವಾಗಿ ಭವಿಷ್ಯದಲ್ಲಿ ಈ ಕೆಳಗಿನ ವೃತ್ತಿಗಳನ್ನು ಅನುಸರಿಸಬಹುದು ಎಂದು ಮಕ್ಕಳಿಗೆ ವಿವರಿಸುವುದು.

- ಬೊಂಬೆ ವಿನ್ಯಾಸಕ
- ಕಲಾವಿದ
- ಬೊಂಬೆ ತಯಾರಕ

**ಚಟುವಟಿಕೆ: 28**

| ಗೀಚುವುದು (ಡೂಡ್ಲಿಂಗ್) | |
|---|---|
| ಚಟುವಟಿಕೆಯ ವಿಧ | ಒಳಾಂಗಣ/ಹೊರಾಂಗಣ |
| ಬೇಕಾಗುವ ಅವಧಿ | 2 ಗಂಟೆಗಳು |
| ಅಭಿವೃದ್ಧಿಪಡಿಸ ಬೇಕಾದ ಕೌಶಲಗಳು | ಸೈಕೋ ಮೋಟಾರ್ (ಮನೋಚಾಲನಾತ್ಮಕ) ಕೌಶಲಗಳು, ಕಲ್ಪನೆಯ ಕೌಶಲಗಳು ಮತ್ತು ಚಿತ್ರಿಸಿಕೊಳ್ಳುವ ಹಾಗೂ ಅನುಪಯುಕ್ತ ಜಾಗವನ್ನು ಸದ್ಬಳಕೆ ಮಾಡಿಕೊಳ್ಳುವ ಕೌಶಲ, ಇತ್ಯಾದಿ |



**ಕಲಿಕಾಫಲಗಳು**

- ಗೀಚುವುದರಿಂದ (ಡೂಡ್ಲಿಂಗ್), ಏನನ್ನಾದರೂ ರಚಿಸಲು ಆಲೋಚನೆಗಳನ್ನು ಆಯೋಜಿಸುವುದು
- ರಚಿಸಿದ ಡೂಡಲನ್ನು ಪ್ರಸ್ತುತಪಡಿಸುವುದು

**ಅಗತ್ಯ ಸಾಮಗ್ರಿಗಳು**

- ಪೆನ್ಸಿಲ್ ಗಳು
- ಬಣ್ಣದ ಪೆನ್ನುಗಳು
- ಪೇಪರ್ ಗಳು
- ಕಂಪ್ಯೂಟರ್ (ಅಗತ್ಯವಿದ್ದರೆ)

**ಶಿಕ್ಷಕರಿಗೆ ಸೂಚನೆಗಳು**

- ಚಟುವಟಿಕೆಯ ಯೋಜನೆಯನ್ನು ಅಭಿವೃದ್ಧಿಪಡಿಸುವುದು.
- ಚಟುವಟಿಕೆಯ ಉದ್ದೇಶ ಮತ್ತು ಸಿದ್ಧತೆಯ ಬಗೆಗೆ ವಿದ್ಯಾರ್ಥಿಗಳಿಗೆ ಸಂಕ್ಷಿಪ್ತವಾಗಿ ವಿವರಿಸುವುದು.
- ಡೂಡ್ಲಿಂಗ್ (ಗೀಜುವಿಕೆ) ನ ಪರಿಕಲ್ಪನೆಯನ್ನು ವಿವರಿಸುವುದು.
- ಪರಿಕಲ್ಪನೆಯ ಕುರಿತು ಮಾಹಿತಿಯನ್ನು ಯೋಚಿಸಲು ಮತ್ತು ಪ್ರಕ್ರಿಯೆಗೊಳಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.
- ಕರಕುಶಲ ಕಾರ್ಯಕ್ಕೆ ಬೇಕಾದ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಳ್ಳಲು ವಿದ್ಯಾರ್ಥಿಗಳನ್ನು ಪ್ರೇರೇಪಿಸುವುದು.
- ಚಿತ್ರಕಲೆ ಮತ್ತು ವಿನ್ಯಾಸದ ವಿಧಾನಗಳು ಹೇಗೆ ಅತ್ಯುತ್ತಮ ದೃಶ್ಯಗಳನ್ನು ರಚಿಸಲು ಉತ್ತಮ ಮಾರ್ಗವಾಗಿದೆ ಎಂಬುದನ್ನು ಚರ್ಚಿಸುವುದು.
- ಚಟುವಟಿಕೆಯ ವರದಿಯನ್ನು ಪ್ರಾಂಶುಪಾಲರು ಅಥವಾ ಮುಖ್ಯೋಪಾಧ್ಯಾಯರಿಗೆ ಸಲ್ಲಿಸುವುದು .

**ವಿದ್ಯಾರ್ಥಿಗಳಿಗೆ ಸೂಚನೆಗಳು**

- ಶಿಕ್ಷಕರ ಸೂಚನೆಗಳನ್ನು ಅನುಸರಿಸಿ
- ಶಿಸ್ತು ಕಾಪಾಡಿ
- ಭೇಟಿಯ ಸಮಯದಲ್ಲಿ, ಪ್ರಶ್ನೆಗಳನ್ನು ಕೇಳಿ ಬೋಧಕರಿಂದ ಸಂಗ್ರಹಿಸಿದ ಮಾಹಿತಿಯನ್ನು ದಾಖಲಿಸಿಕೊಳ್ಳಿ.
- ಶಿಕ್ಷಕರು ನೀಡಿದ ಸಂಕ್ಷಿಪ್ತ ವಿವರಗಳ ಪ್ರಕಾರ ಸಿದ್ಧತೆಗಳನ್ನು ಮಾಡಿಕೊಳ್ಳಿ
- ನಿಮ್ಮ ಸೃಜನಶೀಲ ಕೌಶಲಗಳನ್ನು ಅಭಿವೃದ್ಧಿಪಡಿಸಿಕೊಳ್ಳಿ
- ಡೂಡಲ್‌ಗಳನ್ನು ತಯಾರಿಸಿ

**ವಿಧಾನ**

- ಚಟುವಟಿಕೆಯ ಬಗ್ಗೆ ವಿದ್ಯಾರ್ಥಿಗಳಿಗೆ ಮುಂಚಿತವಾಗಿ ತಿಳಿಸುವುದು.
- ಚಟುವಟಿಕೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ವಿವರಿಸುವುದು.
- ವಿದ್ಯಾರ್ಥಿಗಳು ಗುಂಪಿನಲ್ಲಿ ಕುಳಿತುಕೊಳ್ಳಲು ಹೇಳುವುದು.
- ಅಗತ್ಯವಿರುವ ಸಾಮಗ್ರಿಗಳನ್ನು ಆಯೋಜಿಸುವುದು.
- ಪ್ರಶ್ನೆಗಳನ್ನು ಕೇಳಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.
- ಡೂಡ್ಲಿಂಗ್ ಪ್ರಕ್ರಿಯೆಯನ್ನು ವೃತ್ತಗಳು ಚೌಕಗಳು ಮತ್ತು ತ್ರಿಕೋನದಂತಹ ಸರಳ ಆಕಾರಗಳೊಂದಿಗೆ ಪ್ರಾರಂಭಿಸುವುದು.
- ಮೂಲ ಮಾದರಿಗಳನ್ನು ಅಭ್ಯಾಸ ಮಾಡಿಸುವುದು (ಉದಾ. ಗೆರೆಗಳು, ಚುಕ್ಕಿಗಳು, ಜಿಗ್ ಜಾಗ್).
- ಡೂಡಲ್ ಗಳನ್ನು ಕಲ್ಪಿಸಿಕೊಳ್ಳಲು ತರಗತಿ ಅಥವಾ ಅಂತರ್ಜಾಲದ ಮೂಲಕ ದೊರೆಯುವ ಉದಾಹರಣೆಗಳ ಅಥವಾ ಮಾದರಿಗಳ ಸಹಾಯ ಪಡೆದುಕೊಳ್ಳುವುದು.
- ಸಣ್ಣ ಸರಳ ವಿನ್ಯಾಸಗಳೊಂದಿಗೆ ಪ್ರಾರಂಭಿಸಿ ಕ್ರಮೇಣ ಹೆಚ್ಚಿನ ವಿವರಗಳನ್ನು ಮತ್ತು ಸಂಕೀರ್ಣತೆಯನ್ನು ಸೇರಿಸುವುದು.
- ಅನನ್ಯ ವಿನ್ಯಾಸಗಳನ್ನು ಅನ್ವೇಷಿಸುವುದು ಮತ್ತು ರಚಿಸುವುದು.
- ರಚಿಸಿದ ಡೂಡಲ್ ಗಳನ್ನು ಹಂಚಿಕೊಳ್ಳುವುದು ಮತ್ತು ತಂತ್ರಗಳನ್ನು ಚರ್ಚಿಸುವುದು.
- ಚಟುವಟಿಕೆಯ ಸಮಯದಲ್ಲಿ ಅವರ ಅವಲೋಕನ ಮತ್ತು ಕಲಿಕೆಯ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು
- ವಿದ್ಯಾರ್ಥಿಗಳು ತಾವು ಗಮನಿಸಿದ ಅಂಶಗಳನ್ನು ಚರ್ಚಿಸುವುದು ಮತ್ತು ವರದಿಯನ್ನು ತಯಾರಿಸಲು ಪ್ರೋತ್ಸಾಹಿಸುವುದು.
- ಚಟುವಟಿಕೆಯ ಸಮಯದಲ್ಲಿ ಅವರ ಆಲೋಚನೆಗಳು ಅವಲೋಕನ ಮತ್ತು ಕಲಿಕೆಯ ಬಗ್ಗೆ ವಿದ್ಯಾರ್ಥಿಗಳಲ್ಲಿ ಚರ್ಚಿಸುವುದು.
- ವರದಿಯನ್ನು ತಯಾರಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.

**ಮೌಲ್ಯಮಾಪನ**

ಪ್ರತಿಯೊಂದು ಚಟುವಟಿಕೆಯನ್ನು ಈ ಕೆಳಗಿನ ಮಾನದಂಡಗಳ ಮೇಲೆ ಮೌಲ್ಯಮಾಪನ ಮಾಡುವುದು.

- ಸೃಜನಶೀಲತೆ
- ಗುಂಪು ಚಟುವಟಿಕೆ
- ಪ್ರಸ್ತುತಿ ಕೌಶಲಗಳು
- ಕಲ್ಪನೆಯ ಕೌಶಲಗಳು
- ಚಿತ್ರಿಸಿಕೊಳ್ಳುವ ಹಾಗೂ ಅನುಪಯುಕ್ತ ಜಾಗವನ್ನು ಸದ್ಬಳಕೆ ಮಾಡಿಕೊಳ್ಳುವ ಕೌಶಲ

**ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು**

ವೀಕ್ಷಣೆ ವಿಶ್ಲೇಷಣೆ ವ್ಯಾಖ್ಯಾನ ವರದಿಗಳನ್ನು ಬರೆಯುವ ಕೌಶಲಗಳನ್ನು ಅಭಿವೃದ್ಧಿಪಡಿಸುವ ಮೂಲಕ ಅವರ ತಮ್ಮ ಶಕ್ತಿಗೆ ಅನುಗುಣವಾಗಿ ಭವಿಷ್ಯದಲ್ಲಿ ಈ ಕೆಳಗಿನ ವೃತ್ತಿಗಳನ್ನು ಅನುಸರಿಸಬಹುದು ಎಂದು ಮಕ್ಕಳಿಗೆ ವಿವರಿಸುವುದು.

- ಸೃಜನಶೀಲ ನಿರ್ದೇಶಕ
- ಕಥೆಗಾರ
- ಗ್ರಾಫಿಕ್ ಡಿಸೈನರ್

**ಚಟುವಟಿಕೆ: 29**

| ಗಾಳಿಪಟ ತಯಾರಿಕೆ ಮತ್ತು ಹಾರಾಟ | |
|---|---|
| ಚಟುವಟಿಕೆಯ ವಿಧ | ಒಳಾಂಗಣ/ಹೊರಾಂಗಣ |
| ಬೇಕಾಗುವ ಅವಧಿ | 2 ಗಂಟೆಗಳು |
| ಅಭಿವೃದ್ಧಿಪಡಿಸ ಬೇಕಾದ ಕೌಶಲಗಳು | ವೀಕ್ಷಣೆ ಕೌಶಲಗಳು, ಸೃಜನಶೀಲತೆ, ಕಲ್ಪನೆಯ ಕೌಶಲಗಳು, ಗುಂಪು ಕಾರ್ಯ, ಸಹಕಾರ ಮತ್ತು ವಿನೋದಕ್ಕಾಗಿ ವಿಜ್ಞಾನ ಕೌಶಲದ ಅನ್ವಯ |



**ಕಲಿಕಾ ಫಲಗಳು**

- ಗಾಳಿಪಟದ ಕಲ್ಪನೆ ಮೂಡಿಸುವುದು ಮತ್ತು ವಿನ್ಯಾಸಗೊಳಿಸಿಕೊಳ್ಳುವುದು.
- ಚರ್ಚಿಸಿ ಗಾಳಿಪಟ ಮಾಡುವುದು.
- ಗಾಳಿಪಟವನ್ನು ಅಲಂಕರಿಸುವುದು.
- ಪರಸ್ಪರ ಸಹಕಾರದೊಂದಿಗೆ ಗಾಳಿಪಟವನ್ನು ಹಾರಿಸುವುದು.

**ಅಗತ್ಯವಿರುವ ಸಾಮಗ್ರಿಗಳು**

- ಬಣ್ಣದ ಕಾಗದಗಳು
- ಪೆನ್
- ಮರದ ತುಂಡುಗಳು
- ದಾರ
- ಅಂಟು

**ಶಿಕ್ಷಕರಿಗೆ ಸೂಚನೆಗಳು**

- ಚಟುವಟಿಕೆಯ ಯೋಜನೆಯನ್ನು ಅಭಿವೃದ್ಧಿಪಡಿಸಿ ಚಟುವಟಿಕೆಯ ಉದ್ದೇಶ ಮತ್ತು ಸಿದ್ಧತೆಯ ಬಗ್ಗೆ ವಿದ್ಯಾರ್ಥಿಗಳಿಗೆ ಸಂಕ್ಷಿಪ್ತವಾಗಿ ತಿಳಿಸುವುದು.
- ಗಾಳಿಪಟ ತಯಾರಿಸುವ ಹಂತಗಳನ್ನು ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು
- ಸುಂದರವಾದ ಗಾಳಿಪಟವನ್ನು ರಚಿಸಲು ವಿದ್ಯಾರ್ಥಿಗಳಿಗೆ ಸಹಾಯ ಮಾಡುವುದು.
- ವಿದ್ಯಾರ್ಥಿಗಳ ಜೀವನದ ಆಸೆಯ ಬಗ್ಗೆ ಯೋಚಿಸಲು ಮತ್ತು ಗಾಳಿಪಟದಲ್ಲಿ ಅದನ್ನು ಬರೆಯಲು ಅವರನ್ನು ಪ್ರೋತ್ಸಾಹಿಸುವುದು
- ವಿದ್ಯಾರ್ಥಿಗಳನ್ನು ಹೊರಗೆ ಕರೆದುಕೊಂಡು ಹೋಗಿ ಗಾಳಿಪಟ ಹಾರಿಸುವುದು
- ಚಟುವಟಿಕೆಯ ವರದಿಯನ್ನು ಪ್ರಾಂಶುಪಾಲರು ಅಥವಾ ಮುಖ್ಯೋಪಾಧ್ಯಾಯರಿಗೆ ಸಲ್ಲಿಸುವುದು

**ವಿದ್ಯಾರ್ಥಿಗಳಿಗೆ ಸೂಚನೆಗಳು**

- ಶಿಕ್ಷಕ ಅಥವಾ ಬೋಧಕರ ಸೂಚನೆಗಳನ್ನು ಅನುಸರಿಸಿ
- ಶಿಸ್ತು ಕಾಪಾಡಿ
- ಬೋಧಕರಿಂದ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯಿರಿ ಮತ್ತು ಭೇಟಿಯ ಸಮಯದಲ್ಲಿ ಮಾಹಿತಿ ಸಂಗ್ರಹಿಸಿ
- ಶಿಕ್ಷಕರು ನೀಡಿದ ಸಂಕ್ಷಿಪ್ತ ವಿವರಗಳ ಪ್ರಕಾರ ಸಿದ್ಧತೆಗಳನ್ನು ಮಾಡಿ
- ಕಚ್ಚಾ ವಸ್ತುಗಳನ್ನು ಸಂಗ್ರಹಿಸಿ

- ವಿವಿಧ ಕಚ್ಚಾ ವಸ್ತುಗಳು ಮತ್ತು ಉಪಕರಣಗಳ ಬಳಕೆಯ ಬಗ್ಗೆ ಚರ್ಚಿಸಿ
- ಕಾರ್ಯವಿಧಾನದ ಪ್ರಕಾರ ಗಾಳಿಪಟವನ್ನು ತಯಾರಿಸಿ

**ವಿಧಾನ**

- ಚಟುವಟಿಕೆಯ ಬಗ್ಗೆ ವಿದ್ಯಾರ್ಥಿಗಳಿಗೆ ಮುಂಚಿತವಾಗಿ ತಿಳಿಸುವುದು.
- ಚಟುವಟಿಕೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ವಿವರಿಸುವುದು.
- ಎಲ್ಲಾ ಅಲಂಕಾರಿಕ ವಸ್ತುಗಳನ್ನು ಬಳಸಿ ಗಾಳಿಪಟವನ್ನು ತಯಾರಿಸಿ ಅದರ ಮೇಲೆ ಶುಭ ಹಾರೈಕೆ ಅಥವಾ ಸಂಕಲ್ಪ ವಾಖ್ಯೆಯನ್ನು ಬರೆಯುವುದು.
- ಪ್ರಶ್ನೆಗಳನ್ನು ಕೇಳಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.
- ಸಹಪಾಠಿಗಳ ಮುಂದೆ ಹಾರೈಕೆ ಅಥವಾ ಸಂಕಲ್ಪವನ್ನು ಓದಿ, ಗಾಳಿಪಟ ಹಾರಾಟಕ್ಕೆ ಹೊರಾಂಗಣಕ್ಕೆ ಹೋಗುವುದು.
- ಚಟುವಟಿಕೆಯ ಸಮಯದಲ್ಲಿ ಅವರ ಅವಲೋಕನ ಮತ್ತು ಕಲಿಕೆಯ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು.
- ವರದಿಯನ್ನು ತಯಾರಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.

**ಮೌಲ್ಯಮಾಪನ**

ಪ್ರತಿಯೊಂದು ಚಟುವಟಿಕೆಯನ್ನು ಈ ಕೆಳಗಿನ ಮಾನದಂಡಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡುವುದು.

- ಸೃಜನಶೀಲತೆ
- ಭಾಗವಹಿಸುವಿಕೆ
- ಅಂತರ್ ವ್ಯಕ್ತಿ ಕೌಶಲಗಳು
- ಮಾಡಿಕಲಿ ಚಟುವಟಿಕೆಯ ಕೌಶಲಗಳು
- ಬರವಣಿಗೆಯ ಕೌಶಲಗಳು

**ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು**

ವೀಕ್ಷಣೆ, ವಿಶ್ಲೇಷಣೆ ವ್ಯಾಖ್ಯಾನ ವರದಿಗಳನ್ನು ಬರೆಯುವುದು– ಈ ಕೌಶಲಗಳನ್ನು ಅಭಿವೃದ್ಧಿಪಡಿಸುವ ಮೂಲಕ ಅವರು ತಮ್ಮ ಆಸಕ್ತಿಗೆ ಅನುಗುಣವಾಗಿ ಭವಿಷ್ಯದಲ್ಲಿ ಈ ಕೆಳಗಿನ ವೃತ್ತಿಗಳನ್ನು ಅನುಸರಿಸಬಹುದು ಎಂದು ವಿದ್ಯಾರ್ಥಿಗಳಿಗೆ ವಿವರಿಸುವುದು.

- ಗಾಳಿಪಟ ತಯಾರಕರು
- ಗಾಳಿಪಟ ವಿನ್ಯಾಸಕಾರ
- ಕಚ್ಚಾ ವಸ್ತುಗಳ ಪೂರೈಕೆಗಾರ ಮತ್ತು ಮಾರಾಟಗಾರ
- ಅಂತರಾಷ್ಟ್ರೀಯ ಗಾಳಿಪಟ ಉತ್ಸವದ ಆಯೋಜಕರು
- ಇವೆಂಟ್ ಆಯೋಜಕರು
- ಉಪಚಾರ ವ್ಯವಸ್ಥಾಪಕ (ಹಾಸ್ಪಿಟಲಿಟಿ ಮ್ಯಾನೇಜರ್)

**ಚಟುವಟಿಕೆ: 30**

| ಪುಸ್ತಕ ಮೇಳವನ್ನು ಆಯೋಜಿಸುವುದು | |
|---|---|
| ಚಟುವಟಿಕೆಯ ವಿಧ | ಒಳಾಂಗಣ |
| ಬೇಕಾಗುವ ಅವಧಿ | 3 ಗಂಟೆಗಳು |
| ಅಭಿವೃದ್ಧಿಪಡಿಸ ಬೇಕಾದ ಕೌಶಲಗಳು | ವೀಕ್ಷಣೆ ಕೌಶಲಗಳು, ಸಾಂಸ್ಕೃತಿಕ ಕೌಶಲಗಳು, ವಿಮರ್ಶಾತ್ಮಕ ಚಿಂತನೆಯ ಕೌಶಲಗಳು, ಸಂವಹನ ಕೌಶಲಗಳು, ಸಾಹಿತ್ಯ ಕೌಶಲಗಳು, ತಂಡದಲ್ಲಿ ಕೆಲಸ ಮಾಡುವ ಕೌಶಲ, ಇತ್ಯಾದಿ. |



**ಕಲಿಕಾ ಫಲಗಳು**

- ಪುಸ್ತಕ ಮೇಳವನ್ನು ಆಯೋಜಿಸಲು ಕಲಿಯುವುದು
- ವಿವಿಧ ವಿಷಯಗಳಲ್ಲಿ ವಿವಿಧ ರೀತಿಯ ಪುಸ್ತಕಗಳನ್ನು ಹುಡುಕುವುದು

**ಅಗತ್ಯವಿರುವ ಸಾಮಗ್ರಿಗಳು**

- ಪುಸ್ತಕಗಳು ಮತ್ತು ಕಪಾಟುಗಳು
- ಅಲ್ಮೆರ
- ಭಿತ್ತಿಪತ್ರಗಳು

**ಶಿಕ್ಷಕರಿಗೆ ಸೂಚನೆಗಳು**

- ಚಟುವಟಿಕೆಯ ಯೋಜನೆಯನ್ನು ಅಭಿವೃದ್ಧಿಪಡಿಸುವುದು.
- ಚಟುವಟಿಕೆಯ ಉದ್ದೇಶ ಮತ್ತು ಸಿದ್ಧತೆ ಬಗ್ಗೆ ವಿದ್ಯಾರ್ಥಿಗಳಿಗೆ ಸಂಕ್ಷಿಪ್ತವಾಗಿ ತಿಳಿಸುವುದು.
- ಪುಸ್ತಕ ಮೇಳದ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು.
- ಲಭ್ಯವಿರುವ ವಿವಿಧ ಪ್ರಕಾರದ ಪುಸ್ತಕಗಳ ಬಗ್ಗೆ ಮಾಹಿತಿಯನ್ನು ಹಂಚಿಕೊಳ್ಳುವುದು.
- ಪುಸ್ತಕ ಮೇಳಕ್ಕೆ ಬಳಸುವ ವಿವಿಧ ಸಂಪನ್ಮೂಲಗಳನ್ನು ಸಂಗ್ರಹಿಸಲು ವಿದ್ಯಾರ್ಥಿಗಳಿಗೆ ತಿಳಿಸುವುದು.
- ವಿದ್ಯಾರ್ಥಿಗಳನ್ನು ಅತ್ಯುತ್ತಮ ಸಾಧನೆ ಮಾಡಲು ಪ್ರೋತ್ಸಾಹಿಸುವುದು.
- ವರದಿಯನ್ನು ಪ್ರಾಂಶುಪಾಲರು ಅಥವಾ ಮುಖ್ಯೋಪಾಧ್ಯಾಯರಿಗೆ ಸಲ್ಲಿಸುವುದು.

**ವಿದ್ಯಾರ್ಥಿಗಳಿಗೆ ಸೂಚನೆಗಳು**

- ಶಿಕ್ಷಕರ ಸೂಚನೆಗಳನ್ನು ಅನುಸರಿಸಿ ತರಗತಿಯಲ್ಲಿ ಶಿಸ್ತು ಕಾಪಾಡಿ.
- ಶಿಕ್ಷಕರು ನೀಡಿದ ಸಂಕ್ಷಿಪ್ತ ವಿವರದ ಪ್ರಕಾರ ಸಿದ್ಧತೆಗಳನ್ನು ಮಾಡಿಕೊಳ್ಳಿ.
- ವಿವಿಧ ಪುಸ್ತಕಗಳ ಬಳಕೆಯ ಬಗ್ಗೆ ಚರ್ಚಿಸಿ
- ಪುಸ್ತಕ ಮೇಳವನ್ನು ಆಯೋಜಿಸಿ, ಎಲ್ಲಾ ವಿದ್ಯಾರ್ಥಿಗಳು ಮತ್ತು ಶಿಕ್ಷಕರನ್ನು ಆಹ್ವಾನಿಸಿ.
- ಪುಸ್ತಕಗಳನ್ನು ಸಂಗ್ರಹಿಸಿ.
- ಚಟುವಟಿಕೆಯ ಸಮಯದಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ದಾಖಲಿಸಿಕೊಳ್ಳಿ.

**ವಿಧಾನ**

- ಚಟುವಟಿಕೆಯ ಬಗ್ಗೆ ವಿದ್ಯಾರ್ಥಿಗಳಿಗೆ ಮುಂಚಿತವಾಗಿ ತಿಳಿಸುವುದು.
- ಚಟುವಟಿಕೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ವಿವರಿಸುವುದು.
- ಪುಸ್ತಕ ಮೇಳಕ್ಕಾಗಿ ವಿವಿಧ ರೀತಿಯ ಪುಸ್ತಕಗಳನ್ನು ಆಯ್ಕೆ ಮಾಡುವುದು.
- ಶಾಲೆಯಲ್ಲಿ ಪುಸ್ತಕ ಪ್ರದರ್ಶನ ಮಾಡಲು, ಪುಸ್ತಕಗಳನ್ನು ಸಂಗ್ರಹಿಸುವ ವ್ಯವಸ್ಥೆ ಮಾಡುವುದು.
- ವಿವಿಧ ವಿಷಯಗಳ ಪ್ರಕಾರ ಪುಸ್ತಕಗಳ ಭಿತ್ತಿ ಪತ್ರ ಗಳನ್ನ ತಯಾರಿಸುವುದು.
- ಪುಸ್ತಕದ ಪ್ರಮುಖ ವೈಶಿಷ್ಟ್ಯಗಳನ್ನು ಓದಿ ವಿವರಿಸುವುದು.
- ಚಟುವಟಿಕೆಯ ಸಮಯದಲ್ಲಿ ವಿದ್ಯಾರ್ಥಿಗಳೊಂದಿಗೆ ಅವರ ಅವಲೋಕನ ಮತ್ತು ಕಲಿಕೆಯ ಬಗ್ಗೆ ಚರ್ಚಿಸುವುದು.
- ವರದಿಯನ್ನು ತಯಾರಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.

**ಮೌಲ್ಯಮಾಪನ**

ಪ್ರತಿಯೊಂದು ಚಟುವಟಿಕೆಯನ್ನು ಈ ಕೆಳಗಿನ ಮಾನದಂಡಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡುವುದು.

- ಸೃಜನಶೀಲತೆ
- ಗುಂಪು ಚಟುವಟಿಕೆ
- ಸಂಘಟನಾ ಕೌಶಲಗಳು
- ಸಂವಹನ ಕೌಶಲಗಳು

**ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು**

ವೀಕ್ಷಣೆ ವಿಶ್ಲೇಷಣೆ ವ್ಯಾಖ್ಯಾನ ವರದಿಗಳನ್ನು ಬರೆಯುವ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವ ಮೂಲಕ ಅವರ ತಮ್ಮ ಶಕ್ತಿಗೆ ಅನುಗುಣವಾಗಿ ಭವಿಷ್ಯದಲ್ಲಿ ಈ ಕೆಳಗಿನ ವೃತ್ತಿಗಳನ್ನು ಅನುಸರಿಸಬಹುದು ಎಂದು ಮಕ್ಕಳಿಗೆ ವಿವರಿಸುವುದು.

- ಗ್ರಂಥಪಾಲಕರು
- ಪುಸ್ತಕದ ಅಂಗಡಿಯ ಮಾಲೀಕರು
- ಪ್ರಕಾಶಕರು
- ಪುಸ್ತಕ ಮೇಳದ ಆಯೋಜಕರು

**ಚಟುವಟಿಕೆ: 31**

| ನೃತ್ಯ ನಾಟಕ ಮತ್ತು ಮೈಮ್ಸ್ (ಮೂಕಾಭಿನಯ) | |
|---|---|
| ಚಟುವಟಿಕೆಯ ವಿಧ | ಒಳಾಂಗಣ |
| ಬೇಕಾಗುವ ಅವಧಿ | 4 ಗಂಟೆಗಳು |
| ಅಭಿವೃದ್ಧಿಪಡಿಸ ಬೇಕಾದ ಕೌಶಲಗಳು | ಕಲ್ಪನೆ ಮತ್ತು ವಿನ್ಯಾಸದ ಕೌಶಲಗಳು, ಸಂವಹನ ಕೌಶಲಗಳು, ಗುಂಪು ಚಟುವಟಿಕೆ ಮತ್ತು ಸಹಯೋಗ, ಸ್ಕ್ರಿಪ್ಟ್ ಬರವಣಿಗೆ ಮತ್ತು ನಟನಾ ಕೌಶಲಗಳು ಇತ್ಯಾದಿ |



**ಕಲಿಕಾ ಫಲಗಳು**

- ಸ್ಕ್ರಿಪ್ಟ್ ತಯಾರಿಸುವುದು.
- ಅಭಿವೃದ್ಧಿಪಡಿಸಿದ ಸ್ಕ್ರಿಪ್ಟ್ ಅನ್ನು ನಾಟಕ/ ನೃತ್ಯ ನಾಟಕ/ಮೈಮ್ ರೂಪದಲ್ಲಿ ಪ್ರಸ್ತುತಪಡಿಸಿ, ವಿವಿಧ ಪ್ರದರ್ಶನ ಕಲೆಗಳನ್ನು ಅನ್ವೇಷಿಸುವುದು.

**ಅಗತ್ಯ ಸಾಮಗ್ರಿಗಳು**

- ಪೆನ್
- ಪೇಪರ್
- ಸ್ಕ್ರಿಪ್ಟ್
- ವೇಷಭೂಷಣಗಳು
- ರಂಗ ಪರಿಕರಗಳು

**ಶಿಕ್ಷಕರಿಗೆ ಸೂಚನೆಗಳು**

- ಚಟುವಟಿಕೆಯ ಯೋಜನೆಯನ್ನು ಅಭಿವೃದ್ಧಿಪಡಿಸಿ
- ಚಟುವಟಿಕೆ ಉದ್ದೇಶ ಮತ್ತು ಸಿದ್ಧತೆಯ ಕುರಿತು ವಿದ್ಯಾರ್ಥಿಗಳಿಗೆ ಸಂಕ್ಷಿಪ್ತವಾಗಿ ತಿಳಿಸಿ
- ಕಾಲ್ಪನಿಕ ಕಥೆಗಳ ದೃಶ್ಯಗಳ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸಿ
- ವಿದ್ಯಾರ್ಥಿಗಳಿಗೆ ಸ್ಕ್ರಿಪ್ಟ್ ಬರೆಯಲು ಹೇಳಿ ಮತ್ತು ಸ್ಕ್ರಿಪ್ಟ್ ನಲ್ಲಿ ಬರುವ ಪ್ರತಿಯೊಂದು ಪಾತ್ರಗಳನ್ನು ನಿಗದಿಪಡಿಸಿ
- ಸ್ಕ್ರಿಪ್ಟ್ ಸಿದ್ದಪಡಿಸಲು ಮತ್ತು ನಾಟಕವನ್ನು ಅಭ್ಯಾಸ ಮಾಡಲು ವಿದ್ಯಾರ್ಥಿಗಳಿಗೆ ಸಮಯ ನೀಡುವುದು.
- ತರಗತಿಯಲ್ಲಿ ವೇಷಭೂಷಣಗಳೊಂದಿಗೆ ಅಭಿನಯಿಸಲು ಹೇಳುವುದು.
- ವರದಿಯನ್ನು ಪ್ರಾಂಶುಪಾಲರು ಅಥವಾ ಮುಖ್ಯೋಪಾಧ್ಯಾಯರಿಗೆ ಸಲ್ಲಿಸುವುದು.

**ವಿದ್ಯಾರ್ಥಿಗಳಿಗೆ ಸೂಚನೆಗಳು**

- ಶಿಕ್ಷಕ ಅಥವಾ ಬೋಧಕರ ಸೂಚನೆಗಳನ್ನು ಅನುಸರಿಸಿ
- ತರಗತಿಗಳಲ್ಲಿ ಶಿಸ್ತು ಕಾಪಾಡಿ
- ಪ್ಲೇ- ಸ್ಕ್ರಿಪ್ಟ್ ಅನ್ನು ಸಂವಹನ ಮಾಡಿ ಮತ್ತು ಅಭಿವೃದ್ಧಿಪಡಿಸಿ
- ಕಾಲ್ಪನಿಕ ದೃಶ್ಯ (ಫ್ಯಾಂಟಸಿ ಆಕ್ಟ್) ವನ್ನು ಅಭ್ಯಾಸ ಮಾಡಿ
- ವಿದ್ಯಾರ್ಥಿಗಳು ನೃತ್ಯ/ನಾಟಕ/ಮೈಮ್ ಗಳನ್ನು ಯಾವುದೇ ಅಡೆತಡೆಗಳನ್ನು ಮಾಡದೇ ಗಮನವಿಟ್ಟು ವೀಕ್ಷಿಸಿ.

## ವಿಧಾನ

- ಚಟುವಟಿಕೆಯ ಬಗ್ಗೆ ವಿದ್ಯಾರ್ಥಿಗಳಿಗೆ ಮುಂಚಿತವಾಗಿ ತಿಳಿಸುವುದು.
- ಚಟುವಟಿಕೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ವಿವರಿಸುವುದು.
- ಕಾಲ್ಪನಿಕ ಕಥೆಯಿಂದ ದೃಶ್ಯಗಳನ್ನು ಆಯ್ಕೆ ಮಾಡಿ ಮತ್ತು ಪಾತ್ರಗಳನ್ನು ನಿಗದಿಪಡಿಸುವುದು.
- ಸ್ಕ್ರಿಪ್ಟ್ ಬರೆಯುವುದು
- ವೇಷಭೂಷಣ ಮತ್ತು ರಂಗ ಪರಿಕರಗಳನ್ನು ತಯಾರಿಸುವುದು.
- ಸಂಭಾಷಣೆಗಳನ್ನು ಅಭ್ಯಾಸ ಮಾಡುವುದು.
- ದೃಶ್ಯವನ್ನು ಪ್ರಸ್ತುತಪಡಿಸುವುದು.
- ಚಟುವಟಿಕೆಯ ಸಮಯದಲ್ಲಿ ವಿದ್ಯಾರ್ಥಿಗಳೊಂದಿಗೆ ಅವರ ಅವಲೋಕನಗಳು ಮತ್ತು ಕಲಿಕೆಯ ಬಗ್ಗೆ ಕುರಿತು ಚರ್ಚಿಸುವುದು.
- ವರದಿಯನ್ನು ತಯಾರಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.

## ಮೌಲ್ಯಮಾಪನ

ಪ್ರತಿಯೊಂದು ಚಟುವಟಿಕೆಯು ಈ ಕೆಳಗಿನ ಮಾನದಂಡಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡುವುದು.

- ವೇಷಭೂಷಣಗಳು ಮತ್ತು ರಂಗ ಪರಿಕರಗಳು
- ಪ್ರಸ್ತುತಿ
- ಭಾಷಾ ಸಾಮರ್ಥ್ಯ
- ಗುಂಪು ಚಟುವಟಿಕೆ
- ಅಭಿನಯ

## ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು

ವೀಕ್ಷಣೆ, ವಿಶ್ಲೇಷಣೆ, ವ್ಯಾಖ್ಯಾನ, ವರದಿಗಳನ್ನು ಬರೆಯುವ ಕೌಶಲಗಳನ್ನು ಅಭಿವೃದ್ಧಿಪಡಿಸುವ ಮೂಲಕ ಅವರು ತಮ್ಮ ಆಸಕ್ತಿಗೆ ಅನುಗುಣವಾಗಿ ಭವಿಷ್ಯದಲ್ಲಿ ಈ ಕೆಳಗಿನ ವೃತ್ತಿಗಳನ್ನು ಅನುಸರಿಸಬಹುದು ಎಂದು ಮಕ್ಕಳಿಗೆ ವಿವರಿಸುವುದು.

- ವಾದ್ಯಗಾರ
- ಕಲಾವಿದ
- ಕಥೆಗಾರ
- ನಾಟಕ ನಿರ್ದೇಶಕ
- ಸಂಗೀತ ಸಂಯೋಜಕ
- ಶಬ್ದ ತಂತ್ರಜ್ಞ (ಸೌಂಡ್ ಇಂಜಿನಿಯರ್)

**ಚಟುವಟಿಕೆ: 32**

| ರಾಷ್ಟ್ರೀಯ ಸ್ಮಾರಕ 'ಏಕತೆ ಪ್ರತಿಮೆ'ಗೆ ಭೇಟಿ ನೀಡಿ | |
|---|---|
| ಚಟುವಟಿಕೆಯ ವಿಧ | ಹೊರಾಂಗಣ |
| ಬೇಕಾಗುವ ಅವಧಿ | 4 ಗಂಟೆಗಳು |
| ಅಭಿವೃದ್ಧಿಪಡಿಸ ಬೇಕಾದ ಕೌಶಲಗಳು | ರಾಷ್ಟದ ಇತಿಹಾಸ ಮತ್ತು ಸ್ಮಾರಕಗಳ ಬಗ್ಗೆ ಅರಿವು, ವೀಕ್ಷಣಾ ಕೌಶಲಗಳು, ಸಂವಹನ ಕೌಶಲಗಳು, ಇತ್ಯಾದಿ |



**ಕಲಿಕಾ ಫಲಗಳು:**

- ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಐತಿಹಾಸಿಕ ಮಹತ್ವವನ್ನು ಅಥವಾ ನೀವು ಭೇಟಿ ನೀಡುತ್ತಿರುವ ಸ್ಮಾರಕವನ್ನು ಅರ್ಥಮಾಡಿಕೊಳ್ಳಿ.
- ಏಕತೆಯ ಪ್ರತಿಮೆ ಅಥವಾ ನೀವು ಭೇಟಿ ನೀಡುತ್ತಿರುವ ಸ್ಮಾರಕದ ಪ್ರಮುಖ ಲಕ್ಷಣಗಳನ್ನು ಚರ್ಚಿಸಿ.
- ರಾಷ್ಟೀಯ ಹೆಗ್ಗುರುತು ಮತ್ತು ಸಮಗ್ರತೆಯನ್ನು ರೂಪಿಸುವಲ್ಲಿ ಸ್ಮಾರಕಗಳ ಪಾತ್ರವನ್ನು ಅರ್ಥಮಾಡಿಕೊಳ್ಳಿ.
- ಸ್ಮಾರಕದ ವಿಶಿಷ್ಟ ಕಲಾಕೃತಿ ಮತ್ತು ವಾಸ್ತುಶಿಲ್ಪವನ್ನು ವಿವರಿಸಿ.
- ಬಳಸಿದ ಆಡಿಯೋ/ದೃಶ್ಯ ತಂತ್ರಜ್ಞಾನಗಳು ಯಾವುದಾದರೂ ಇದ್ದರೆ ಅವುಗಳನ್ನು ಗುರುತಿಸಿ ಮತ್ತು ಚರ್ಚಿಸಿ.

**ಅಗತ್ಯ ಪರಿಕರಗಳು:**

- ನೋಟ್ ಪುಸ್ತಕ ಮತ್ತು ಪೆನ್
- ಕ್ಯಾಪ್
- ಆರಾಮದಾಯಕ ಪಾದರಕ್ಷೆಗಳು

**ಶಿಕ್ಷಕರಿಗೆ ಸೂಚನೆಗಳು:**

- ಏಕತೆಯ ಪ್ರತಿಮೆಯಂತಹ ರಾಷ್ಟೀಯ ಸ್ಮಾರಕವನ್ನು ಆಯ್ಕೆಮಾಡಿ. ಕೆಂಪು ಕೋಟೆ, ಝಾನ್ಸಿ ಕೋಟೆ ಇತ್ಯಾದಿಗಳಿಗೆ ಭೇಟಿ ನೀಡುವುದು.
- ಸ್ಥಳ ಭೇಟಿಯ ಬಗ್ಗೆ ಶೈಕ್ಷಣಿಕ ಸಂಯೋಜಕರನ್ನು ಸಂಪರ್ಕಿಸಿ ಮತ್ತು ಭೇಟಿಯ ದಿನಾಂಕ ಮತ್ತು ಸಮಯವನ್ನು ವ್ಯವಸ್ಥೆಗೊಳಿಸಿ ಭೇಟಿಯ ಮೊದಲು ವಿಳಾಸಗಳು, ನಿರ್ದೇಶನಗಳು, ಸಂಪರ್ಕ ವ್ಯಕ್ತಿಗಳ ಫೋನ್ ಸಂಖ್ಯೆಗಳು ಮತ್ತು ಇಮೇಲ್ ವಿಳಾಸಗಳನ್ನು ರೆಕಾರ್ಡ್ ಮಾಡುವುದು.
- ಚಟುವಟಿಕಾ ಯೋಜನೆಯನ್ನು ಅಭಿವೃದ್ಧಿಪಡಿಸುವುದು.
- ಫೀಲ್ಡ್ ಟ್ರಿಪ್‌ನ ಪ್ರಮುಖ ವೈಶಿಷ್ಟ್ಯಗಳೊಂದಿಗೆ ಪರಿಚಿತರಾಗಲು ಪೂರ್ವ ಭೇಟಿಯನ್ನು ನಡೆಸಿ ಪೋಸ್ಟ್‌ಕಾರ್ಡ್‌ಗಳು ಮತ್ತು ಪೋಸ್ಟರ್‌ಗಳನ್ನು ಖರೀದಿಸುವುದು.
- ಚಟುವಟಿಕೆಯ ಉದ್ದೇಶ ಮತ್ತು ಸಿದ್ಧತೆಗಾಗಿ ವಿದ್ಯಾರ್ಥಿಗೆ ಸಂಕ್ಷಿಪ್ತವಾಗಿ ತಿಳಿಸುವುದು.
- ಕಚ್ಚಾ ಸಾಮಗ್ರಿ, ಸಾರಿಗೆ ಇತ್ಯಾದಿ ಚಟುವಟಿಕೆಗಳಿಗೆ ಅಗತ್ಯ ವ್ಯವಸ್ಥೆಗಳನ್ನು ಮಾಡುವುದು.
- ಚಟುವಟಿಕೆಯ ಉದ್ದೇಶ ಮತ್ತು ಸಿದ್ಧತೆಯ ಬಗ್ಗೆ ಪೋಷಕರಿಗೆ ತಿಳಿಸುವುದು.
- ಚಟುವಟಿಕೆಯ ವರದಿಯನ್ನು ಪ್ರಾಂಶುಪಾಲರು/ಮುಖ್ಯೋಪಾಧ್ಯಾಯರಿಗೆ ಸಲ್ಲಿಸುವುದು.

**ವಿದ್ಯಾರ್ಥಿಗಳಿಗೆ ಸೂಚನೆಗಳು:**



- ಶಿಕ್ಷಕರ, ಮಾರ್ಗದರ್ಶಿ ಅಥವಾ ಬೋಧಕರ ಸೂಚನೆಗಳನ್ನು ಅನುಸರಿಸಿ.
- ಶಿಸ್ತನ್ನು ಕಾಪಾಡಿ.
- ಅಧಿಕಾರಿಗಳು/ಮಾರ್ಗದರ್ಶಕರು/ಬೋಧಕರಿಂದ ಪ್ರಶ್ನೆಗಳನ್ನು ಕೇಳಿ ಮತ್ತು ಭೇಟಿಯ ಸಮಯದಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಪರಿಶೀಲಿಸಿ.
- ಕ್ಷೇತ್ರ ಪ್ರವಾಸದ ಉದ್ದೇಶ ಮತ್ತು ಪ್ರಸ್ತುತ ಅಧ್ಯಯನ ಘಟಕದೊಂದಿಗೆ ಅದು ಹೇಗೆ ಸಂಬಂಧಿಸಿದೆ ಎಂಬುದನ್ನು ಚರ್ಚಿಸಿ.
- ನಿಮ್ಮ ಸ್ನೇಹಿತರೊಂದಿಗೆ ಚರ್ಚಿಸಿ ಮತ್ತು ಭೇಟಿಗೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ರಚನೆ ಮಾಡಿ.
- ಭೇಟಿಯ ಸಮಯದಲ್ಲಿ ಪರಿಗಣಿಸಬೇಕಾದ ಸುರಕ್ಷತಾ ಕ್ರಮಗಳನ್ನು ಅರ್ಥಮಾಡಿಕೊಳ್ಳಿ.
- ಯಾವುದೇ ರಾಷ್ಟ್ರೀಯ ಸ್ಮಾರಕಕ್ಕೆ ಭೇಟಿ ನೀಡುವಾಗ ಅನುಸರಿಸಬೇಕಾದ ನಿಯಮಗಳು ಮತ್ತು ನಿಬಂಧನೆಗಳನ್ನು ಓದಿತಿಳಿಯಿರಿ.

**ವಿಧಾನ:**

- ಚಟುವಟಿಕೆಯ ಬಗ್ಗೆ ವಿದ್ಯಾರ್ಥಿಗಳಿಗೆ ಮುಂಚಿತವಾಗಿ ತಿಳಿಸುವುದು.
- ಚಟುವಟಿಕೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ವಿವರಿಸುವುದು.
- ನಿಗದಿತ ಸ್ಥಳಕ್ಕೆ ಭೇಟಿ ನೀಡುವುದು.
- ಪ್ರಶ್ನೆಗಳನ್ನು ಕೇಳಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.
- ಪರಿಣಿತರು/ಪ್ರವಾಸ ಮಾರ್ಗದರ್ಶಕರೊಂದಿಗೆ ಸಂವಾದಿಸಿ ಮತ್ತು ಚರ್ಚಿಸಿ ನೀವು ವಿವಿಧ ಪ್ರಶ್ನೆಗಳನ್ನು ಕೇಳಬಹುದು ಅಥವಾ ಭೇಟಿ ನೀಡುತ್ತಿರುವ ಆಯಾ ಸ್ಮಾರಕಕ್ಕಾಗಿ ನೀವು ರಚಿಸಿರುವ ಪ್ರಶ್ನೆಗಳನ್ನು ಕೇಳಬಹುದು.
- ಕ್ಷೇತ್ರ ಭೇಟಿಯ ವರದಿಯನ್ನು ಚರ್ಚಿಸಿ ಸಿದ್ಧಪಡಿಸುವುದು.
- ಚಟುವಟಿಕೆಯ ಸಮಯದಲ್ಲಿ ಅವರ ಅವಲೋಕನಗಳು ಮತ್ತು ಕಲಿಕೆಗಳ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು.
- ವರದಿಯನ್ನು ತಯಾರಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.

**ಮೌಲ್ಯಮಾಪನ:**

ಪ್ರತಿಯೊಂದು ಚಟುವಟಿಕೆಯನ್ನು ಈ ಕೆಳಗಿನ ನಿಯತಾಂಕಗಳ ಮೇಲೆ ಮೌಲ್ಯಮಾಪನ ಮಾಡಬೇಕಾಗುತ್ತದೆ:

- ಆಸಕ್ತಿ
- ಭಾಗವಹಿಸುವಿಕೆ
- ತಂಡದ ಕಾರ್ಯಕಲಾಪ
- ಅಂತರ್ ವ್ಯಕ್ತಿ ಕೌಶಲಗಳು
- ವರದಿ ತಯಾರಿಕೆ
- ಪ್ರಶ್ನಿಸುವ ಕೌಶಲ

**ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು:**

ವೀಕ್ಷಣೆ, ವಿಶ್ಲೇಷಣೆ, ವ್ಯಾಖ್ಯಾನ, ವರದಿಗಳನ್ನು ಬರೆಯುವ ಈ ಕೌಶಲಗಳನ್ನು ಅಭಿವೃದ್ಧಿಪಡಿಸುವ ಮೂಲಕ, ಅವರು ತಮ್ಮ ಆಸಕ್ತಿಗೆ ಅನುಗುಣವಾಗಿ ಭವಿಷ್ಯದಲ್ಲಿ ಈ ಕೆಳಗಿನ ವೃತ್ತಿಗಳನ್ನು ಅನುಸರಿಸಬಹುದು ಎಂದು ಮಕ್ಕಳಿಗೆ ವಿವರಿಸಬಹುದು.

- ಪ್ರವಾಸ ಮಾರ್ಗದರ್ಶಕರು
- ಭದ್ರತಾ ಸಿಬ್ಬಂದಿ
- ಮ್ಯೂಸಿಯಂ/ಆರ್ಟ್ ಗ್ಯಾಲರಿ ಮೇಲ್ವಿಚಾರಕ
- ಸೈಟ್ ಮ್ಯಾನೇಜರ್/ ಸಂಘಟಕರು
- ಸಂಶೋಧಕ

**ಚಟುವಟಿಕೆ: 33**

| ಐತಿಹಾಸಿಕ ಸ್ಮಾರಕ ಸಾಂಚಿ ಸ್ತೂಪಕ್ಕೆ ಭೇಟಿ | |
|---|---|
| ಚಟುವಟಿಕೆಯ ವಿಧ | ಹೊರಾಂಗಣ |
| ಬೇಕಾಗುವ ಅವಧಿ | 4 ಗಂಟೆಗಳು |
| ಅಭಿವೃದ್ಧಿಪಡಿಸ ಬೇಕಾದ ಕೌಶಲಗಳು | ಇತಿಹಾಸ ಮತ್ತು ಭಾರತೀಯ ಸಂಸ್ಕೃತಿಯ ಬಹುಮುಖ ಆಯಾಮವನ್ನು ಅರ್ಥಮಾಡಿಕೊಳ್ಳುವುದು, ವೀಕ್ಷಣಾ ಕೌಶಲಗಳು, ಸಂವಹನ ಕೌಶಲಗಳು ಇತ್ಯಾದಿ. |



**ಕಲಿಕಾ ಫಲಗಳು:**

- ಸಾಂಚಿ ಸ್ತೂಪದ ಐತಿಹಾಸಿಕ ಮಹತ್ವವನ್ನು ಅರ್ಥಮಾಡಿಕೊಳ್ಳಿ.
- ಸಾಂಚಿ ಸ್ತೂಪದ ವೈಶಿಷ್ಟ್ಯಗಳನ್ನು ಚರ್ಚಿಸಿ.
- ಸಾಂಚಿ ಸ್ತೂಪದ ವಿಶಿಷ್ಟ ಕಲಾಕೃತಿ ಮತ್ತು ವಾಸ್ತುಶಿಲ್ಪವನ್ನು ವಿವರಿಸಿ.
- ಭಾರತದ ಪ್ರಾಚೀನ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಿ.

**ಅಗತ್ಯ ಪರಿಕರಗಳು:**

- ನೋಟ್ ಪುಸ್ತಕ ಮತ್ತು ಪೆನ್.
- ಕ್ಯಾಪ್.
- ಆರಾಮದಾಯಕ ಪಾದರಕ್ಷೆಗಳು.

**ಶಿಕ್ಷಕರಿಗೆ ಸೂಚನೆಗಳು:**

- ಭೇಟಿಗಾಗಿ ಯೋಜನೆಯನ್ನು ಅಭಿವೃದ್ಧಿಪಡಿಸುವುದು.
- ನಿಧಿ, ಕಚ್ಚಾ ಸಾಮಗ್ರಿ, ಸಾರಿಗೆ ಇತ್ಯಾದಿ ಚಟುವಟಿಕೆಗಳಿಗೆ ಅಗತ್ಯ ವ್ಯವಸ್ಥೆಗಳನ್ನು ಮಾಡುವುದು.
- ಚಟುವಟಿಕೆಯ ಉದ್ದೇಶ ಮತ್ತು ಸಿದ್ಧತೆಯನ್ನು ಪೋಷಕರಿಗೆ ತಿಳಿಸುವುದು.
- ಭೇಟಿಯ ಉದ್ದೇಶದ ಬಗ್ಗೆ ವಿದ್ಯಾರ್ಥಿಗಳಿಗೆ ಸಂಕ್ಷಿಪ್ತವಾಗಿ ತಿಳಿಸುವುದು.
- ಸಾಧ್ಯವಾದರೆ, ಮಾರ್ಗದರ್ಶಕರು ಪ್ರವಾಸಕ್ಕಾಗಿ ಭೇಟಿ ನೀಡುವ ಸ್ಥಳದಲ್ಲಿ ಮಾರ್ಗದರ್ಶಕರನ್ನು ಸಂಪರ್ಕಿಸುವುದು.
- ಚಟುವಟಿಕೆಯ ವರದಿಯನ್ನು ಪ್ರಾಂಶುಪಾಲರು/ಮುಖ್ಯೋಪಾಧ್ಯಾಯರಿಗೆ ಸಲ್ಲಿಸುವುದು.

**ವಿದ್ಯಾರ್ಥಿಗಳಿಗೆ ಸೂಚನೆಗಳು:**

- ಶಿಕ್ಷಕ, ಮಾರ್ಗದರ್ಶಕ ಅಥವಾ ಬೋಧಕರ ಸೂಚನೆಗಳನ್ನು ಅನುಸರಿಸಿ.
- ಶಿಸ್ತನ್ನು ಕಾಪಾಡಿ.
- ಅಧಿಕಾರಿಗಳು/ಮಾರ್ಗದರ್ಶಕರು/ಬೋಧಕರಿಂದ ಪ್ರಶ್ನೆಗಳನ್ನು ಕೇಳಿ ಮತ್ತು ಮಾಹಿತಿಯನ್ನು ಸಂಗ್ರಹಿಸಿ.
- ಭೇಟಿಯ ಸಮಯದಲ್ಲಿ ಮಾಹಿತಿಯನ್ನು ಸಂಗ್ರಹಿಸಿ.
- ಶಿಕ್ಷಕರು ನೀಡಿದ ವಿವರಣೆ ಪ್ರಕಾರ ಸಿದ್ಧತೆಗಳನ್ನು ಮಾಡಿ.

**ವಿಧಾನ:**



- ಚಟುವಟಿಕೆಯ ಬಗ್ಗೆ ವಿದ್ಯಾರ್ಥಿಗಳಿಗೆ ಮುಂಚಿತವಾಗಿ ತಿಳಿಸುವುದು.
- ಚಟುವಟಿಕೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ವಿವರಿಸುವುದು.
- ನಿಗದಿತ ಪರಂಪರೆಯ ತಾಣಕ್ಕೆ ಭೇಟಿ ನೀಡುವುದು.
- ಐತಿಹಾಸಿಕ ಸ್ಥಳ/ಸ್ಮಾರಕದ ಮಾರ್ಗದರ್ಶಕರನ್ನು ಭೇಟಿ ಮಾಡಿ ಮತ್ತು ನೀವು ಸಿದ್ಧಪಡಿಸಿದ ಪ್ರಶ್ನೆಗಳನ್ನು ಕೇಳುವುದು.
- ಪ್ರಶ್ನೆಗಳನ್ನು ಕೇಳಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.
- ಚಟುವಟಿಕೆಯ ಸಮಯದಲ್ಲಿ ಅವರ ಅವಲೋಕನಗಳು ಮತ್ತು ಕಲಿಕೆಗಳ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು.
- ವರದಿಯನ್ನು ತಯಾರಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.

**ಮೌಲ್ಯಮಾಪನ:**

ಪ್ರತಿಯೊಂದು ಚಟುವಟಿಕೆಯನ್ನು ಈ ಕೆಳಗಿನ ಮಾನದಂಡಗಳ ಮೇಲೆ ಮೌಲ್ಯಮಾಪನ ಮಾಡಬೇಕಾಗುತ್ತದೆ

- ಆಸಕ್ತಿ
- ಭಾಗವಹಿಸುವಿಕೆ
- ತಂಡದ ಕಾರ್ಯಕಲಾಪ
- ಅಂತರ್ ವ್ಯಕ್ತಿ ಕೌಶಲಗಳು
- ವರದಿ ತಯಾರಿಕೆ
- ಪ್ರಶ್ನಿಸುವ ಕೌಶಲ

**ವೃತ್ತಿಪರ ಅವಕಾಶಗಳಿಗೆ ತೆರೆದುಕೊಳ್ಳುವುದು:**

ವೀಕ್ಷಣೆ, ವಿಶ್ಲೇಷಣೆ, ವ್ಯಾಖ್ಯಾನ, ವರದಿಗಳನ್ನು ಬರೆಯುವ ಈ ಕೌಶಲಗಳನ್ನು ಅಭಿವೃದ್ಧಿಪಡಿಸುವ ಮೂಲಕ, ಅವರು ತಮ್ಮ ಆಸಕ್ತಿಗೆ ಅನುಗುಣವಾಗಿ ಭವಿಷ್ಯದಲ್ಲಿ ಈ ಕೆಳಗಿನ ವೃತ್ತಿಗಳನ್ನು ಮುಂದುವರಿಸಬಹುದು ಎಂದು ಮಕ್ಕಳಿಗೆ ವಿವರಿಸಬಹುದು.

- ಪುರಾತತ್ವ ಶಾಸ್ತ್ರಜ್ಞ
- ಮ್ಯೂಸಿಯಂ/ಆರ್ಟ್ ಗ್ಯಾಲರಿ ಮೇಲ್ವಿಚಾರಕ
- ಪ್ರವಾಸ ಮಾರ್ಗದರ್ಶಕ
- ತನಿಖಾಧಿಕಾರಿ

# List of Experts

T.S Joshi, Director, GCERT, Gujarat

Yogita Deshmukh, Research Associate, GCERT, Gujarat

Jayesh Sutariya, Lecturer, DIET, Amreli, Gujarat

Vinod Adhiyol, Senior Lecturer, DIET, Mahesana, Gujarat

Rasmirekha Sethy, Associate Professor (Education), RIE, Bhuvneshwar, Odisha

Akhileshwar Mishra, Headmaster, Demonstration Multipurpose School, RIE, Bhuvneshwar, Odisha

Sartaj Singh, PGT (History), Demonstration Multipurpose School, RIE, Ajmer, Rajasthan

Ritu Rathore, Vocational Teacher (Beauty and wellness), Demonstration Multipurpose School, Ajmer, Rajasthan

Premlatha, Founder, Mahatma Schools, Madurai, Tamil Nadu

S. Meena Karuppiah, Principal and team, Mahatma Global Gateway School, Madurai, Tamil Nadu

Suniti Sanwal, Professor, DEE, NCERT, New Delhi

Ritu Pallavi, Principal, Kendriya Vidyalaya No.3, Bhopal, Madhya Pradesh

J. K. Mishra, Principal, Jawahar Navodaya Vidyalaya, Raisen, Madhya Pradesh

Anil Kumar, Professor (Retd.), NITTTER, Bhopal, Madhya Pradesh

Vinay Swarup Mehrotra, Professor, PSSCIVE, Bhopal

Pinki Khanna, Professor, PSSCIVE, Bhopal

P. Veeriah, Professor, PSSCIVE, Bhopal

R. K. Pathak. Professor & Head, DAAH, PSSCIVE, Bhopal

Rajneesh, Assistant Librarian, PSSCIVE, Bhopal

Surendra Kumar, Senior Research Associate, DET, PSSCIVE, Bhopal

Pooja Sharma, Assistant Professor, DAAH, PSSCIVE, Bhopal

Niraj Bhandari, Assistant Professor, DET, PSSCIVE Bhopal

Gunjan Kaushal, Junior Project Fellow, DET, PSSCIVE, Bhopal

Deepankar Kavathekar, Assistant Editor, CDEC, PSSCIVE, Bhopal

## List of Reviewers

Ranjana Arora, Head, DCS, NCERT, New Delhi

Indrani Bhaduri, Head, ESD & NAS, NCERT, New Delhi

Gauri Shrivastava, Head, DESS, NCERT, New Delhi

Jyotsna Tiwari, Head, DEAA, NCERT New Delhi

Vinay Kumar Singh, Head, DEGSN, NCERT, New Delhi

Suniti Sanwal, Head, DEE, NCERT, New Delhi

Sunita Farkaya, Head, DESM, NCERT, New Delhi

Sameer Daniel, Chief Consultant, Ministry of Education

## Programme Coordinator

Saurabh Prakash

Professor

Department of Engineering & Technology

PSS Central Institute of Vocational Education, NCERT, Bhopal

E-mail: s.prakash@psscive.ac.in

## List of Credits

| Sl. No. | Page no., Image | Credit/Link |
|---|---|---|
| 1. | Page no. 1, Image 1 | https://shorturl.at/x8lxt |
| 2. | Page no. 1, Image 2 | https://bit.ly/3GEyRhM |
| 3. | Page no. 2, Image 1 | https://bit.ly/3GiflaK |
| 4. | Page no. 2, Image 2 | http://bit.ly/3vGanhM |
| 5. | Page no. 2, Image 3 | DET, PSSCIVE Bhopal |
| 6. | Page no. 3, Image 1 | Creative Common License |
| 7. | Page no. 4, Image 1 | https://shorturl.at/DX2BQ |
| 8. | Page no. 4, Image 2 | https://shorturl.at/gz6zq |
| 9. | Page no. 5, Image 1 | https://bit.ly/3GiflaK |
| 10. | Page no. 5, Image 2 | https://shorturl.at/f7haF |
| 11. | Page no. 5, Image 3 | https://bit.ly/3Qj4H6N |
| 12. | Page no. 5, Image 4 | https://bit.ly/3QgJH0w |
| 13. | Page no. 6, Image 1 | https://shorturl.at/ZOFLX |
| 14. | Page no. 10, Image 1 | https://rb.gy/6ddml5 |
| 15. | Page no. 10, Image 2 | https://rb.gy/ial7aa |
| 16. | Page no. 11, Image 1 | https://rb.gy/c8rqsc |
| 17. | Page no. 11, Image 2 | https://bit.ly/3CrdCxo |
| 18. | Page no. 14, Image 1 | https://rb.gy/u06w3k |
| 19. | Page no. 14, Image 2 | https://rb.gy/gw9f74 |
| 20. | Page no. 15, Image 1 | https://bit.ly/3jT7Fmv |
| 21. | Page no. 16, Image 1 | https://bit.ly/3IscpJY |
| 22. | Page no. 18, Image 1 | https://bit.ly/3IscpJY |
| 23. | Page no. 20, Image 1 | https://bit.ly/4bC4K6Y |
| 24. | Page no. 22, Image 1 | https://bit.ly/3XQg4ZW |
| 25. | Page no. 24, Image 1 | Creative Common License |
| 26. | Page no. 26, Image 1 | https://tinyurl.com/2mkhncaf |
| 27. | Page no. 28, Image 1 | https://tinyurl.com/mpeze834 |
| 28. | Page no. 30, Image 1 | https://tinyurl.com/4k3zm74m |
| 29. | Page no. 32, Image 1 | Creative Common License |
| 30. | Page no. 34, Image 1 | https://bit.ly/3QiF99L |
| 31. | Page no. 35, Image 1 | https://tinyurl.com/ytcup5xm |
| 32. | Page no. 37, Image 1 | PSSCIVE, Bhopal |
| 33. | Page no. 38, Image 1 | https://tinyurl.com/48dey3jf |
| 34. | Page no. 41, Image 1 | https://tinyurl.com/43e9te8b |
| 35. | Page no. 43, Image 1 | https://tinyurl.com/y58y93ky |
| 36. | Page no. 45, Image 1 | https://tinyurl.com/vxtyhvwz |
| 37. | Page no. 47, Image 1 | https://tinyurl.com/5n8v557x |
| 38. | Page no. 49, Image 1 | https://tinyurl.com/h7wy4w4e **Sl. No.** |

| | | |
|---|---|---|
| 39. | Page no. 50, | Image 1 Creative Common License |
| 40. | Page no. 51, | Image 1 https://tinyurl.com/mw9hawxc |
| 41. | Page no. 53, | Image 1 https://bit.ly/3zqZtl3 |
| 42. | Page no. 55, | Image 1 https://bit.ly/4bK60oF |
| 43. | Page no. 57, | Image 1 https://bit.ly/4eNOLW0 |
| 44. | Page no. 59, | Image 1 https://bit.ly/3W5rCXR |
| 45. | Page no. 61, | Image 1 https://bit.ly/3W92mzK |
| 46. | Page no. 63, | Image 1 Creative Common License |
| 47. | Page no. 66, | Image 1 https://bit.ly/3WZV3s8 |
| 48. | Page no. 68, | Image 1 Creative Common License |
| 49. | Page no. 70, | Image 1 Creative Common License |
| 50. | Page no. 72, | Image 1 https://tinyurl.com/yckeahb8 |
| 51. | Page no. 74, | Image 1 https://bit.ly/3GlJLYt |
| 52. | Page no. 76, | Image 1 Creative Common License |
| 53. | Page no. 78, | Image 1 https://bit.ly/3RRGBSG |
| 54. | Page no. 79, | Image 1 https://bit.ly/3VOpqmb |
| 54. | Page no. 81, | Image 1 https://tinyurl.com/ya7uwuz6 |
| 55. | Page no. 82, | Image 1 https://bit.ly/4bog1re |

| Programme on YouTube channel of PSSCIVE | | | |
|---|---|---|---|
| **S.No** | **Title of Programme** | **Link** | **QR Code** |
| 1. | विध्यालय में 10 बस्ता रहित दिवसों के क्रियान्वयन हेतु मार्गदर्शिका-परिचर्चा | https://youtu.be/-HdH9GlN-zjc?si=f9iviletyE0Bjxt7 | |
| 2. | Guideline for Implementation of 10 Bag-less Days in School-Talk Show | https://youtu.be/SvoL4d-8Jd34?si=-AnNGit3fyXx-NuZE | |
| 3. | Best Out of Waste - Vocational Express | https://youtu.be/CmSUIRH-DIjc?si=pLx5s6pHK-s_TQgh | |



विद्यया ऽमृतमश्नुते

एन सी ई आर टी
NCERT

राष्ट्रीय शैक्षिक अनुसंधान और प्रशिक्षण परिषद्
NATIONAL COUNCIL OF EDUCATIONAL RESEARCH AND TRAINING